

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಫೆಬ್ರವರಿ 16 ಭಾನುವಾರ 2025


ಸಂಪುಟ: 45 | ಸಂಚಿಕೆ: 299 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com





ನಿಮ್ಮ ಪತ್ರಗಳು

ಸಂವಿಧಾನಾತ್ಮಕವಾಗಿ ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಸಮಾನರು; ಆದರೆ, ಒಬ್ಬ ಮೊದಲಿಗರಾಗಿರಬಹುದು!

ಮಾನ್ಯರೆ,

ಸಚಿವ ರಾಜಣ್ಣ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಹೇಳಿದ ಮಾತು; 'ಡಿಕೆಶಿ ಸಿಎಂ ಆದರೆ ನಾನು ಅವರ ಕೈಕೆಳಗೆ ಕೆಲಸ ಮಾಡಲು ತಯಾರಿಲ್ಲ'–ಪತ್ರಿಕೆಗಳಲ್ಲಿ ನೋಡಿ ನನಗೆ ಆಶ್ಚರ್ಯವಾಯಿತು. ಪ್ರಜಾಪ್ರಭುತ್ವದಲ್ಲಿ ಈ ರೀತಿಯ ನಡೆ ನಡೆಯುವುದಿಲ್ಲ ಎಂಬುದನ್ನು ರಾಜಣ್ಣ ಅವರು ಅರ್ಥಮಾಡಿಕೊಳ್ಳಬೇಕು.

ಡಿಕೆಶಿ ಅವರ ಕೈಕೆಳಗೆ ಕೆಲಸ ಮಾಡಲು ಇಷ್ಟ ಇಲ್ಲದಿದ್ದರೆ, ಅವರು ರಾಜೀನಾಮೆ ಕೊಟ್ಟು ಹೊರಗೆ ಬರಬಹುದು. ಒಂದು ವೇಳೆ ಡಿಕೆಶಿಯವರು ಮುಖ್ಯಮಂತ್ರಿಯಾದ ಮೇಲೆ ರಾಜಣ್ಣನವರನ್ನು ಮಂತ್ರಿ ಮಂಡಲದಿಂದ ಕೈಬಿಟ್ಟರೆ?

ಅಂದ ಹಾಗೆ ಪ್ರಜಾಪ್ರಭುತ್ವದಲ್ಲಿ ಕೇಂದ್ರದಲ್ಲಿ ಪ್ರಧಾನಮಂತ್ರಿ ಹಾಗೆಯೇ ರಾಜ್ಯದಲ್ಲಿ ಮುಖ್ಯಮಂತ್ರಿ ನಾಯಕತ್ವದಲ್ಲಿ ಮಂತ್ರಿ ಮಂಡಲ ರಚಿಸಲ್ಪಡುತ್ತದೆ. ಅದರರ್ಥ ಮಂತ್ರಿಗಳು, ಪ್ರಧಾನಮಂತ್ರಿ ಅಥವಾ ಮುಖ್ಯಮಂತ್ರಿಯ ಕೈಕೆಳಗೆ ಕೆಲಸ ಮಾಡುವುದೆಂಬುದಲ್ಲ. ಸಂವಿ ಧಾನಾತ್ಮಕವಾದ ವ್ಯವಸ್ಥೆಯಡಿ ಕೆಲಸ ಮಾಡೋದು.

ಈ ರೀತಿ ಮಾತನಾಡುತ್ತಿದ್ದ ಒಬ್ಬ ಜಂಬಕೋರ ಮಂತ್ರಿಗೆ ಪಂಡಿತ್ ಜವಾಹರಲಾಲ್ ನೆಹರೂ ಅವರು ಹೇಳಿದ ಮಾತು ನೆನಪಿಗೆ ಬರುತ್ತದೆ. "In my ministry we are all equals. I am only first among the equals with more responsibility" (ನನ್ನ ಮಂತ್ರಿಮಂಡಲದಲ್ಲಿ ನಾವೆಲ್ಲರೂ ಸರಿ ಸಮಾನರು. ಅವರಲ್ಲಿ ನಾನು ಹೆಚ್ಚು ಜವಾಬ್ದಾರಿಗಳೊಂದಿಗೆ ಮೊದಲಿಗ ಮಾತ್ರ ಅಷ್ಟೆ).

ಪ್ರಜಾಪ್ರಭುತ್ವದ ಈ ರೀತಿಯ ಸೂಕ್ಷ್ಮತೆಯನ್ನು ಅರ್ಥ ಮಾಡಿಕೊಳ್ಳದೆ, ನಾನೇ ಬುದ್ಧಿವಂತ, ನನ್ನನ್ನು ಬಿಟ್ಟರೆ ಮಂತ್ರಿಮಂಡಲ ನಡೆಯುವುದಿಲ್ಲ ಎನ್ನುವ ರೀತಿಯ ನಡೆ ರಾಜಕೀಯದಲ್ಲಿ ಒಳ್ಳೆಯದಲ್ಲ.

–**ಕೆ.ಬಿ.ಗಣಪತಿ,** ಹಿರಿಯ ಪತ್ರಕರ್ತರು.

ಸಿದ್ದರಾಮಯ್ಯ ಅನಿವಾರ್ಯ

● ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ 'ಹೊಸ ಬಾಂಬ್' ● ಇದಕ್ಕೆ ಸಮಾಜ ಕಲ್ಯಾಣ ಸಚಿವ ಮಹದೇವಪ್ಪ, ಕಂಪ್ಲಿ ಶಾಸಕ ಗಣೇಶ್ ಕೋರಸ್ ● ಈ ಮಾತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಬಲವಾದ ರಾಜಕೀಯ ಪ್ರಹಾರ!

ಬೆಂಗಳೂರು, ಫೆ.15(ಕೆಎಂಶಿ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಅಧಿಕಾರಕ್ಕೆ ಬರಬೇಕೆಂದರೆ ಸಿಎಂ ಸಿದ್ದರಾಮಯ್ಯ ನಾಯಕತ್ವದಿಂದ ಮಾತ್ರ ಸಾಧ್ಯ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೊಸಬಾಂಬ್ ಸಿಡಿಸಿದ್ದಾರೆ.





ಸತೀಶ್ ಜಾರಕಿಹೊಳಿ



ಮಹದೇವಪ್ಪ



ಕಂಪ್ಲಿ ಗಣೇಶ್

ಜನರ ಮತ್ತು ಶಾಸಕರ ಬೆಂಬಲ ಇರುವಾಗ ಅವರು ರಾಜಕೀಯ ನಿವೃತ್ತಿ ತೆಗೆದುಕೊಳ್ಳುವುದು ಸರಿಯಲ್ಲ. ಅಂತಹ ಆಲೋಚನೆಯನ್ನೂ ಮಾಡಬಾರದು ಎಂದಿದ್ದಾರೆ. ಇದೇ ಸಂದರ್ಭದಲ್ಲಿ ಮಾತನಾಡಿದ ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ.ಮಹದೇವಪ್ಪ, ಸಿದ್ದರಾಮಯ್ಯ ಮಾಸ್ ಲೀಡರ್. ಅವರ ನಾಯಕತ್ವ ಬೇಡ ಎನ್ನುವವರು ಯಾರು ಎಂದು ಪ್ರಶ್ನಿಸಿದರು. ಉಭಯ ಸಚಿವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಾವೇರಿ ನಿವಾಸದಲ್ಲಿ ಭೇಟಿ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ತಮ್ಮ ನಾಯಕನ ಸಾಮರ್ಥ್ಯವನ್ನು ತಮ್ಮದೇ ಧಾಟಿಯಲ್ಲಿ ಬಣ್ಣಿಸಿದರು. ಹೊಸ ನಾಯಕತ್ವ ಬರುವವರೆಗೂ ಸಿದ್ದರಾಮಯ್ಯ ನಾಯಕತ್ವ ಇರಬೇಕು ಎಂದು ಸಚಿವದ್ವಯರು ಹೇಳುವ ಮೂಲಕ ಮುಖ್ಯಮಂತ್ರಿಗಾದಿ ಮೇಲೆ ಕಣ್ಣಿಟ್ಟಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಲ್ಲಿ ನಾಯಕತ್ವದ ಗುಣ ಇಲ್ಲ ಎಂದು ಪರೋಕ್ಷವಾಗಿ ಅಣಕವಾಡಿದರು. ನಿವೃತ್ತಿ ಘೋಷಿಸಿದರೆ, ಜನರು ಮತ್ತು ಅವರ ಬೆಂಬಲಿಗರು ಅದಕ್ಕೆ ಅವಕಾಶ ಕೊಡುವುದಿಲ್ಲ. ನಮ್ಮ ಪಕ್ಷ ಮತ್ತೆ ಕರ್ನಾಟಕದಲ್ಲಿ ಅಧಿಕಾರಕ್ಕೆ ■ 6ನೇ ಪುಟಕ್ಕೆ



ನೋಂದಣಿ ಆಗಿರದ ಅಕ್ರಮ ಫೈನಾನ್ಸ್ ಕಂಪನಿಗಳು ತಕ್ಷಣ ಬಂದ್ ಆಗಬೇಕು

● ಸಾಲ ವಸೂಲಿಗೆ ರೌಡಿಗಳ ಬಳಕೆ, ಬಲವಂತದ ವಸೂಲಿಗೆ ತಕ್ಷಣ ಬ್ರೇಕ್ ಹಾಕಿ ● ಡಿಸಿ, ಎಸ್‌ಪಿಗಳಿಗೆ ಸಿಎಂ ಸಿದ್ದರಾಮಯ್ಯ ಖಡಕ್ ಸೂಚನೆ

ಬೆಂಗಳೂರು, ಫೆ.15– ನೋಂದಣಿ ಆಗಿರದ ಅಕ್ರಮ ಫೈನಾನ್ಸ್ ಕಂಪನಿಗಳು ತಕ್ಷಣ ಬಂದ್ ಆಗಬೇಕು. ಸಾಲ ವಸೂಲಿಗೆ ರೌಡಿಗಳ ಬಳಕೆ, ಬಲವಂತದ ವಸೂಲಿಗೆ ತಕ್ಷಣ ಬ್ರೇಕ್ ಹಾಕಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದ ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ಮೈಕ್ರೋ ಫೈನಾನ್ಸ್ ಸಂಸ್ಥೆಗಳ ನಿಯಂತ್ರಣ ಕುರಿತಂತೆ ಹೊರಡಿಸಲಾಗಿರುವ ಸುಗ್ರೀವಾಜ್ಞೆಯ ಅನುಷ್ಠಾನ ಸಂಬಂಧ ಮುಖ್ಯಮಂತ್ರಿಗಳು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ಜಿಲ್ಲಾ ರಕ್ಷಣಾಧಿಕಾರಿಗಳ ಜೊತೆ ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿದರು. ಸಾಲ ವಸೂಲಾತಿ ಸಂದರ್ಭದಲ್ಲಿ ಸಾಲ ಪಡೆದವರಿಗೆ ಯಾವುದೇ ಕಿರುಕುಳ ಉಂಟಾಗಬಾರದು ಎಂಬ ಉದ್ದೇಶದಿಂದ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ನಿಯಂತ್ರಣ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ. ಕಾಯ್ದೆಯ ಎಲ್ಲಾ ಅಂಶಗಳನ್ನು ಜಿಲ್ಲೆಗಳಲ್ಲಿ ಕಟ್ಟುನಿಟ್ಟಿನಿಂದ ಜಾರಿಗೊಳಿಸಬೇಕು ಎಂದು ಸೂಚನೆ ನೀಡಿದರು. ಪರವಾನಗಿ ಪಡೆಯದ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಮೇಲೆ ನಿರಂತರ ನಿಗಾ ಇರಿಸಬೇಕು. ಪರವಾನಗಿ ಪಡೆದಿರುವ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಆರ್‌ಬಿಐ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸುವುದನ್ನು ಖಾತ್ರಿಪಡಿಸಬೇಕು. ಬಲವಂತದ ವಸೂಲಾತಿ ಮಾಡುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು. ಎಲ್ಲಾ ಜಿಲ್ಲೆಗಳಲ್ಲಿ ಈಗಾಗಲೇ ಸಹಾಯವಾಣಿ ಪ್ರಾರಂಭಿಸಲು ಸೂಚಿಸಲಾಗಿದ್ದು, ಬಲವಂತದ ಸಾಲ ವಸೂಲಾತಿ ಮಾಡುವ ಪ್ರಕರಣಗಳಲ್ಲಿ ಸ್ವಯಂಪ್ರೇರಿತವಾಗಿ ಮೊಕದ್ದಮೆ ದಾಖಲಿಸಬೇಕು ಎಂದರು. ಸಾಲ ನೀಡುವವರಿಗೆ ತೊಂದರೆ ಉಂಟು ಮಾಡುವ ಯಾವುದೇ ಉದ್ದೇಶದಿಂದ ಈ ಕಾಯ್ದೆಯನ್ನು ಜಾರಿಗೊಳಿಸಿಲ್ಲ. ಆದರೆ ಬಲವಂತದ ವಸೂಲಾತಿ, ಮಾನಹಾನಿ, ಕಿರುಕುಳದ ಮೂಲಕ ಸಾಲ ವಸೂಲಾತಿಯನ್ನು ತಡೆಯುವ ಉದ್ದೇಶದಿಂದ ಜಾರಿಗೆ ತರಲಾಗಿದೆ. ಯಾವುದೇ ಜಿಲ್ಲೆಗಳಲ್ಲಿ ಸಾಲಗಾರರ ಕಿರುಕುಳ ಮುಂದುವರೆದಿರುವುದು ಗಮನಕ್ಕೆ ಬಂದರೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿ ಅವರನ್ನು ■ 6ನೇ ಪುಟಕ್ಕೆ

ಸ್ಟಾರ್ ಆಫ್ ಮೈಸೂರ್ 48



'ಮೈಸೂರು ಮಿತ್ರ'ನ ಸೋದರ ಪತ್ರಿಕೆ 'ಸ್ಟಾರ್ ಆಫ್ ಮೈಸೂರ್' ಇಂದು 47 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ, 48ನೇ ವರ್ಷಕ್ಕೆ ಪದಾರ್ಪಣೆ ಮಾಡುತ್ತಿರುವ ಸಂದರ್ಭದಲ್ಲಿ 72 ಪುಟಗಳ ವರ್ಣರಂಜಿತ ವಿಶೇಷಾಂಕವನ್ನು ಹೊರ ತರಲಾಗಿದೆ.

ಕರ್ನಾಟಕಕ್ಕೆ ಮತ್ತಷ್ಟು ವಂದೇ ಭಾರತ್ ರೈಲು ಸೌಕರ್ಯ

● ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಭರವಸೆ; ಈಗಾಗಲೇ 10 ರೈಲು ಸಂಚರಿಸುತ್ತಿವೆ ● ಈ ಬಾರಿ ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕ ರೈಲ್ವೆಗೆ 7564 ಕೋಟಿ; ಸಬ್ ಅರ್ಬನ್ ರೈಲ್ವೆಗೆ 15,762 ಕೋಟಿ ಅನುದಾನ ● ಅಮೃತ್ ಸ್ಟೇಷನ್ ಯೋಜನೆಯಡಿ 61 ರೈಲು ನಿಲ್ದಾಣ ಆಧುನೀಕರಣ



ರೈಲ್ವೆ ಸಚಿವ ಅಶ್ವಿನಿ ವೈಷ್ಣವ್



ಬೆಂಗಳೂರು, ಫೆ.15(ಕೆಎಂಶಿ)– ಕರ್ನಾಟಕ ರೈಲ್ವೆಗೆ ಕೇಂದ್ರ ಬಜೆಟ್‌ನಲ್ಲಿ 7,564 ಕೋಟಿ ರೂ. ಅನುದಾನ ನೀಡಲಾಗಿದ್ದು, ರಾಜ್ಯದಲ್ಲಿ 1,652 ಕಿ.ಮೀ. ಹೊಸ ರೈಲ್ವೆ ಮಾರ್ಗ ನಿರ್ಮಾಣವಾಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ರಾಜಧಾನಿ ಬೆಂಗಳೂರು ನಗರದ ಮೇಲಿನ ಒತ್ತಡ ಕಡಿಮೆ ಮಾಡಲು ಸಬ್ ಅರ್ಬನ್ ರೈಲ್ವೇ ಯೋಜನೆಗೆ 15,762 ಕೋಟಿ ರೂ. ಕೊಡಲಾಗಿದೆ, 15,611 ಕೋಟಿ ರೂ. ಮೆಟ್ರೋ ಯೋಜನೆಗೆ ನೀಡಲಾಗಿದೆ.

ಅಮೃತ್ ಸ್ಟೇಷನ್ ಯೋಜನೆಯಡಿ ರಾಜ್ಯದ 61 ರೈಲ್ವೇ ನಿಲ್ದಾಣಗಳ ಆಧುನೀಕರಣ ಮಾಡಲಾಗುತ್ತಿದೆ. ಈಗಾಗಲೇ ಕರ್ನಾಟಕದಲ್ಲಿ 10 ವಂದೇ ಭಾರತ್ ರೈಲುಗಳು ಸಂಚರಿಸುತ್ತಿದ್ದು, ಮತ್ತಷ್ಟು ರೈಲುಗಳು ಬರಲಿವೆ ಎಂದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎನ್‌ಡಿಎ ಸರ್ಕಾರ ರೈಲ್ವೇ ವಲಯದಲ್ಲಿ 51,479 ಕೋಟಿ ರೂ.ನಷ್ಟು ಬಂಡವಾಳ ಹೂಡಿದೆ, ಯುಪಿಎ ಆಡಳಿತಾವಧಿಯಲ್ಲಿ ಕೇವಲ 850 ಕೋಟಿ ರೂ. ನೀಡಲಾಗಿತ್ತು ಎಂದರು. ಬೆಂಗಳೂರು ಸಮೀಪ ■ 6ನೇ ಪುಟಕ್ಕೆ

ನವದೆಹಲಿ ರೈಲು ನಿಲ್ದಾಣದಲ್ಲಿ ಕಾಲ್ತುಳಿತ

ಪ್ರಯಾಗ್‌ರಾಜ್‌ಗೆ ತೆರಳುತ್ತಿದ್ದ ಮೂವರು ಮಕ್ಕಳು ಸೇರಿ 15 ಮಂದಿ ಸಾವು



ನವದೆಹಲಿ, ಫೆ. 15– ನವದೆಹಲಿಯ ರೈಲು ನಿಲ್ದಾಣದಲ್ಲಿ ಇಂದು ರಾತ್ರಿ ಕಾಲ್ತುಳಿತ ಉಂಟಾಗಿ ಪ್ರಯಾಗ್ ರಾಜ್‌ನ ಕುಂಭ ಮೇಳಕ್ಕೆ ತೆರಳುತ್ತಿದ್ದ ಮೂವರು ಮಕ್ಕಳು ಸೇರಿದಂತೆ 15 ಮಂದಿ ಸಾವಿಗೀಡಾಗಿದ್ದಾರೆ.

ಪ್ರಯಾಗ್‌ರಾಜ್‌ಗೆ ತೆರಳುವ ಭಕ್ತರಿಗಾಗಿ ನವದೆಹಲಿಯಿಂದ 2 ವಿಶೇಷ ರೈಲುಗಳ ವ್ಯವಸ್ಥೆ ಮಾಡಲಾಗಿತ್ತು. ಆದರೆ, ಒಮ್ಮೆಲೇ ಸಾವಿರಾರು ಭಕ್ತರು ರೈಲು ಹತ್ತಲು ಮುಂದಾದ ವೇಳೆ ಕಾಲ್ತುಳಿತ ಉಂಟಾಗಿದೆ. ರೈಲು ಹತ್ತುವ ಭರದಲ್ಲಿ ಒಮ್ಮೆಲೆ ಎಲ್ಲರೂ ಮುನ್ನುಗ್ಗಿದಾಗ ಕೆಲವರು ಕೆಳಗೆ ಬಿದ್ದು ಕಾಲ್ತುಳಿತಕ್ಕೆ ಒಳಗಾಗಿದ್ದಾರೆ. ರೈಲ್ವೆ ಪೊಲೀಸರು ತಕ್ಷಣವೇ ಕಾರ್ಯಪ್ರವೃತ್ತರಾಗಿ, ಅಗ್ನಿಶಾಮಕದಳದವರನ್ನು ಸ್ಥಳಕ್ಕೆ ಕರೆಸಿಕೊಂಡು ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿದ್ದಾರೆ. ಪತ್ರಿಕೆ ಮುದ್ರಣಕ್ಕೆ ಹೋಗುವ ವೇಳೆ ಮೂವರು ಮಕ್ಕಳು ಸೇರಿ 15 ಮಂದಿ ಸಾವನ್ನಪ್ಪಿದ್ದು, ಹಲವರು ತೀವ್ರವಾಗಿ ಗಾಯಗೊಂಡಿದ್ದಾರೆ ಎಂಬ ಮಾಹಿತಿಗಳು ಲಭ್ಯವಾಗಿವೆ. ಪ್ರಯಾಗ್‌ರಾಜ್‌ನಲ್ಲಿ ಕಳೆದ ಜನವರಿ 29ರ ಮೌನಿ ಅಮಾವಾಸ್ಯೆಯಂದು ಮುಂಜಾನೆ ಉಂಟಾದ ನೂಕುನುಗ್ಗಲು ಹಾಗೂ ಕಾಲ್ತುಳಿತದಿಂದಾಗಿ 30 ಮಂದಿ ಬಲಿಯಾಗಿದ್ದರು.





ಸುಸಜ್ಜಿತ ಅಶೋಕಪುರಂ ರೈಲ್ವೆ ನಿಲ್ದಾಣ ಸಂಪೂರ್ಣ ಸೇವೆಗೆ ಸಮರ್ಪಣೆ

ಟಿಕೆಟ್ ಬುಕ್ಕಿಂಗ್ ಕೌಂಟರ್ ಉದ್ಘಾಟನೆ; ವಿಸ್ತರಣೆಗೊಂಡ ರೈಲು ಸೇವೆಗೆ ರೈಲ್ವೆ ರಾಜ್ಯ ಸಚಿವ ಸೋಮಣ್ಣ ಚಾಲನೆ

● ಈ ರೈಲ್ವೆ ನಿಲ್ದಾಣದ ಸುಧಾರಣೆಯಲ್ಲಿ ಪ್ರತಾಪ್‌ಸಿಂಹ ಪ್ರಯತ್ನ ಪ್ರಸ್ತಾಪ ● ರೈಲು ನಿಲ್ದಾಣಗಳ ಅಭಿವೃದ್ಧಿಗೆ ಕೈಗೊಂಡಿರುವ ಯೋಜನೆ ವಿವರಣೆ

ಮೈಸೂರು, ಫೆ.15(ಪಿಎಂ)– ಮೇಲ್ದರ್ಜೆಗೊಂಡಿರುವ ಮೈಸೂರಿನ ಅಶೋಕಪುರಂ ರೈಲ್ವೆ ನಿಲ್ದಾಣದ ಎರಡನೇ ಪ್ರವೇಶದ ದ್ವಾರದ ಹೊಸ ಟಿಕೆಟ್ ಬುಕ್ಕಿಂಗ್ ಕೌಂಟರ್ (ಗಣಕೀಕೃತ ಕಾಯ್ದಿರಿಸುವ/ಕಾಯ್ದಿರಿಸದ ಟಿಕೆಟ್ ಕೊಡುವ ಕೇಂದ್ರ) ಉದ್ಘಾಟನೆ ಹಾಗೂ ಮೈಸೂರಿನಿಂದ ಅಶೋಕಪುರಂ ರೈಲ್ವೆ ನಿಲ್ದಾಣದವರೆಗೆ ರೈಲುಗಳ ಸೇವೆ ವಿಸ್ತರಣೆಗೂ ಶನಿವಾರ ಹಸಿರು ನಿಶಾನೆ ದೊರೆಯಿತು. ನಾಳೆಯಿಂದ (ಫೆ.16) ಎರಡು ಜೋಡಿ ಮೆಮು ರೈಲುಗಳು ಅಶೋಕಪುರಂ ರೈಲ್ವೆ ನಿಲ್ದಾಣದಿಂದ ಮೈಸೂರು ■ 6ನೇ ಪುಟಕ್ಕೆ



ಮೈಸೂರಿನ ಅಶೋಕಪುರಂ ರೈಲ್ವೆ ನಿಲ್ದಾಣದಲ್ಲಿ ಶನಿವಾರ ಅಶೋಕಪುರಂ ಮತ್ತು ಬೆಂಗಳೂರು ನಡುವೆ ಸಂಚಾರ ಮಾಡಲಿರುವ ಮೆಮು ರೈಲಿಗೆ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ ಹಸಿರು ನಿಶಾನೆ ತೋರಿದರು.

ಸಿಎಂ ಸಿದ್ದರಾಮಯ್ಯ ಸುಳ್ಳು ಹೇಳುತ್ತಿದ್ದಾರೆ

ಮೈಸೂರು,ಫೆ.15(ಪಿಎಂ)– ಅಶೋಕಪುರಂ ರೈಲ್ವೆ ನಿಲ್ದಾಣದ ಟಿಕೆಟ್ ಬುಕ್ಕಿಂಗ್ ಕೌಂಟರ್ ಮತ್ತು ರೈಲುಗಳ ಸೇವೆ ವಿಸ್ತರಣೆಗೆ ಶನಿವಾರ ಹಸಿರು ನಿಶಾನೆ ತೋರಿದ ರೈಲ್ವೆ ಹಾಗೂ ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ, ತಮ್ಮ ಉದ್ಘಾಟನಾ ಭಾಷಣದಲ್ಲಿ ಆಗಾಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ರಾಜ್ಯ ಕಾಂಗ್ರೆಸ್ ಸರ್ಕಾರದ ಬಗ್ಗೆ ಟೀಕಾ ಪ್ರಹಾರ ನಡೆಸಿದರು. ಮುಖ್ಯಮಂತ್ರಿಗಳು ಒಂದು ಟ್ವೀಟ್ ಮಾಡಿದ್ದಾರೆ. ನಾವು 56 ಕೋಟಿ ರೂ. ವೆಚ್ಚದಲ್ಲಿ ಕುಡಿಯುವ ನೀರಿಗಾಗಿ ಯೋಜನೆ ಮಾಡಿದ್ದೇವೆ. ಅದಕ್ಕೆ 26 ಸಾವಿರ ಕೋಟಿ ರೂ. ಅನ್ನು ಕೇಂದ್ರ ಸರ್ಕಾರ ಕೊಡಬೇಕಿತ್ತು. ಆದರೆ ಕೇವಲ 11 ಸಾವಿರ ಕೋಟಿ ಕೊಟ್ಟು, ■ 6ನೇ ಪುಟಕ್ಕೆ



ಅವಹೇಳನಕಾರಿ ಪೋಸ್ಟರ್ ಪ್ರಕರಣ

ಆರೋಪಿ ಜಾಮೀನು ಅರ್ಜಿ ವಿಚಾರಣೆ ನಾಳೆಗೆ ಮುಂದೂಡಿಕೆ

ಮೈಸೂರು, ಫೆ. 15(ಆರ್‌ಕೆ)- ಅವಹೇಳನಕಾರಿ ಪೋಸ್ಟರ್ ಹಾಕಿದ ಪ್ರಕರಣ ಸಂಬಂಧ ನ್ಯಾಯಾಂಗ ಬಂಧನದಲ್ಲಿರುವ ಆರೋಪಿಯ ಜಾಮೀನು ಅರ್ಜಿ ವಿಚಾರಣೆ ಸೋಮವಾರಕ್ಕೆ ಮುಂದೂಡಲಾಗಿದೆ.

ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಇಂದು ಕೈಗೆತ್ತಿಕೊಂಡ ಮೈಸೂರಿನ 2ನೇ ಹೆಚ್ಚುವರಿ ಸಿವಿಲ್ (ಕಿರಿಯ ಶ್ರೇಣಿ) ನ್ಯಾಯಾಲಯದ ನ್ಯಾಯಾಧೀಶರು ಸರ್ಕಾರಿ ಅಭಿಯೋಜಕರು ಸೋಮವಾರ ಹಾಜರಾಗಿ ಮಾಹಿತಿಯೊಂದಿಗೆ ವಾದ ಮಂಡಿಸುವುದಾಗಿ ಸಮಯ ಕೇಳಿಕೊಂಡ ಕಾರಣ ಮುಂದಿನ ವಿಚಾರಣೆಯನ್ನು ಫೆಬ್ರವರಿ 17ಕ್ಕೆ ಮುಂದೂಡಿದರು ಎಂದು ಆರೋಪಿ ಪರ ವಕೀಲ ಅ.ಮ. ಭಾಸ್ಕರ್ ಸುದ್ದಿಗಾರರಿಗೆ ತಿಳಿಸಿದರು.

ಫೆಬ್ರವರಿ 10ರಂದು ಅವಹೇಳನಕಾರಿ ಪೋಸ್ಟರ್ ಅನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದರು ಎಂದು ಆರೋಪಿಸಿ ಉದಯಗಿರಿ ಠಾಣೆ ಪೊಲೀಸರು ಡ್ರೈ ಫ್ರೂಟ್ಸ್ ವ್ಯಾಪಾರಿ ಹಾಗೂ ಹೋಟೆಲ್ ಉದ್ಯಮಿ ಸುರೇಶ್ ಪಾಂಡುರಂಗ ಅವರನ್ನು ಬಂಧಿಸಿದ್ದರು. ಸದ್ಯ ನ್ಯಾಯಾಂಗ ಬಂಧನದಲ್ಲಿರುವ ಪಾಂಡುರಂಗ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವಂತೆ ವಕೀಲ ಅ.ಮ.ಭಾಸ್ಕರ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಸೋಮವಾರ ಪ್ರಕರಣದ ವಿಚಾರಣೆ ನಡೆಯಲಿದ್ದು, ಜಾಮೀನು ಮಂಜೂರಾಗುವ ನಿರೀಕ್ಷೆ ಇದೆ ಎಂದು ಅವರು ತಿಳಿಸಿದರು.

ರಸ್ತೆ ದುರಸ್ತಿಗೆ ಆಗ್ರಹಿಸಿ ವಿದ್ಯಾರ್ಥಿಗಳಿಂದ ಪ್ರತಿಭಟನೆ



ರಾಮಕೃಷ್ಣನಗರದ 58ನೇ ವಾರ್ಡಿನಲ್ಲಿ ಸಾಯಿಬಾಬಾ ವೃತ್ತದ ಬಳಿ ರಸ್ತೆ ದುರಸ್ತಿ, ಕಾಮಗಾರಿ ವಿಳಂಬ ಖಂಡಿಸಿ ಸ್ಥಳೀಯರು, ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಮೈಸೂರು, ಫೆ.15(ಜಿಎ)- ಮೈಸೂರಿನ ರಾಮಕೃಷ್ಣ ನಗರದ 58ನೇ ವಾರ್ಡಿನಲ್ಲಿ ಸಾಯಿಬಾಬಾ ವೃತ್ತದ ಬಳಿ ರಸ್ತೆ ದುರಸ್ತಿ, ಕಾಮಗಾರಿ ವಿಳಂಬ ಖಂಡಿಸಿ ಸ್ಥಳೀಯರು, ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಸಾಯಿಬಾಬಾ ವೃತ್ತದ ಮುಖ್ಯರಸ್ತೆಯಲ್ಲಿ ಮಹಾನಗರ ಪಾಲಿಕೆ ವತಿಯಿಂದ ಒಳಚರಂಡಿ ಕಾಮಗಾರಿ ಕಳೆದ ಆರು ತಿಂಗಳಿಂದ ನಡೆಯುತ್ತಿದ್ದು, ರಸ್ತೆಗಳಿಗೆ ಡಾಂಬರೀಕರಣವಾಗಿಲ್ಲ. ಮುಖ್ಯರಸ್ತೆ ತುಂಬಾ ಹಳ್ಳ ಗುಂಡಿ, ಧೂಳಿನಿಂದ ಕೂಡಿದೆ. ಇಲ್ಲಿ ಪಕ್ಕದಲ್ಲಿ ನೃಪತುಂಗ ಕನ್ನಡ ಶಾಲೆ, ವಿಶ್ವಮಾನವ ಶಾಲೆ, ರಾಮಕೃಷ್ಣ ವಿದ್ಯಾಕೇಂದ್ರ ಹಾಗೂ ಸುಯೋಗ್ ಆಸ್ಪತ್ರೆಗಳಿದ್ದು, ಬಾಲಕಿಯರ ವಸತಿ ಗೃಹ, ದೇವಸ್ಥಾನವೂ ಇದೆ. ಇದರಿಂದ ದಿನನಿತ್ಯ ವಿದ್ಯಾರ್ಥಿಗಳು, ಮಕ್ಕಳು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದ್ದು, ಜನರು ಓಡಾಡುವಾಗ ಧೂಳಿನಿಂದ ಉಸಿರುಗಟ್ಟಿ ಕಾಯಿಲೆ ಬೀಳುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಕಿಡಿಕಾರಿದರು.

ಹಿರಿಯ ನಾಗರಿಕರು ಉದ್ಯಾನವನದಲ್ಲಿ ಓಡಾಡಲು ಕೂಡ ತುಂಬಾ ತೊಂದರೆಯಾಗುತ್ತಿದೆ. ಈ ಕುರಿತು ಸಂಬಂಧಪಟ್ಟವರಿಗೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಕ್ರಮವಾಗಿಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ಸಮಸ್ಯೆ ಬಗೆಹರಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಬಡಾವಣೆಯ ಸ್ಥಳೀಯರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾರು-ಬಸ್ ಡಿಕ್ಕಿ: ಕುಂಭಮೇಳಕ್ಕೆ ಹೊರಟಿದ್ದ 10 ಭಕ್ತರು ಸಾವು

ಉತ್ತರಪ್ರದೇಶ: ಮಿರ್ಜಾಪುರ-ಪ್ರಯಾಗ್‌ರಾಜ್ ಹೆದ್ದಾರಿಯಲ್ಲಿ ಭೀಕರ ಅಪಘಾತ ಸಂಭವಿಸಿದ್ದು, ಮಹಾಕುಂಭ ಮೇಳಕ್ಕೆ ತೆರಳುತ್ತಿದ್ದ 10 ಭಕ್ತರು ಸಾವನ್ನಪ್ಪಿದ್ದಾರೆ. ಭಕ್ತರಿದ್ದ ಬೊಲೆರೋ ಕಾರು ಮಧ್ಯಪ್ರದೇಶದ ರಾಜ್‌ಗಢದಿಂದ ಬರುತ್ತಿದ್ದ ಬಸ್‌ಗೆ ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ 19 ಮಂದಿಗೆ ಗಾಯಗಳಾಗಿವೆ. ತಡರಾತ್ರಿ ನಡೆದ ಘಟನೆಯಲ್ಲಿ ಕಾರಿನಿಂದ ಮೃತದೇಹ ಹೊರತೆಗೆಯಲು 3 ಗಂಟೆಯ ಅಧಿಕ ಕಾಲ ಪೊಲೀಸರು ಶ್ರಮವಹಿಸಿದ್ದಾರೆ. ಕಾರಿನಲ್ಲಿ ಪ್ರಯಾಣಿಸುತ್ತಿದ್ದಾಗ ಸಾವನ್ನಪ್ಪಿದ ಭಕ್ತರು ಛತ್ತೀಸ್‌ಗಢದ ಕೋರ್ಬಾಗೆ ಸೇರಿದವರು ಎಂದು ಗುರುತಿಸಲಾಗಿದೆ. ಅವರು ಸಂಗಮದಲ್ಲಿ ಪವಿತ್ರ ಸ್ನಾನ ಮಾಡಲು ಕುಂಭಕ್ಕೆ ತೆರಳುತ್ತಿದ್ದರು. ಅಪಘಾತದ ಸಮಯದಲ್ಲಿ ಬಸ್‌ನಲ್ಲಿ ಮಧ್ಯಪ್ರದೇಶದ ರಾಜ್‌ಗಢದ ಯಾತ್ರಿಕರು ಕೂಡ ಇದ್ದರು.

ಸಿಸಿಬಿ ನೂತನ ಎಸಿಪಿ ಷರೀಫ್ ರಾವತರ್ ಅಧಿಕಾರ ಸ್ವೀಕಾರ



ಮೈಸೂರಿನ ಸಿಸಿಬಿ ಎಸಿಪಿಯಾಗಿ ಷರೀಫ್ ರಾವತರ್, ಶುಕ್ರವಾರ ಅಧಿಕಾರ ವಹಿಸಿಕೊಂಡರು.

ಮೈಸೂರು, ಫೆ.15(ಆರ್‌ಕೆ)- ಮೈಸೂರಿನ ಸಿಸಿಬಿ ನೂತನ ಎಸಿಪಿಯಾಗಿ ಷರೀಫ್ ರಾವತರ್ ಶುಕ್ರವಾರ ಅಧಿಕಾರ ವಹಿಸಿಕೊಂಡರು. ನಿರ್ಗಮಿತ ಎಸಿಪಿ ಸಂದೇಶ್ ಕುಮಾರ್ ಅವರು ಪುಷ್ಪಗುಚ್ಛ ನೀಡುವ ಮೂಲಕ ಅಭಿನಂದಿಸಿ, ಷರೀಫ್ ಅವರಿಗೆ ಅಧಿಕಾರ ಹಸ್ತಾಂತರಿಸಿ ಶುಭ ಕೋರಿದರು.

ನಂತರ ಇಂದು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ಈಗ ತಾನೆ ಅಧಿಕಾರ ವಹಿಸಿಕೊಂಡಿದ್ದೇನೆ. ಇಲ್ಲಿ ಪರಿಸ್ಥಿತಿ, ಪ್ರಕರಣಗಳ ಪ್ರಗತಿ, ದೂರು, ಮಾಹಿತಿಗಳೇನಿವೆ ಎಂಬುದನ್ನು ತಿಳಿದುಕೊಂಡು ಅದರಂತೆ ಕರ್ತವ್ಯ ನಿರ್ವಹಿಸುತ್ತೇನೆ ಎಂದರು.

ಅಪರಾಧ ಪ್ರಕರಣಗಳನ್ನು ಪತ್ತೆ ಮಾಡುವುದೇ ಸಿಸಿಬಿ ಪೊಲೀಸರ ಕರ್ತವ್ಯವಾಗಿದ್ದು, ಹಿರಿಯ ಅಧಿಕಾರಿಗಳ ಮಾರ್ಗದರ್ಶನದಂತೆ ಕಿರಿಯ ಅಧಿಕಾರಿಗಳು, ಸಿಬ್ಬಂದಿಗಳನ್ನು ವಿಶ್ವಾಸಕ್ಕೆ ಪಡೆದು ಕೆಲಸ ಮಾಡುತ್ತೇನೆ ಎಂದು ಷರೀಫ್ ರಾವತರ್ ನುಡಿದರು.

ಮೂಲತಃ ಮಡಿಕೇರಿಯವರಾದ ಷರೀಫ್, ಮೈಸೂರು ದಕ್ಷಿಣ ಗ್ರಾಮಾಂತರ ಉಪವಿಭಾಗದ ಡಿವೈಎಸ್‌ಪಿಯಾಗಿರುವ ಕರೀಂ ರಾವತರ್ ಅವರ ಕಿರಿಯ ಸಹೋದರರಾಗಿದ್ದು, ಬೆಂಗಳೂರಲ್ಲಿ ಸಿಐಡಿ ಡಿವೈಎಸ್‌ಪಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. 1999ರಲ್ಲಿ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಆಗಿ ಇಲಾಖೆಗೆ ಸೇರಿದ ಅವರು, ಉತ್ತರ ಭಾಗದ ಜಿಲ್ಲೆಗಳಲ್ಲಿ ಕರ್ತವ್ಯ ನಿರ್ವಹಿಸಿ ಇನ್‌ಸ್ಪೆಕ್ಟರ್ ಆಗಿ ಬಡ್ತಿ ಹೊಂದಿದ ಬಳಿಕ ಬೆಂಗಳೂರು ಸಿಸಿಬಿ, ಮಂಗಳೂರು, ಬೆಂಗಳೂರಿನ ಹೆಬ್ಬಾಳ, ವಯಾಲಿಕಾವಲ್, ಸದಾಶಿವನಗರ, ಸ್ಪೆಷಲ್ ಬ್ರಾಂಚ್, ವಿವಿಐಪಿ ಸೆಕ್ಯುರಿಟಿ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ

ಬೆಳಗಾವಿಗೆ ಬಂದ ಗೋವಾ ಮಾಜಿ ಶಾಸಕನ ಮೇಲೆ ಆಟೋ ಚಾಲಕನಿಂದ ಹಲ್ಲೆ; ಕೆಲವೇ ಕ್ಷಣದಲ್ಲಿ ಸಾವು

ಬೆಳಗಾವಿ, ಫೆ.15- ಬೆಳಗಾವಿಯಲ್ಲಿ ಕ್ಷುಲ್ಲಕ ಕಾರಣಕ್ಕೆ ಗೋವಾ ಮಾಜಿ ಶಾಸಕನ ಮೇಲೆ ಆಟೋ ಚಾಲಕನಿಂದ ಹಲ್ಲೆ ನಡೆದಿದ್ದು, ಗೋವಾದ ಮಾಜಿ ಶಾಸಕ ಲಾವೋ ಮಾಮಲೇದಾರ್ (69) ಕೆಲವೇ ಕ್ಷಣಗಳಲ್ಲಿ ಮೃತಪಟ್ಟಿದ್ದಾರೆ.



ಬೆಳಗಾವಿಯ ಶ್ರೀನಿವಾಸ ಲಾಡ್ಜ್ ಎದುರು ಘಟನೆ ನಡೆದಿದೆ. ಗೋವಾದ ಪೋಂಡಾ ಕ್ಷೇತ್ರದ ಶಾಸಕರಾಗಿದ್ದ ಲಾವೋ ಮಾಮಲೇದಾರ್ ಇಂದು ಬೆಳಗಾವಿಗೆ ಆಗಮಿಸಿದ್ದರು. ಈ ವೇಳೆ ಬೆಳಗಾವಿಯ ಖಡೇ ಬಜಾರ್ ಬಳಿಕ ಆಟೋಗೆ ಮಾಜಿ ಶಾಸಕರ ಕಾರು ಟಚ್ ಆಗಿದೆ.

ರಸ್ತೆಯಲ್ಲಿ ಎಷ್ಟೇ ಕೂಗಿದರೂ ಕೇರ್ ಮಾಡದೇ ಲಾಡ್ಜ್‌ನ ಬಳಿ ಬಂದ ಮಾಜಿ ಶಾಸಕ ಲಾವೋ ಮಾಮಲೇದಾರ್ ಅವರನ್ನು ಹಿಂಬಾಲಿಸಿಕೊಂಡು ಬಂದ ಆಟೋ ಚಾಲಕ ಶ್ರೀನಿವಾಸ, ಲಾಡ್ಜ್ ಬಳಿ ಜಗಳ ಆರಂಭಿಸಿದ್ದಾರೆ. ಆಗ ಮಾತಿಗೆ ಮಾತು ಬೆಳೆದು, ಲಾವೋ ಮಾಮಲೇದಾರ್ ಮೇಲೆ ಆಟೋ ಚಾಲಕ ಹಲ್ಲೆ ಮಾಡಿದ್ದಾನೆ. ಆಗ ಸ್ಥಳೀಯರು ಹಾಗೂ ಲಾಡ್ಜ್‌ನ ಸಿಬ್ಬಂದಿ ಬಂದು ಇಬ್ಬರ ಜಗಳವನ್ನು ಬಿಡಿಸಿದ್ದಾರೆ.

ಇದಾದ ನಂತರ ಹಲ್ಲೆಗೊಳಗಾದ ಮಾಜಿ ಶಾಸಕ ಲಾವೊ ಮಾಮಲೇದಾರ್ ತಾವು ತಂಗಿದ್ದ ಲಾಡ್ಜ್‌ನ ಮೆಟ್ಟಿಲನ್ನೇರಿ ತಮ್ಮ ರೂಮಿಗೆ ಹೋಗಲು ಬಂದಿದ್ದಾರೆ. ಆದರೆ, ಮೆಟ್ಟಿಲು ಏರುವ ಮೊದಲೇ ಕಾಲನ್ನು ಎತ್ತಿ ಇಡುವುದಕ್ಕೂ ಸಾಧ್ಯವಾಗದೇ ಏಕಾಏಕಿ ಕುಸಿದು ಬಿದ್ದಿದ್ದಾರೆ. ನಂತರ, ಘಟನೆಯ ಸಂಪೂರ್ಣ ದೃಶ್ಯ ಲಾಡ್ಜ್‌ನ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಕೂಡಲೇ ಮಾಜಿ ಶಾಸಕರನ್ನು ಬಿಮ್ಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡುವುದಕ್ಕೆ ಮುಂದಾದರೂ ಅದಾಗಲೇ ಜೀವ ಹೋಗಿತ್ತು.

ಮಾಜಿ ಶಾಸಕ ಲಾವೋ ಅವರ ಶವವನ್ನು ಬಿಮ್ಸ್ ಆಸ್ಪತ್ರೆ ಶವಾಗಾರದಲ್ಲಿ ಇರಿಸಲಾಗಿದೆ. ಅವರ ಕುಟುಂಬ ಸದಸ್ಯರಿಗೆ ಮಾಹಿತಿ ನೀಡಲಾಗಿದೆ. ವೃದ್ಧ ಮಾಜಿ ಶಾಸಕರ ಮೇಲೆ ಹಲ್ಲೆ ಮಾಡಿದ ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈ ಘಟನೆ ಬೆಳಗಾವಿ ಮಾರ್ಕೆಟ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದು, ಆರೋಪಿಯನ್ನು ವಶಕ್ಕೆ ಪಡೆದ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ. ಜೊತೆಗೆ, ಸಿಸಿಟಿವಿ ದೃಶ್ಯಾವಳಿಗಳನ್ನು ಸಂಗ್ರಹ ಮಾಡಿದ್ದಾರೆ.

ನಿಧನ

ಸಿ.ಎನ್.ಮಹದೇವ



ಮೈಸೂರು, ಫೆ. 15- ಮೈಸೂರಿನ ಹೆಬ್ಬಾಳು 2ನೇ ಹಂತದ ನಿವಾಸಿ ಸಿಎನ್.ಮಹದೇವ(64) ಅವರು ಇಂದು ನಿಧನರಾದರು.

ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನಿವೃತ್ತ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಆದ ಅವರು, ಪತ್ನಿ ಸುಜಾತ, ಪುತ್ರರಾದ ಪವನ್, ನಿತಿನ್, ಸೊಸೆ, ಮೊಮ್ಮಗ ಹಾಗೂ ಅಪಾರ ಬಂಧು-ವರ್ಗ ಅಗಲಿದ್ದಾರೆ. ನಾಳೆ (ಫೆ.16) ಮಧ್ಯಾಹ್ನ ಮಂಡ್ಯ ಜಿಲ್ಲೆ, ನಾಗಮಂಗಲ ತಾಲೂಕು ಚಾಕೇನಹಳ್ಳಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಹೇಮಂತ್ ಕುಮಾರ್(ರಘು)



ಮೈಸೂರು, ಫೆ.15- ಮೈಸೂರಿನ ದೇವಾಂಬ ಅಗ್ರಹಾರ(ಗಾಯತ್ರಿ ಚಿತ್ರಮಂದಿರ ಹಿಂಭಾಗ) ನಿವಾಸಿ, ಹಿರಿಯ ಛಾಯಾಗ್ರಾಹಕ ಹೇಮಂತ್ ಕುಮಾರ್(ರಘು)(39) ತೀವ್ರ ಅನಾರೋಗ್ಯದಿಂದ ಶನಿವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಫೆ.16) ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಪಿ.ಸದಾಶಿವಯ್ಯ



ಮೈಸೂರು,ಫೆ.15- ಮೈಸೂರಿನ ಸಂತೆಪೇಟೆಯ ಹೆಸರಾಂತ ಎಮ್.ಜಿ.ಪುಟ್ಟಸ್ವಾಮಯ್ಯ ಆಯಿಲ್ ಮರ್ಚಂಟ್ ಆದ ಎಂ.ಪಿ.ಸದಾಶಿವಯ್ಯ (84) ಇಂದು ರಾತ್ರಿ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ ನಾಗರತ್ನ, ಮೂವರು ಪುತ್ರಿಯರು, ಓರ್ವ ಪುತ್ರ, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ನಾಳೆ(ಫೆ.16) ಮಧ್ಯಾಹ್ನ 3 ಗಂಟೆಗೆ ವಿದ್ಯಾರಣ್ಯಪುರಂನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿಸಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ

ಜನನ, ಮರಣ ಪ್ರಮಾಣಪತ್ರವೂ ಈಗ 'ದುಬಾರಿ'!

ಮೈಸೂರು, ಫೆ.15- ಅತ್ಯಂತ ಮಹತ್ವದ ದಾಖಲೆಗಳಾದ ಜನನ ಹಾಗೂ ಮರಣ ಪ್ರಮಾಣಪತ್ರ ಪಡೆಯಲು ಸಾರ್ವಜನಿಕರು ಪಾವತಿಸಬೇಕಿದ್ದ ಶುಲ್ಕವನ್ನು ಸರ್ಕಾರ ಒಮ್ಮೆಲೇ ಬರೋಬ್ಬರಿ ಹತ್ತು ಪಟ್ಟು ಏರಿಸಿದೆ. ರೂ. 5ರಿಂದ ರೂ. 50ಕ್ಕೆ ಹೆಚ್ಚಿಸಿರುವುದು ಜನಸಾಮಾನ್ಯರಿಗೆ 'ದುಬಾರಿ'ಯಾಗಿ ಪರಿಣಮಿಸಿದೆ.

ಕರ್ನಾಟಕ ಜನನ, ಮರಣ ನೋಂದಣಿ ನಿಯಮಗಳು (ತಿದ್ದುಪಡಿ) 2024ರಲ್ಲಿ ಪರಿಷ್ಕರಣೆ ಮಾಡಲಾಗಿದ್ದು, ಈಚೆಗೆ ಶುಲ್ಕವನ್ನು ಏರಿಸಲಾಗಿದೆ. ಸಾರ್ವಜನಿಕರಿಗೆ ಜನನ ಹಾಗೂ ಮರಣ ಪ್ರಮಾಣಪತ್ರಗಳು ಹಲವು ಉದ್ದೇಶಕ್ಕೆ ಬೇಕಾಗುತ್ತವೆ. ಮಕ್ಕಳ ಜನನ ಪ್ರಮಾಣಪತ್ರವನ್ನು ಪೋಷಕರು ಶಾಲೆಗಳ ಪ್ರವೇಶ, ಸರ್ಕಾರದ ವಿವಿಧ ಸೌಲಭ್ಯಗಳನ್ನು ಪಡೆದುಕೊಳ್ಳಲು ಸಲ್ಲಿಸಲೇಬೇಕು. ಮರಣ ಹೊಂದಿದಾಗ ವ್ಯಕ್ತಿಯ ಕುಟುಂಬದವರು ಪ್ರಮಾಣಪತ್ರವನ್ನು ವಿವಿಧ ಉದ್ದೇಶಕ್ಕಾಗಿ ಪಡೆದುಕೊಳ್ಳಬೇಕಾಗುತ್ತದೆ.

ಇಂತಹ ದಾಖಲೆಗಳ ಮಹತ್ವವನ್ನು ಮನಗಂಡ ಸರ್ಕಾರ ಜನರ ಮೇಲೆ 'ಬರೆ' ಎಳೆದಿದೆ. ಈ ಅವೈಜ್ಞಾನಿಕವಾದ ದರ ಪರಿಷ್ಕರಣೆಯನ್ನು ಮರುಪರಿಶೀಲಿಸಲು ಯೋಜನೆ, ಕಾರ್ಯಕ್ರಮ ಸಂಯೋಜನೆ ಹಾಗೂ ಸಾಂಖ್ಯಿಕ ಇಲಾಖೆಯು ಕ್ರಮ ಕೈಗೊಳ್ಳಬೇಕು ಎಂಬ ಒತ್ತಾಯ ಕೇಳಿಬಂದಿದೆ.

ಶುಲ್ಕ ಪರಿಷ್ಕರಣೆಯಿಂದ ಸರ್ಕಾರಕ್ಕೆ ಲಾಭವಾಗುತ್ತಿದೆ. ಅಗತ್ಯವಿರುವವರು, ಹಲವು ಕಡೆ ಸಲ್ಲಿಸಬೇಕಾದ್ದರಿಂದ ಪ್ರಮಾಣಪತ್ರಗಳನ್ನು ಒಮ್ಮೆಲೆ ಸರಾಸರಿ 8ರಿಂದ 10 ಪ್ರತಿಗಳನ್ನು ಪಡೆದುಕೊಳ್ಳಬೇಕಾಗುತ್ತದೆ. ಹಿಂದೆ 5 ಪ್ರತಿಗಳನ್ನು ಪಡೆದುಕೊಂಡರೆ ರೂ. 25 ಆಗುತ್ತಿತ್ತು. 10 ಪ್ರತಿಗಳನ್ನು ತೆಗೆದುಕೊಂಡರೆ ರೂ. 50 ಆಗುತ್ತಿತ್ತು. ಈಗ, 5ಕ್ಕೆ ರೂ. 250 ಹಾಗೂ 10ಕ್ಕೆ ರೂ. 500 ತೆರಬೇಕಾಗಿದೆ.

ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿಯಾಗದಿರುವ ಜನನ ಅಥವಾ ಮರಣದ ಕುರಿತು ನ್ಯಾಯಾಲಯದ ಅದೇಶದ ಮೂಲಕ ಪಡೆಯಲಾಗುವ 'ಅಲಭ್ಯ ಪ್ರಮಾಣಪತ್ರದ ಶುಲ್ಕ ಹಿಂದೆ ಒಂದು ವರ್ಷಕ್ಕೆ ರೂ. 2 ಇತ್ತು. ಈಗ ರೂ. 20ಕ್ಕೆ ಹೆಚ್ಚಿಸಲಾಗಿದೆ.


ಶುಲ್ಕ ಹೆಚ್ಚಳ ಸಾರ್ವಜನಿಕರಿಗೆ ಹೊರೆಯಾಗಿರುವುದು ನಿಜ. ಈ ಬಗ್ಗೆ ದಿನವೂ ತಕರಾರು ತೆಗೆಯುತ್ತಿದ್ದಾರೆ. ಅದರಿಂದ ನಮಗೂ ತೊಂದರೆಯಾಗುತ್ತಿದೆ. ಆದರೆ, ನಾವು ಸರ್ಕಾರದ ನಿಯಮವನ್ನು ಪಾಲಿಸಬೇಕು ಎಂದು ಇಲಾಖೆಯ ಅಧಿಕಾರಿಯೊಬ್ಬರು ಕೇಳಿದರು.

ಸಣ್ಣಪುಟ್ಟ ತಿದ್ದುಪಡಿ ಮಾಡಿಸಿದರೂ ಒಂದು ಪ್ರತಿಯನ್ನು ಜನರೇಟ್ ಮಾಡಿ ಪ್ರಿಂಟ್ ಮಾಡಲೇಬೇಕು. ಒಂದು ಪ್ರತಿಗೆ ಈಗ ಅರ್ಜಿದಾರರು ರೂ. 50 ಕೊಡಲೇಬೇಕು. ಪ್ರತಿ ಹೆಚ್ಚಾದಷ್ಟು ಶುಲ್ಕ ಜಾಸ್ತಿ ಕೊಡಲೇಬೇಕು ಎನ್ನುತ್ತಾರೆ ಅವರು.

ಮೈಸೂರು ಮಹಾನಗರಪಾಲಿಕೆಯೊಂದರಲ್ಲೇ ನಿತ್ಯ ಸರಾಸರಿ ಜನನ, ಮರಣ ಪ್ರಮಾಣಪತ್ರಕ್ಕೆ ಸಂಬಂಧಿಸಿದಂತೆ 200 ಅರ್ಜಿಗಳು ಸಲ್ಲಿಕೆಯಾಗುತ್ತಿವೆ. 500ಕ್ಕೂ ಹೆಚ್ಚಿನ ಪ್ರತಿಗಳನ್ನು ಮುದ್ರಿಸಿ ವಿತರಿಸಲಾಗುತ್ತಿದೆ.

ಇಂದಿನಿಂದ ಶ್ರೀ ಜ್ವಾಲಾಮುಖಿ ತ್ರಿಪುರಸುಂದರಿ ಅಮ್ಮನವರ ಜಾತ್ರಾ ಮಹೋತ್ಸವ

ಮೈಸೂರು, ಫೆ.15 (ಆರ್‌ಕೆ)- ನಾಳೆ (ಫೆ.16)ಯಿಂದ ಫೆ.18 ರವರೆಗೆ ಮೂರು ದಿನಗಳ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ (ಉತ್ತನಹಳ್ಳಿ ಅಮ್ಮ) ಜಾತ್ರಾ ಮಹೋತ್ಸವ ನಡೆಯಲಿದೆ.




ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮೈಸೂರು ತಾಲೂಕು ಸರ್ಕಾರಿ ಉತ್ತನಹಳ್ಳಿ ಗ್ರಾಮದಲ್ಲಿರುವ ಶ್ರೀ ಜ್ವಾಲಾಮುಖಿ ತ್ರಿಪುರಸುಂದರಿ ಅಮ್ಮನವರ ದೇವಸ್ಥಾನದಲ್ಲಿ ನಾಳೆ (ಭಾನುವಾರ) ಅಮ್ಮನವರಿಗೆ ಏಕಾದಶವಾರ, ರುದ್ರಾಭಿಷೇಕ ಸುವರ್ಣ ಅಲಂಕಾರ ಸಹಸ್ರನಾಮಾರ್ಚನೆ ನಿವೇದನೆ, ಮಹಾಮಂಗಳಾರತಿಗಳಂತಹ ಧಾರ್ಮಿಕ ವಿಧಿ ವಿಧಾನಗಳು ನಡೆದು, ಮಧ್ಯಾಹ್ನ 12.30ಕ್ಕೆ ಪ್ರಸಾದ ವಿನಿಯೋಗವಾಗಲಿದೆ.

ನಂತರ ರಾತ್ರಿ 8.30ಕ್ಕೆ ಅಮ್ಮನವರ ಕನ್ಯಾಕನ್ನಡಿ ಉತ್ಸವ ಪುಣ್ಯಾಹ ಮಂಟಪೋತ್ಸವ ನಡೆಯಲಿದೆ.

ಫೆ.17ರಂದು ಸೋಮವಾರ ಪಂಚಮಿ ಚಿತ್ತ ನಕ್ಷತ್ರ ಶ್ರೀ ಅವರಿಗೆ ಏಕದಶವಾರ, ರುದ್ರಾಭಿಷೇಕ ಸಹಸ್ರನಾಮಾರ್ಚನೆ ವಿಶೇಷ ಪೂಜೆಗಳು, ಬದಲಿ ಅಲಂಕಾರ ನಡೆಯಲಿದ್ದು, ಮಧ್ಯಾಹ್ನ 12.30ಕ್ಕೆ ಪ್ರಸಾದ ವಿನಿಯೋಗವಾಗಲಿದೆ.

ಫೆ.18ರಂದು ಮಂಗಳವಾರ ಷಷ್ಠಿ ಸ್ವಾತಿ ನಕ್ಷತ್ರ ಶ್ರೀ ಅವರಿಗೆ ಏಕದಶವಾರ ರುದ್ರಾಭಿಷೇಕ, ಪಂಚೋಪಚಾರ ಪೂಜೆ, ಮಹಾಮಂಗಳಾರತಿ ನಂತರ ಮಧ್ಯಾಹ್ನ 12.30ಕ್ಕೆ ಪ್ರಸಾದ ವಿನಿಯೋಗವಾಗಲಿದೆ. ಭಕ್ತಾದಿಗಳು ಸಕಾಲಕ್ಕೆ ಆಗಮಿಸಿ ದೇವಿಯ ಕೃಪೆಗೆ ಪಾತ್ರರಾಗಬೇಕೆಂದು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ. ರೂಪಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.02.2025 ಭಾನುವಾರ, ಮಳೆ ನಕ್ಷತ್ರ: ಧನಿಷ್ಠ 06.02.2025 ರಿಂದ 18.02.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಹಸ್ತ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಥೈರಾಯಿಡ್ ಸಮಸ್ಯೆ, ಗ್ಯಾಸ್ಟ್ರೈಟಿಸ್ (ಆಮ್ಲಪಿತ್ತ) ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಚೇತನ ಫೌಂಡೇಷನ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕಾವ್ಯಶ್ರೀ ಚಾರಿಟಬಲ್ ಟ್ರಸ್ಟ್:** ಮೈಸೂರು ನುಡಿ ಸಡಗರ ಕಾರ್ಯಕ್ರಮ, ಉದ್ಘಾಟನೆ: ಪಂಪ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ (ಸಿಪಿಕೆ), ಅಧ್ಯಕ್ಷತೆ: ಸಾಹಿತಿ ಟಿ.ಸತೀಶ್ ಜವರೇಗೌಡ, ಕುವೆಂಪು ನುಡಿಸಿರಿ ಪ್ರಶಸ್ತಿ ಪ್ರದಾನ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು: ಕಾವ್ಯಶ್ರೀ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಜಿ.ಶಿವಣ್ಣ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವಿಜಯನಗರ, ಬೆಳಗ್ಗೆ 9.30 ರಿಂದ.

■ **ಉಪಾಸನ ಫೌಂಡೇಷನ್ :** ಮನೋಶಕ್ತಿ ಯಾ ಮತಿಸ್ಸಾ ಗತಿರ್ಭವೇತ್, ಮನೋಶಕ್ತಿ ಕಾರ್ಯಾಗಾರ, ಸಾನ್ನಿಧ್ಯ : ಉಪಾಸನ ಫೌಂಡೇಷನ್ ಸಂಸ್ಥಾಪಕ ಸದ್ಗುರು ಶ್ರೀ ರಾಮ, ಉಪಸ್ಥಿತರು : ಶಾಸಕ ಟಿ.ಎಸ್. ಶ್ರೀವತ್ಸ, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಯೋಗ ರಾಯಭಾರಿ ಯೋಗ ಪ್ರವೀಣ ಶಿವಪ್ರಕಾಶ್ ಗುರೂಜಿ, ಸ್ಥಳ: ಹೋಟೆಲ್ ರಿಯೋ ಮೆರಿಡಿಯನ್, ಸಯ್ಯಾಜಿರಾವ್ ರಸ್ತೆ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಚರ್ಮರೋಗಕ್ಕೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.

■ **ಅಭಿವೃದ್ಧಿ ಆಯುಕ್ತರು (ಕರಕುಶಲ), ಜವಳಿ ಮಂತ್ರಾಲಯ :** ಗಾಂಧಿ ಶಿಲ್ಪ ಬಜಾರ್, ಕರಕುಶಲ ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ವರ್ತುಲ ರಸ್ತೆ, ಹೆಬ್ಬಾಳು ಕೈಗಾರಿಕಾ ವಲಯ, ಬೆಳಗ್ಗೆ 10 ರಿಂದ.

■ **ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಟ್ರಸ್ಟ್ :** ಬೆಳಗ್ಗೆ 10.30ಕ್ಕೆ ಮುಕ್ತಕ ಕೃತಿ ಬಿಡುಗಡೆ, ಮುಕ್ತಕಗಳ ಗಾಯನ, ಡಾ.ಡಿವಿಜಿ ಮುಕ್ತಕ ಸಾಹಿತ್ಯ ಪ್ರಶಸ್ತಿ ಪ್ರದಾನ, ಸಾಧಕರಿಗೆ ಸನ್ಮಾನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ, ಉದ್ಘಾಟನೆ, ಕಿರಣ್ ಸಿಡ್ಲೇಹಳ್ಳಿ ವಿರಚಿತ 'ಭೋಗಮುಕ್ತಕ' ಕೃತಿ ಬಿಡುಗಡೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಡಾ.ಧರಣಿದೇವಿ ಮಾಲಗತ್ತಿ, ಕೃತಿ ಕುರಿತು ಮಾತನಾಡುವವರು: ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಪ್ರೊ.ಸಿ.ವಿ.ಶ್ರೀಧರಮೂರ್ತಿ, ವಿದುಷಿ ಶಶಿಕಲಾ ಚಂದ್ರಶೇಖರ್ ಅವರಿಂದ ಮುಕ್ತಕಗಳ ಗಾಯನ, ಅಧ್ಯಕ್ಷತೆ: ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ. ಎಚ್.ವಿ. ನಾಗರಾಜರಾವ್, ಉಪಸ್ಥಿತರು: ಕಿರಣ್ ಸಿಡ್ಲೇಹಳ್ಳಿ (ಕೃತಿಕಾರ), ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಸಂಸ್ಥಾಪಕ ಅಧ್ಯಕ್ಷ ಎಸ್.ರಾಮಪ್ರಸಾದ್; ಸಂಜೆ 4.30ಕ್ಕೆ ಪ್ರಶಸ್ತಿ ಪ್ರದಾನ, ಉದ್ಘಾಟನೆ: ಅಷ್ಟಾವಧಾನಿಗಳು, ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ, ಅಧ್ಯಕ್ಷತೆ: ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಎಚ್.ವಿ. ನಾಗರಾಜರಾವ್, ಉಪಸ್ಥಿತರು: ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಸಂಸ್ಥಾಪಕ ಅಧ್ಯಕ್ಷ ಎಸ್. ರಾಮಪ್ರಸಾದ್, ಉಪಾಧ್ಯಕ್ಷೆ ಡಾ.ಕೆ.ಲೀಲಾಪ್ರಕಾಶ್, ಪ್ರಧಾನ ಕಾರ್ಯದರ್ಶಿ ಕಿರಣ್ ಸಿಡ್ಲೇಹಳ್ಳಿ, ಮುಕ್ತಕ ಕವಯಿತ್ರಿ ವಿಜಯಾ ಪದ್ಮಶಾಲಿ ಅವರಿಗೆ ಡಾ.ಡಿವಿಜಿ ಮುಕ್ತಕ ಸಾಹಿತ್ಯ ಪ್ರಶಸ್ತಿ ಪ್ರದಾನ, ಸನ್ಮಾನ: ವಿದುಷಿ ಕೋವಿಲಡಿ ಅರ್ಚನಾ ಎಲ್.ರಾವ್ (ಸಂಗೀತ), ಡಾ.ವಿ.ರಂಗನಾಥ್ (ಆಡಳಿತ, ಸಾಹಿತ್ಯ), ಡಾ.ಬಿ.ಆರ್. ಗುರುಪ್ರಸಾದ್ (ವಿಜ್ಞಾನ), ಎಚ್.ರಾಮಚಂದ್ರನ್ (ಲೆಕ್ಕ ಪರಿಶೋಧನಾ, ಧಾರ್ಮಿಕ), ಎಂ.ಚಂದ್ರಶೇಖರ (ಸಾಹಿತ್ಯ ಕಲಾ ಸಂಘಟನೆ) ಮತ್ತು ಎಸ್.ನಟರಾಜ್ (ಶಿಕ್ಷಣ), ವಿದುಷಿ ಶುಭಾ ರಾಘವೇಂದ್ರ ಮತ್ತು ತಂಡದವರಿಂದ ಕನ್ನಡ ಜನಪದಗೀತೆಗಳ ಗಾಯನ, ಸ್ಥಳ: ರೋಟರಿ ಮೈಸೂರು ಪಶ್ಚಿಮ ಸಭಾಂಗಣ, ಕುವೆಂಪುನಗರ.

■ **ಎನ್.ಆರ್. ಮೊಹಲ್ಲಾ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಶ್ರೀ ತ್ಯಾಗರಾಜರ ಮತ್ತು ಶ್ರೀ ಪುರಂದರ ದಾಸರ ಆರಾಧನಾ ಮಹೋತ್ಸವ, ಬೆಳಗ್ಗೆ 9ರಿಂದ ನಾದಸ್ವರ ಮತ್ತು ಶ್ರೀ ತ್ಯಾಗರಾಜರ, ಶ್ರೀ ಪುರಂದರದಾಸರ ಕೃತಿಗಳನ್ನು ಹಾಡಲು ಅವಕಾಶ, ಬೆಳಗ್ಗೆ 11 ರಿಂದ ವಿದ್ವಾನ್ ಎನ್.ವಿ.ಸತ್ಯನಾರಾಯಣ, ವಿದುಷಿ ಹೆಚ್.ವಿ. ವಾಸವಾಂಬ ಅವರಿಗೆ ಸನ್ಮಾನ, ಮಧ್ಯಾಹ್ನ 12 ರಿಂದ ಶ್ರೀ ತ್ಯಾಗರಾಜರ ಪಂಚರತ್ನ ಕೃತಿಗಳ ಗೋಷ್ಠಿಗಾಯನ, ಮಧ್ಯಾಹ್ನ 1.15ಕ್ಕೆ ಮುಕ್ತಾಯ, ಮಹಾಮಂಗಳಾರತಿ, ಸ್ಥಳ: ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಎನ್.ಆರ್. ಮೊಹಲ್ಲಾ.

■ **ಮೈಸೂರಿನ ಹರಿದಾಸ ಸಂಗೀತೋತ್ಸವ ಸಮಿತಿ :** ಗಾನಸಿರಿ-ವೇದಾಂತ ಲಹರಿ ಭಾಗ-12, ರುಗ್ಮಿಣೀಶ ವಿಜಯ ಸಪ್ತಾಹ, ಉದ್ಘಾಟನೆ : ವ್ಯಾಸ ರಾಜ ಮಠದ ಪೀಠಾಧಿಪತಿಗಳಾದ ಶ್ರೀ 1008 ವಿದ್ಯಾಶ್ರೀಶತೀರ್ಥ ಶ್ರೀಪಾದಂಗಳು, ವಿದ್ವಾಂಸರಿಂದ ಯತಿವರೇಣ್ಯರ, ದಾಸವರೇಣ್ಯರ ಕೀರ್ತನೆಗಳ ವಿಶ್ಲೇಷಣೆ, ಯುವ ಗಾಯಕರಿಂದ ಗಾಯನ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಸಂಜೆ 5 ರಿಂದ.

■ **ದಿ ಅನಾಥಾಲಯ, ಸಾಹಿತ್ಯ ಸಂಘ :** ವಾರ್ಷಿಕೋತ್ಸವ, ರಾಜ್ಯ ಮಟ್ಟದ 20ನೇ ವಾರ್ಷಿಕ ಕನ್ನಡ ಪ್ರಬಂಧ ಸ್ಪರ್ಧೆ ಮತ್ತು ರಾಜ್ಯ ಮಟ್ಟದ 3ನೇ ವಾರ್ಷಿಕ ಶಾಸ್ತ್ರೀಯ ಸಂಗೀತ ವಾದ್ಯ ಸ್ಪರ್ಧೆ, ಸ್ಥಳ: ಸದ್ವಿದ್ಯಾ ಶಿಕ್ಷಣ ಸಂಸ್ಥೆ, ನಾರಾಯಣಶಾಸ್ತ್ರಿ ರಸ್ತೆ, ಬೆಳಗ್ಗೆ 9ಕ್ಕೆ ಮತ್ತು ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ-ಡಾ.ವಿನೋದಾ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾಯಾನ-ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ-ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ-ನಿತಿನ್ ರಾಜಾರಾಂ ಶಾಸ್ತ್ರಿ, ಡಾ.ಪಿ.ಎಸ್. ಮುರಳೀಧರ್, ವ್ಯಾಖ್ಯಾನ-ಡಾ.ಬೋರೇಗೌಡ ಚಿಕ್ಕಮರಳಿ, 6.50 ರೈತರಿಗೆ ಸಲಹೆ, 7.15 ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ-ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು-ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕರುನಾಡ ಕಲ್ಪವೃಕ್ಷ -ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು-ತೆಂಗು ಅಭಿವೃದ್ಧಿ ಮಂಡಳಿ, ಬೆಂಗಳೂರು, 9.05 ಸಾಮಾನ್ಯ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು-Indian Cancer Society, Karnataka Chapter, 9.10 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ -ವಿಶ್ವ ಮಕ್ಕಳ ಕ್ಯಾನ್ಸರ್ ದಿನಾಚರಣೆಯ ಸಂಬಂಧವಾಗಿ 'ಮಕ್ಕಳಲ್ಲಿ ಕಂಡು ಬರುವ ಕ್ಯಾನ್ಸರ್‌ಗೆ ಚಿಕಿತ್ಸೆ' ಕುರಿತು ಮಾಹಿತಿ ನೀಡುತ್ತಾರೆ ಮೈಸೂರಿನ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಕನ್ಸಲ್ಟಂಟ್ ಪೀಡಿಯಾಟ್ರಿಕ್ ಹೆಮಟಾಲಜಿಸ್ಟ್ ಮತ್ತು ಅಂಕಾಲಜಿಸ್ಟ್ ಡಾ.ತರಂಗಿಣಿ ದುರುಗಪ್ಪ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ-ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ-ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 KRISH - TRISH and Balty boy, ನಾವು ಭಾರತೀಯರು 'ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ', 10.45 ಮಕ್ಕಳ ಮಂಟಪ-ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಸಂದರ್ಭದಲ್ಲಿ ಮೈಸೂರಿನ ದೆಹಲಿ ಪಬ್ಲಿಕ್ ಶಾಲೆಯ ಮಕ್ಕಳಿಂದ ಕಾರ್ಯಕ್ರಮ.

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ಆಯುಷ್‌ವಾಣಿ-ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು-ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ -ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಸಾಮಾನ್ಯ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ: ಪ್ರಾಯೋಜಕರು-Indian Cancer Society, Karnataka Chapter, 1.25 ಭಾವಗೀತೆಗಳು, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ-ಕಾಮನಬಿಲ್ಲು, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ-ತಾಳಮದ್ದಲೆ, ಪ್ರಸಂಗ -ದೇವಸೇನಾನಿ, ಪ್ರಸ್ತುತಿ-ಕಾಸರಗೋಡು ಜಿಲ್ಲೆ ಮಧೂರಿನ ಉಳಿಯ ಶ್ರೀ ಧನ್ವಂತರಿ ಯಕ್ಷಕಲಾ ಸಂಘದ ಸದಸ್ಯರು, 4.45 ಚಿತ್ರಗೀತೆಗಳು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ-ತೋರಣ ಹೂರಣ-ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಪ್ರಭುಸ್ವಾಮಿ ಮಳಿಮಠ್, ಕೃಷಿಲೋಕ, ಕೃಷಿ ದರ್ಪಣ-ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ, ಮುನ್ನೋಟ ಪ್ರಸ್ತುತಿ: ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಹಾದಿಯಲ್ಲಿ ಕಂಡ ಮುಖ-ಬಾನುಲಿ ಸರಣಿ, ಯಳಂದೂರು ತಾಲೂಕು ಯರಿಯೂರಿನ ಜನಪದ ಹಾಡುಗಾರ್ತಿ ಹಾಗೂ ಆಶುಕವಿ ಮಾಳಗರಸಮ್ಮ ಮತ್ತು ಸಂಗಡಿಗರೊಂದಿಗೆ ಸಂವಾದ. ಪ್ರಸ್ತುತಿ : ಅಬ್ದುಲ್ ರಶೀದ್, 9.15 ರಂಗಗೀತೆಗಳು, 9.30 ರಾಷ್ಟ್ರೀಯ ನಾಟಕ, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ ಪಂಡಿತ್. ಶಂಭು ಪ್ರಸಾದ್ ಪವರ್-ಹಾಡುಗಾರಿಕೆ

■ **ಅನ್ವೇಷಣಾ ಸೇವಾ ಟ್ರಸ್ಟ್:** ಅರಸು ಪತ್ರಿಕೆ 12ನೇ ವರ್ಷದ ವಿಶೇಷ ಸಂಚಿಕೆ ಲೋಕಾರ್ಪಣೆ, ಸಾಧಕರಿಗೆ ಧ್ವನಿ ಕೊಟ್ಟ ಧಣಿ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಮಿತಿ ರಾಷ್ಟ್ರೀಯ ಕಾರ್ಯದರ್ಶಿ ಸೂರಜ್ ಹೆಗ್ಡೆ, ಡಿ. ದೇವರಾಜ ಅರಸ್ ಭಾವಚಿತ್ರಕ್ಕೆ ಪುಷ್ಪಾರ್ಚನೆ: ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಧ್ವನಿಕೊಟ್ಟ ಧಣಿ ಪ್ರಶಸ್ತಿ ಪ್ರದಾನ: ಸಂಗೀತ ವಿವಿ ಕುಲಪತಿ ಡಾ.ನಾಗೇಶ್ ವಿ. ಬೆಟ್ಟಕೋಟೆ, ಅರಸು ಪತ್ರಿಕೆ ವಿಶೇಷ ಸಂಚಿಕೆ ಲೋಕಾರ್ಪಣೆ: ಟ್ರಸ್ಟ್ ಸ್ಥಾಪಕ ಅಧ್ಯಕ್ಷ ಆರ್ಯ ಅಮರ್‌ನಾಥರಾಜೇ ಅರಸ್, ಅಧ್ಯಕ್ಷತೆ: ಕಂಠೀರವ ಸ್ಟುಡಿಯೋ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮಿ ಅರಸ್, ಪುಸ್ತಕ ತಾಂಬೂಲ ವಿತರಣೆ: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮುಖ್ಯ ಅತಿಥಿಗಳು: ಮಾಜಿ ಸಚಿವ ಎಂ.ಶಿವಣ್ಣ, ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಎಚ್.ಎ. ವೆಂಕಟೇಶ್, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11.45ಕ್ಕೆ

■ **ಜಿ.ಎಂ. ತಂದಾನಿ ಸಾಂಸ್ಕೃತಿಕ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** 8ನೇ ವರ್ಷದ ವಾರ್ಷಿಕೋತ್ಸವ, ಜನಪದ ಸಂಗಮರ ಉತ್ಸವ, ಮುಖ್ಯ ಅತಿಥಿಗಳು: ಶಾಸಕ ಜಿ.ಟಿ.ದೇವೇಗೌಡ, ಸಿದ್ದಲಿಂಗಪುರ ಗ್ರಾಪಂ ಅಧ್ಯಕ್ಷ ಸಿ.ಮಾದೇಶ್, ಪಿಡಿಓ ಬಸವರಾಜು, ತಾಪಂ ಸದಸ್ಯ ರೇವಣ್ಣ, ಗ್ರಾಪಂ ಸದಸ್ಯರಾದ ಜ್ಯೋತಿ ಶಿವಮಲ್ಲು, ಲಲಿತಮ್ಮ ಯತಿರಾಜ್, ಸ್ಥಳ: ಹಳೆ ಕೆಸರೆ ಮೈದಾನ ಮುನೇಶ್ವರ ದೇವಸ್ಥಾನದ ಎದುರು, ಸಂಜೆ 5ಕ್ಕೆ.

■ **ವಿಶ್ವರತ್ನ ಚಾರಿಟಬಲ್ ಟ್ರಸ್ಟ್, ಹೆಚ್.ಎನ್. ಲಾ ಅಸೋಸಿಯೇಟ್ಸ್ :** 2025ರ ಲಾಯರ್ಸ್ ಡೈರಿ ಬಿಡುಗಡೆ, ಸಾನ್ನಿಧ್ಯ: ಗಾಂಧಿನಗರ ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಡೈರಿ ಬಿಡುಗಡೆ: ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಅಧ್ಯಕ್ಷತೆ: ಮೈಸೂರು ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್, ಮುಖ್ಯ ಅತಿಥಿಗಳು: ಪಶು ಸಂಗೋಪನಾ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಶಾಸಕ ತನ್ವೀರ್ ಸೇಠ್, ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ, ಶಾಸಕ ಜಿ.ಟಿ.ದೇವೇಗೌಡ, ಸಂಸದ ಸುನೀಲ್‌ಬೋಸ್, ಶಾಸಕರಾದ ಕೆ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಅನಿಲ್ ಚಿಕ್ಕಮಾದು, ಡಿ.ರವಿಶಂಕರ್, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಎಂ. ಲಕ್ಷ್ಮಣ್, ಹೆಚ್.ವಿ.ರಾಜೀವ್, ಡಾ.ಬಿ.ಜೆ.ವಿಜಯಕುಮಾರ್, ಎನ್.ಭಾಸ್ಕರ್, ಸಿ.ಶೇಷಯ್ಯ, ಟ್ರಸ್ಟ್ ಅಧ್ಯಕ್ಷ ಡಾ.ಹೆಚ್.ಬಿ.ಸೋಮಶೇಖರ ಹಾನವಾಡಿ, ಸ್ಥಳ: ರೋಟರಿ ಶಾಲೆ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀರಾಮಕೃಷ್ಣ ವಚನವೇದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ರಂಗಾಯಣ :** ರಂಗಾಯಣ ರೆಪರ್ಟರಿ ಹಿರಿಯ ಕಲಾವಿದರಿಂದ ಕಾಣೆ ಆದವರು ನಾಟಕ ಪ್ರದರ್ಶನ, ಸಂಗೀತ, ನಿರ್ದೇಶನ : ಸೌರವ್ ಪೋದ್ದಾರ್, ಸ್ಥಳ: ಭೂಮಿಗೀತ, ರಂಗಮಂದಿರ, ಸಂಜೆ 6.30ಕ್ಕೆ.

■ **ಕದಂಬ ರಂಗ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ :** ಕದಂಬ ರಂಗಹಬ್ಬ, ಶಾಂತಲಾ ಕಲಾವಿದರು ಚಾಮರಾಜನಗರ ಅವರಿಂದ ಅಶ್ವಘೋಷ ನಾಟಕ ಪ್ರದರ್ಶನ, ರಚನೆ : ಬಿ.ಎಸ್. ವಿನಯ್, ಸಂಗೀತ : ಭಿನ್ನಷಡ್ಜ, ನಿರ್ದೇಶನ : ಚಿತ್ರಾ ವೆಂಕಟರಾಜು, ಸ್ಥಳ: ಕಿರುರಂಗ ಮಂದಿರ, ಸಂಜೆ 7ಕ್ಕೆ

ಸಶಕ್ತ ಕೇಂದ್ರ ಬಜೆಟ್ ಆರ್ಥಿಕತೆ ವೇಗ ಹೆಚ್ಚಿಸಲಿದೆ

● ಬಿಜೆಪಿ ರಾಜ್ಯ ವಕ್ತಾರ ಅಶೋಕ್ ಗೌಡ ವಿವರಣೆ ● ಮೈಸೂರು ಗ್ರಾಮಾಂತರ ಬಿಜೆಪಿಯಿಂದ ಬಜೆಟ್ ಸಂಬಂಧ ಸಂವಾದ

ಮೈಸೂರು, ಫೆ.15(ಎಂಕೆ)– ರಕ್ಷಣೆ, ಕೃಷಿ, ಮಹಿಳೆಯರು ಹಾಗೂ ಯುವ ಜನತೆಯ ಶ್ರೇಯೋಭಿವೃದ್ಧಿ ಸೇರಿದಂತೆ ರಫ್ತು ಮತ್ತು ಆಮದಿಗೆ ಹೆಚ್ಚಿನ ಆದ್ಯತೆ ನೀಡಿರುವ ಪ್ರಸಕ್ತ ಸಾಲಿನ ಕೇಂದ್ರ ಬಜೆಟ್, ಭಾರತದ ಆರ್ಥಿಕತೆಯ ವೇಗ ಹೆಚ್ಚಿಸಲಿದೆ ಎಂದು ಬಿಜೆಪಿ ರಾಜ್ಯ ವಕ್ತಾರ ಅಶೋಕ್ ಗೌಡ ಹೇಳಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಬಿಜೆಪಿ ಮೈಸೂರು ಗ್ರಾಮಾಂತರ ವಿಭಾಗದ ವತಿಯಿಂದ ಶನಿವಾರ ಆಯೋಜಿಸಿದ್ದ ಕೇಂದ್ರ ಬಜೆಟ್–2025–26 'ಸಶಕ್ತ ಭಾರತ–ವಿಕಸಿತ ಭಾರತ್' ಹಾಗೂ 'ಭಾರತ ಬಲವರ್ಧನೆಗೊಳ್ಳಲು ನರೇಂದ್ರ ಮೋದಿಯವರ ಆರ್ಥಿಕ ರೂಪುರೇಷೆಗಳು' ಸಂವಾದದಲ್ಲಿ ಮಾತನಾಡಿದ ಅವರು, ಪ್ರಧಾನಿ ಮೋದಿಯವರು ಬಜೆಟ್ ಮೂಲಕ 2030ಕ್ಕೆ ಭಾರತ ವಿಶ್ವದ 3ನೇ ಅತೀ ದೊಡ್ಡ ಆರ್ಥಿಕತೆ ಹಾಗೂ 2047ಕ್ಕೆ ವಿಶ್ವದ ನಂ.1 ರಾಷ್ಟ್ರವಾಗಲು ಅಡಿಪಾಯ ಹಾಕಿದ್ದಾರೆ ಎಂದರು.

ಮೈಕ್ರೋ ಫೈನಾನ್ಸ್‌ಗಳಲ್ಲಿ ಸಮಸ್ಯೆಗಳನ್ನು ನಿವಾರಿಸಲು ಸಹ ಮೋದಿಯವರು ಕೆಲಸ ಮಾಡುತ್ತಿದ್ದು, ದೇಶದ ಆರ್ಥಿಕತೆಯಲ್ಲಿ ಶೇ.70 ರಷ್ಟು ಮಹಿಳೆಯರು ಭಾಗವಹಿಸಬೇಕು ಎಂಬುದು ಅವರ ಮುಖ್ಯ ಗುರಿಯಾಗಿದೆ. ಮಧ್ಯಮ ವರ್ಗದವರಿಗೆ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಹೆಚ್ಚಿನ ಒಲವು ನೀಡಲಾಗಿದೆ. ಉಕ್ರೇನ್–ರಷ್ಯಾ ಯುದ್ದದ ನಡುವೆಯೂ ಅಡುಗೆ ಎಣ್ಣೆ ಬೆಲೆಯಲ್ಲಿ ನಿಯಂತ್ರಣ ತರಲು ಕೇಂದ್ರ ಸರ್ಕಾರ ಕ್ರಮ ತೆಗೆದುಕೊಂಡಿದ್ದು, ಮುಂದಿನ ದಿನಗಳಲ್ಲಿ ರಫ್ತು ಮಾಡುವ ಉದ್ದೇಶವನ್ನು ಒಳಗೊಂಡಿದೆ. ಸಣ್ಣ ಮತ್ತು ಸೂಕ್ಷ್ಮ ಉದ್ಯಮಗಳಿಗೆ ಆದ್ಯತೆ ನೀಡುವ ಮೂಲಕ ಕಳೆದ 10 ವರ್ಷದಲ್ಲಿ ಸುಮಾರು 18 ಕೋಟಿ ಉದ್ಯೋಗ ಸೃಷ್ಟಿಸಲಾಗಿದೆ ಎಂದು ಶ್ಲಾಘಿಸಿದರು.

ಮುಂದಿನ ಮೂರು ವರ್ಷದಲ್ಲಿಯೂ 4–5 ಕೋಟಿ ಉದ್ಯೋಗ ಸೃಷ್ಟಿಯಾಗಲಿದ್ದು, ತೆರಿಗೆ ಕಡಿಮೆಯಾಗಿ, ಬಂಡವಾಳ ಹೂಡಿಕೆ ಪ್ರಮಾಣ ಹೆಚ್ಚಾಗಲಿದೆ. ಗ್ರಾಮೀಣ ಪ್ರದೇಶಗಳಲ್ಲಿ ಪ್ರಮುಖ 5 ಕೌಶಲ್ಯ ಕೇಂದ್ರಗಳನ್ನು ತೆರೆಯುವುದು ಮೋದಿಯವರ ಗುರಿಯಾಗಿದ್ದು, ದೇಶದಲ್ಲಿ ವೈದ್ಯಕೀಯ ಹಾಗೂ ಇಂಜಿನಿಯರ್ ಕಾಲೇಜುಗಳ ಸಂಖ್ಯೆ ಹೆಚ್ಚಿಸಲಾಗಿದೆ. ಆಯುಷ್ಮಾನ್ ಯೋಜನೆ ಸೇರಿದಂತೆ ಆರೋಗ್ಯ ಕ್ಷೇತ್ರಕ್ಕೂ ಮಹತ್ವದ ಕೊಡುಗೆ ನೀಡಲಾಗಿದೆ ಎಂದು ತಿಳಿಸಿದರು.



ಕೇಂದ್ರ ಬಜೆಟ್ ಸಂವಾದದಲ್ಲಿ ಬಿಜೆಪಿ ರಾಜ್ಯ ವಕ್ತಾರ ಅಶೋಕ್ ಗೌಡ ಮಾತನಾಡಿದರು. ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಮತ್ತಿತರರಿದ್ದರು.

ವಿದೇಶಿ ಕಂಪನಿಗಳಿಗೆ ಅವಕಾಶ ನೀಡಬೇಕು: ನಂತರ ನಡೆದ ಸಂವಾದದಲ್ಲಿ ಮುಖಂಡರೊಬ್ಬರು, ರಾಜ್ಯದಲ್ಲಿ ಬೆಳೆಯುತ್ತಿರುವ ತಂಬಾಕು ಖರೀದಿಗೆ ಮೂರ್‍ನಾಲ್ಕು ಕಂಪನಿಗಳಿಗೆ ಮಾತ್ರವೇ ಅವಕಾಶ ನೀಡಲಾಗಿದೆ. ಇದರಿಂದ ತಂಬಾಕು ಬೆಳೆಗಾರರಿಗೆ ಸೂಕ್ತ ಬೆಲೆ ದೊರೆಯುತ್ತಿಲ್ಲ. ವಿದೇಶಿ ಕಂಪನಿಗಳಿಗೆ ಖರೀದಿಸಲು ಅವಕಾಶ ನೀಡಬೇಕು. ಇದರಿಂದ ತಂಬಾಕಿಗೆ ಉತ್ತಮ ಬೆಲೆ ದೊರೆಯಲಿದ್ದು, ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಚಿಂತನೆ ನಡೆಸಬೇಕು ಎಂದು ಅಭಿಪ್ರಾಯಪಟ್ಟರು.

ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ಅಗತ್ಯವಿದೆ: ಮಾಜಿ ಶಾಸಕ ಹರ್ಷವರ್ಧನ್ ಮಾತನಾಡಿ, ದೇಶದ ಅಭಿವೃದ್ಧಿಯ ಒಂದು ಭಾಗವಾದ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಬಜೆಟ್ ನೀಡುತ್ತಿರುವ ಆದ್ಯತೆ ಪ್ರಮಾಣ ಹೆಚ್ಚಾಗಬೇಕು. ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ತಂದಿರುವ ಯೋಜನೆಗಳ ಲಾಭವನ್ನು ಖಾಸಗಿ ಆಸ್ಪತ್ರೆಗಳು ಪಡೆದುಕೊಳ್ಳುತ್ತಿವೆ. ಕಳೆದ 10 ವರ್ಷದಿಂದಲೂ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ ನೀಡಿರುವ ಅನುದಾನ ಅಗತ್ಯವಿರುವಷ್ಟು ಹೆಚ್ಚಾಗಿಲ್ಲ. ಈ ಬಗ್ಗೆ ಸರ್ಕಾರ ಗಮನ ಹರಿಸಬೇಕು ಎಂದು ತಿಳಿಸಿದರು. ಈ ವೇಳೆ ಬಿಜೆಪಿ ಜಿಲ್ಲಾ ಉಪಾಧ್ಯಕ್ಷರಾದ ದಾಸಯ್ಯ ಹೆಳವರಹುಂಡಿ ಸಿದ್ದಪ್ಪ, ಸಹ ವಕ್ತಾರ ಶ್ರೀನಿವಾಸ್ ರೆಡ್ಡಿ ಮತ್ತಿತರರಿದ್ದರು.

> ಭಾರತದ ವೇಗದ ಬೆಳವಣಿಗೆಗೆ ವಿಕಸಿತ ಭಾರತ ಪರಿಕಲ್ಪನೆಯಲ್ಲಿ ಪ್ರಧಾನಿ ಮೋದಿಯರ ನೇತೃತ್ವದಲ್ಲಿ ವಿತ್ತ ಸಚಿವರಾದ ನಿರ್ಮಲಾ ಸೀತಾರಾಮನ್ ಅವರು, ಶೂನ್ಯ ಬಂಡವಾಳ, ಗುಣಮಟ್ಟದ ಶಿಕ್ಷಣ, ರೈತರ ವಿಶ್ವಾಸದ ಆಹಾರ ಕಣಜ, ಎಲ್ಲರನ್ನೊಳಗೊಂಡ ಅಭಿವೃದ್ಧಿ ಖಾತ್ರಿ ಸೇರಿದಂತೆ ಹತ್ತಾರು ಯೋಜನೆಗಳ ಉತ್ತಮ ಬಜೆಟ್ ಮಂಡಿಸಿದ್ದಾರೆ.
> – ಎಲ್.ಆರ್.ಮಹದೇವಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷ

ಹಸಿರು ನಮ್ಮ ಉಸಿರು

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯರಹಳ್ಳಿ
ಹೆಚ್.ಡಿ.ಕೋಟೆ, ಮೈಸೂರು ಜಿಲ್ಲೆ ಪಿನ್ ಕೋಡ್ – 571114
ಜಿ.ಮೇಲ್ : apmcyarahalli@gmail.com

ಸಂಖ್ಯೆ:ಕೃಉಮಾಸ(ಯ)/06/2024–25 ದಿನಾಂಕ: 14.02.2025

ಪ್ರಕಟಣೆ

ಯರಹಳ್ಳಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಿರ್ಮಿಸಿರುವ ವಿವಿಧ ಗೋದಾಮುಗಳನ್ನು ಲೀವ್ ಅಂಡ್ ಲೈಸನ್ಸ್ ಶುಲ್ಕದ ಆಧಾರದ ಮೇಲೆ 11 ತಿಂಗಳ ಅವಧಿಗೆ ನವೀಕರಿಸುವ, 33 ತಿಂಗಳಿಗೆ ಶೇ.5 ರಷ್ಟು ಹೆಚ್ಚಿಸುವ ಗರಿಷ್ಠ 55 ತಿಂಗಳ ಅವಧಿಗೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣಗಳಲ್ಲಿ ಆಸ್ತಿ ಹಂಚಿಕೆ ನಿಯಮಗಳು) ನಿಯಮಗಳು 2004ರ ನಿಯಮ 13 ಮತ್ತು 14 ರನ್ವಯ ಅರ್ಹ ಪೇಟೆ ಕಾರ್ಯಕರ್ತರುಗಳಿಗೆ ನಿಯಮಾನುಸಾರ ಹಂಚಿಕೆ ಮಾಡಲು ಕೆಳಗಿನಂತೆ ನಿಗದಿತ ನಮೂನೆಗಳಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

ಕ್ರ. ಸಂ.	ಕಟ್ಟಡದ ವಿವರ	ಗೋದಾಮಿನ ವಿವರ/ ಮೀಸಲಾತಿ	ನಿಗದಿಪಡಿಸಿದ ಮಾಸಿಕ ಲೀವ್ ಅಂಡ್ ಲೈಸೆನ್ಸ್ ಶುಲ್ಕ ರೂ	ಮುಂಗಡ ಹಣ ನಗದು/ಡಿಡಿ ಮೂಲಕ	ಅರ್ಜಿ ಶುಲ್ಕ (ತೆರಿಗೆ ಸೇರಿ)	ನೋಂದಣಿ ಶುಲ್ಕ
01	ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಅಂಗಡಿ ವ ಗೋದಾಮುಗಳು	06 ಸಂಖ್ಯೆ08,15,17,20, 27, 28	5,269–00	10,538–00	236–00	500.00
02	ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ 150 ಎಂ.ಟಿ. ಸಾಮಾರ್ಥ್ಯದ ಗೋದಾಮುಗಳು	02 ಸಂಖ್ಯೆ 03 ಮತ್ತು 04	21,651–00	43302–00	236–00	500–00
03	ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ 100 ಎಂ.ಟಿ. ಸಾಮಾರ್ಥ್ಯದ ಎಸ್.ಸಿ/ ಎಸ್.ಟಿ. ಗೋದಾಮು	01 ಸಂಖ್ಯೆ	25,599–00	51,198–00	236–00	500–00
04	50 ಎಂಟಿ ಸಾಮಾರ್ಥ್ಯದ ಎಲೆಕ್ಟ್ರಾನಿಕ್ ವೇ ಬ್ರಿಡ್ಜ್	01 ಸಂಖ್ಯೆ	15,009–00	30,018–00	236–00	500–00

ಷರತ್ತು ಮತ್ತು ನಿಬಂಧನೆಗಳು: 1) ಸಮಿತಿಯಿಂದ ಗೋದಾಮು ಪಡೆಯಲು ಇಚ್ಚಿಸುವವರು ದಿ: 14.02.2025 ರಿಂದ ದಿ:10.03.2025ರ ವರೆಗೆ. ಅರ್ಜಿ ಶುಲ್ಕ ಪಾವತಿಸಿ ಇ.ಎಂ.ಡಿ. ಯನ್ನು ಡಿ.ಡಿ. ಮೂಲಕ ಕಾರ್ಯದರ್ಶಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯರಹಳ್ಳಿ ಇವರಿಗೆ ಯರಹಳ್ಳಿಯಲ್ಲಿ ಪಾವತಿಯಾಗುವಂತೆ ಡಿ.ಡಿ. ಸಲ್ಲಿಸತಕ್ಕದ್ದು. **2)** ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ದಿ: 13.03.2025 ಸಾಯಂಕಾಲ 4.00 ರೊಳಗೆ ಕಛೇರಿಗೆ ಸಲ್ಲಿಸತಕ್ಕದ್ದು. **3)** ಹೆಚ್ಚಿನ ಮಾಹಿತಿಯನ್ನು ರಜಾ ದಿನಗಳನ್ನು ಹೊರತು ಪಡಿಸಿ ಕಛೇರಿವೇಳೆಯಲ್ಲಿ ಪಡೆಯಬಹುದು.

ಸಹಿ/– (ಹೆಚ್.ಎಸ್.ಕೃಷ್ಣಮೂರ್ತಿ), ಕಾರ್ಯದರ್ಶಿ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯರಹಳ್ಳಿ.

ಸಹಿ/– (ಎಸ್.ಸಂಗೀತಾ), ಆಡಳಿತಾಧಿಕಾರಿಗಳು,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯರಹಳ್ಳಿ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹುಣಸೂರು
ಜಿಲ್ಲೆ: ಮೈಸೂರು) ಪಿನ್– 571 105 (ರಾಜ್ಯ: ಕರ್ನಾಟಕ
ಕ್ರಮ ಸಂಖ್ಯೆ:ಕೃ.ಉ.ಮಾ.ಸ.(ಹು)/385/2024–25 ದಿ: 13.02.2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹುಣಸೂರು. ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿಯಿರುವ ಈ ಕೆಳಕಂಡ ಅಂಗಡಿ ಮಳಿಗೆಗಳನ್ನು ಯಥಾ ಸ್ಥಿತಿ (ಹೇಗಿದೆಯೋ ಹಾಗೆಯೇ) ಮಾಹೆಯಾನ ಲೀವ್ ಅಂಡ್ ಲೈಸೆನ್ಸ್ ಶುಲ್ಕದ ಆದಾರದ ಮೇಲೆ 55 ತಿಂಗಳ ಅವಧಿಗೆ 11 ತಿಂಗಳಿಗೊಮ್ಮೆ ನವೀಕರಿಸುವ ಮತ್ತು 33 ತಿಂಗಳಿಗೊಮ್ಮೆ ಪ್ರತಿಶತ ಶೇ.5 ರಷ್ಟು ಲೀವ್ ಅಂಡ್ ಲೈಸೆನ್ಸ್ ಶುಲ್ಕದ ದರಗಳನ್ನು ಹೆಚ್ಚಿಸುವ ಷರತ್ತಿಗೊಳಪಟ್ಟು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಗಳು 2004 ರನ್ವಯ ಹಂಚಿಕೆ ಮಾಡಲು ಅರ್ಹ ಪೇಟೆ ಕಾರ್ಯಕರ್ತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.1 ಅಂಗಡಿ ಮಳಿಗೆ ವಿವರ: ಹುಣಸೂರು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಒಳಭಾಗದ 8 ಸಂಖ್ಯೆ ಅಂಗಡಿ ಮಳಿಗೆಗಳು. **ಖಾಲಿಯಿರುವ ಅಂಗಡಿ ಸಂಖ್ಯೆ:** ಮಳಿಗೆ ಸಂಖ್ಯೆ 2, 3 **ನೋಂದಣಿ ಶುಲ್ಕ:** 1000 **ನಿಗಧಿಪಡಿಸಿರುವ ಲೀವ್ ಅಂಡ್ ಲೈಸೆನ್ಸ್ ಶುಲ್ಕ:** 3404 **ಪಾವತಿಸಬೇಕಾದ ಮುಂಗಡ:** 7000 **ಷರತ್ತು ಮತ್ತು ನಿಬಂಧನೆಗಳು: 1)** ಅರ್ಹ ಪೇಟೆ ಕಾರ್ಯಕರ್ತರು ವರ್ತಕರ ಲೈಸೆನ್ಸ್ ಪ್ರತಿಯೊಂದಿಗೆ ನೋಂದಣಿ ಶುಲ್ಕ ರೂ.1,000.00 ಗಳನ್ನು ಹಾಗೂ ಅರ್ಜಿ ಶುಲ್ಕ ರೂ.500=00 (ತೆರಿಗೆ ಸೇರಿ)ಗಳನ್ನು ಪಾವತಿಸಿ ನಮೂನೆ–1 ರಲ್ಲಿ ಅರ್ಜಿ ಸಲ್ಲಿಸಿ ದಿ: 28.02.2025ರ ಸಾಯಂಕಾಲ 4.00 ಗಂಟೆಯೊಳಗೆ ನೋಂದಣಿ ಮಾಡಿಕೊಳ್ಳತಕ್ಕದ್ದು. ನೋಂದಣಿ ಶುಲ್ಕವನ್ನು ಹಿಂದಿರುಗಿಸುವುದಿಲ್ಲ. **2)** ನೋಂದಣಿ ಪಡೆದ ಪೇಟೆ ಕಾರ್ಯಕರ್ತರು ನಿಗಧಿತ ಅರ್ಜಿ ನಮೂನೆ–3 ರಲ್ಲಿ ಮುಂಗಡ ಪಾವತಿಯೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿ: 03.03.2025 ಸಂಜೆ 5.00 ಗಂಟೆಯವರೆಗೆ. **3)** ಮುಂಗಡ ಪಾವತಿಯನ್ನು, ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,ಹುಣಸೂರು (SECRETARY, APMC, HUNSUR) ಇವರ ಹೆಸರಿಗೆ ಪಡೆದ ಬ್ಯಾಂಕ್ ಡಿಡಿ ಮೂಲಕ ಪಾವತಿಸುವುದು. **4)** ಅಂಗಡಿ ಮಳಿಗೆಗಳನ್ನು ಈ ಪ್ರಕಟಣೆ ಅನುಸಾರ ನೋಂದಣಿ ಪಡೆದ ಪೇಟೆ ಕಾರ್ಯಕರ್ತರಿಗೆ ನಿಯಮಾನುಸಾರ ಜೇಷ್ಠತಾ ಅರ್ಹತೆಯ ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು. **5)** ಅರ್ಹ ಪೇಟೆ ಕಾರ್ಯಕರ್ತರು 2021–22, 2022–23. 2023–24, 2024–25ನೇ ಸಾಲಿನವರೆಗಿನ ಈ ಸಮಿತಿಗೆ ಪಾವತಿಸಿರುವ ಮಾರುಕಟ್ಟೆ ಶುಲ್ಕದ ರಶೀದಿಯನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು. **6)** ಅಂಗಡಿ ಮಳಿಗೆಗಳನ್ನು ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರಿಂದ ಮಂಜೂರಾತಿ ಪಡೆದು ನಂತರ ಹಂಚಿಕೆ ಮಾಡಲಾಗುವುದು. **7)** ಹೆಚ್ಚಿನ ಷರತ್ತು ಹಾಗೂ ನಿಬಂಧನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯದರ್ಶಿ,
ಕೃ.ಉ.ಮಾ.ಸ ಹುಣಸೂರು

ಸಹಿ/– ಆಡಳಿತಾಧಿಕಾರಿ,
ಕೃ.ಉ.ಮಾ.ಸ., ಹುಣಸೂರು

ನಕ್ಕರೆ ಅದೇ ಸ್ವರ್ಗ

ಗುಂಡ : ಎಲ್ಲಿಗೆ ಹೋಗ್ತಾ ಇದ್ದಿ?
ಹೆಂಡತಿ : ಸಾಯೋಕೆ.
ಗುಂಡ : ಮತ್ತೆ ಯಾಕೆ ವಾಪಸ್ ಬಂದೆ?
ಹೆಂಡತಿ : ಸ್ಟೇಟಸ್ ಹಾಕೋದ್ ಮರ್ತಿದ್ದೆ!

ಮೈಸೂರು ಮಿತ್ರ

ಭಾನುವಾರ, 16 ಫೆಬ್ರವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.


ಅಮೃತ ವಾಹಿನಿ.........

ನೀವು ಎಷ್ಟೇ ಸಿರಿವಂತನಾಗಿರಬಹುದು. ಮೊದಲು ನಿಮ್ಮ ಮಕ್ಕಳಿಗೆ ಬಡತನದ ಪಾಠ ಹೇಳಿಕೊಡಿ. ಬಡತನದಿಂದ ಕಲಿತ ಪಾಠವೇ ನಿಮ್ಮ ಮಕ್ಕಳ ಭವಿಷ್ಯದ ಬಗ್ಗೆ ಬುನಾದಿಯಾಗುತ್ತದೆ. – ಜಗ್ಗೀ ವಾಸುದೇವ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತಾಯಿ ಬೇಕು / ಇಲ್ಲವೇ ಬಾಯಿ ಬೇಕು.

ನಿಮ್ಮ ಪತ್ರಗಳು

ಅಪಾಯ ಸ್ಥಿತಿಯಲ್ಲಿರುವ ಮರದ ಕೊಂಬೆ ತೆರವುಗೊಳಿಸಿ



ಮಾನ್ಯರೆ,

ಮೈಸೂರಿನ 17ನೇ ವಾರ್ಡಿನ ಬನ್ನಿಮಂಟಪ, ಸಿ–ಲೇಔಟ್, 7ನೇ ಕ್ರಾಸ್, ಅಮಯ ಬೇಕ್ ಪ್ಯಾಲೇಸ್ ಎದುರು, ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಮುಖ್ಯ ರಸ್ತೆ (ಸ್ಟೇಶನರಿ ಮತ್ತು ಜೆರಾಕ್ಸ್ ಬುಕ್ ಶಾಪ್ ಹತ್ತಿರ), ಇಲ್ಲಿ ತುಂಬಾ ಹಳೆಯದಾದ ಮರಗಳಿದ್ದು, ಇದರ ಕೊಂಬೆಗಳು ಯಾವುದೇ ಸಮಯದಲ್ಲಿ ಮುರಿದು ಬಿದ್ದು ಅಪಾಯ ಸಂಭವಿಸಬಹುದಾಗಿದೆ. ಈ ಪ್ರದೇಶದಲ್ಲಿ ಪ್ರತಿನಿತ್ಯ ನಾಗರಿಕರು, ವಿದ್ಯಾರ್ಥಿಗಳು, ಶಾಲಾ ವಾಹನಗಳು ಸಂಚರಿಸುತ್ತವೆ. ಆದಕಾರಣ ನಗರಪಾಲಿಕೆ ಆಯುಕ್ತರು ಹಾಗೂ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಇತ್ತ ಗಮನಹರಿಸಿ, ಸ್ಥಳ ಪರಿಶೀಲನೆ ಮಾಡಿ, ಆದಷ್ಟು ಬೇಗ ಅಪಾಯದ ಸ್ಥಿತಿಯಲ್ಲಿರುವ ಮರದ ಕೊಂಬೆಗಳನ್ನು ಕಡಿದು ಹಾಕಬೇಕೆಂದು ಈ ಮೂಲಕ ಮನವಿ.

–ಬನ್ನಿಮಂಟಪ ಎಜುಕೇಷನಲ್ ಮತ್ತು ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಎಸ್.ಕೆ.ಮುದಸಿರ್ ಪಾಷ, ಟ್ರಸ್ಟಿಗಳಾದ ಸೈಯದ್ ಮಸೂದ್ ರಜ್ವಿ, ಸಮಾಜ ಸೇವಕ ಮಿರ್ಜಾ ಜಂಷೀದ್ ಬೇಗ್ ಅಶ್ರಫಿ

ಕುಕ್ಕರಹಳ್ಳಿ ಕೆರೆಯಲ್ಲಿ ಅವ್ಯವಸ್ಥೆಯಿಂದ ಕೂಡಿರುವ ವಾಹನ ನಿಲುಗಡೆ ಸ್ಥಳ



ಮಾನ್ಯರೇ,

ಮೈಸೂರಿನ ಸರಸ್ವತಿಪುರಂನಲ್ಲಿರುವ ಕುಕ್ಕರಹಳ್ಳಿ ಕೆರೆಗೆ ದಿನನಿತ್ಯ ನೂರಾರು ವಾಯುವಿಹಾರಿಗಳು ತಮ್ಮ ವಾಹನಗಳಲ್ಲಿ ಬರುತ್ತಾರೆ. ಆದರೆ ಇಲ್ಲಿ ಮೀನು ಮಾರಾಟಗಾರರ ಮಳಿಗೆಗೆ ಹತ್ತಿರವಿರುವ ವಾಹನ ನಿಲುಗಡೆ ವ್ಯವಸ್ಥೆ ಸ್ವಲ್ಪವೂ ಸರಿ ಇಲ್ಲ. ಸ್ವಚ್ಛತೆ ಇಲ್ಲದೇ ಧೂಳು ಮೇಲೇಳುತ್ತಿದೆ. ಕಾರಣ ಇಲ್ಲಿ ಗಾರೆ ಕಲ್ಲುಗಳು ಮೇಲೆದ್ದು, ಹಳ್ಳ, ಕೊಳ್ಳಗಳಿಂದ ಕೂಡಿದೆ. ದ್ವಿಚಕ್ರ ಹಾಗೂ ನಾಲ್ಕು ಚಕ್ರಗಳ ವಾಹನ ನಿಲ್ಲಿಸಲು ಜನರು ಹರಸಾಹಸ ಪಡಬೇಕಿದೆ. ಮಳೆಗಾಲದಲ್ಲಂತೂ ಈ ಜಾಗಕ್ಕೆ ಕಾಲಿಡುವಂತಿಲ್ಲ. ಇದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆ ಆಗುತ್ತಿದೆ. ಅದೂ ಅಲ್ಲದೇ ಕುಳಿತುಕೊಳ್ಳಲು ಯಾವುದೇ ವ್ಯವಸ್ಥೆ ಇಲ್ಲ. ಜನರು ನಿಂತುಕೊಂಡೇ ತಿಂಡಿ, ತಿನಿಸುಗಳನ್ನು ತಿಂದು ಅಲ್ಲೇ ಗಲೀಜು ಮಾಡುತ್ತಿದ್ದು, ಅಶುದ್ಧ ವಾತಾವರಣ ನಿರ್ಮಾಣವಾಗಿದೆ. ಇದು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಜಾಗವೂ ಹೌದು. ಹೆಚ್ಚಿನ ಅನಾಹುತ ಆಗುವ ಮೊದಲು ಮಾನ್ಯ ಕುಲಪತಿಗಳು ಇಲ್ಲಿಗೆ ಒಮ್ಮೆ ಭೇಟಿ ನೀಡಿ, ಈ ಪ್ರದೇಶವನ್ನು ಗಮನಿಸಿ ಅದನ್ನು ಸ್ವಲ್ಪ ವಿಶಾಲವಾಗಿ ವಿಸ್ತರಿಸಿ, ಡಾಂಬರು ರಸ್ತೆಯಾಗಿ ಮಾರ್ಪಾಟು ಮಾಡಿ ವಾಯುವಿಹಾರಿಗಳಿಗೆ ಅನುಕೂಲ ಮಾಡಿಕೊಡಬೇಕಿದೆ.

–ನೊಂದ ವಾಯುವಿಹಾರಿಗಳು, ಕುಕ್ಕರಹಳ್ಳಿ ಕೆರೆ, ಸರಸ್ವತಿಪುರಂ, ಮೈಸೂರು.

ಪೊಲೀಸರಿಗೆ ಸಹಕಾರ ನೀಡಿ

ಮಾನ್ಯರೆ,

ಯಾವುದೇ ಪ್ರತಿಭಟನೆ ಮಾಡಬೇಕಾದರು ಪೊಲೀಸ್ ಇಲಾಖೆಯಿಂದ ಅನುಮತಿ ಪಡೆಯಬೇಕು. ಅಷ್ಟೇ ಯಾಕೆ ರಾಜಕೀಯ ಪಕ್ಷಗಳು, ಸಂಘ ಸಂಸ್ಥೆಗಳು ಅನುಮತಿ ಪಡೆದು ಹೋರಾಟ ಮಾಡುತ್ತಾರೆ. ಹೋರಾಟ ಯಾವಾಗಲೂ ಶಾಂತ ರೀತಿಯಲ್ಲಿ ಇರಬೇಕು. ಪ್ರತಿಭಟನೆಗೆ ಅನುಮತಿ ಪಡೆಯಲು ಪ್ರಾಧಿಕಾರ ಮೂಲಕ 7 ದಿನ, 15 ದಿನ, 30 ದಿನ ಎಂದು ಸಮಯ ನಿಗದಿಪಡಿಸಲಾಗಿದೆ. ಆದರೆ ಯಾರೋ ಒಬ್ಬರು ಸಾಮಾಜಿಕ ಜಾಲತಾಣದಲ್ಲಿ ಟ್ರೋಲ್ ಮಾಡಿದ್ರು ಅಂತ ಹೇಳಿ, ಏಕಾಏಕಿ ಪೊಲೀಸ್ ಠಾಣೆ, ಪೊಲೀಸರ ಮೇಲೆ ದಾಳಿ ಮಾಡುವುದು ತಪ್ಪು. ಎಲ್ಲದಕ್ಕೂ ಕಾನೂನು ಇದೆ. ಕಾನೂನಿನ ಪ್ರಕಾರ ಪ್ರಕ್ರಿಯೆಗಳು ನಡೆಯಬೇಕು ಮತ್ತು ಪೂರ್ಣಗೊಳ್ಳಬೇಕು. ಅದಕ್ಕೆ ಸ್ವಲ್ಪ ಸಮಯ ಬೇಕು. ಅಲ್ಲಿವರೆಗೂ ಕಾಯಬೇಕು. ಯಾರೋ ಒಬ್ಬರು ಟ್ರೋಲ್ ಮಾಡಿದ್ದು ಯಾರು ನೋಡುತ್ತಾರೋ, ಬಿಡ್ತಾರೋ ಗೊತ್ತಿಲ್ಲ ಆದರೆ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದಕ್ಕಿಂತ ಹೆಚ್ಚಾಗಿ ಸಾಮಾಜಿಕ ಜಾಲತಾಣಗಳ ಗ್ರೂಪ್‌ಗಳಿಗೆ ಫಾರ್ವರ್ಡ್ ಆಗಿ, ವೈರಲ್ ಮಾಡಿದ್ದರಿಂದ ಗೊಂದಲಕ್ಕೂ ಕಾರಣವಾಗಿರಬಹುದು. ದಿನನಿತ್ಯ ಸಾವಿರಾರೂ ಟ್ರೋಲ್‌ಗೆ ಒಬ್ಬೊಬ್ಬರು ಗುರಿಯಾಗುತ್ತಿದ್ದಾರೆ. ಆದರೆ ಅವರು ಯಾರು ತಲೆಕೆಡಿಸಿಕೊಳ್ಳದೇ ಪಬ್ಲಿಸಿಟಿ ಜಾಸ್ತಿ ಆಗಲಿ ಬಿಡು ಅನ್ನುವವರೇ ಹೆಚ್ಚು. ಹಾಗಾಗಿ ಪೊಲೀಸರಿಗೆ ತನಿಖೆ ಮಾಡಲು ಸಂಪೂರ್ಣ ಕಾಲಾವಕಾಶ ನೀಡಬೇಕು.

ತಾಳ್ಮೆ, ಸಮಾಧಾನ ಇಲ್ಲದೇ ಮತ್ತು ಕಾಲಾವಕಾಶ ನೀಡದೇ ಒಮ್ಮೆಗೆ ಆರೋಪಿಗೆ ಶಿಕ್ಷೆ ಕೊಡಿ ಅಂದ್ರೇ ಪೊಲೀಸರು ನ್ಯಾಯಾಧೀಶರಲ್ಲ. ಕಾನೂನಿನ ಪ್ರಕ್ರಿಯೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಮುಂದೇನು ಮಾಡಬೇಕು ಎಂಬ ತೀರ್ಮಾನಕ್ಕೆ ಬರುತ್ತಾರೆ. ಅಲ್ಲಿವರೆಗೆ ತಾಳ್ಮೆವಹಿಸದೇ. ಏಕಾಏಕಿ ಪೊಲೀಸ್ ಠಾಣೆ ನುಗ್ಗಿ, ದಾಳಿ ಮಾಡಿದ್ರೆ ಪೊಲೀಸರಲ್ಲಿ ಯಾರಿಗಾದರೂ ಗಂಭೀರ ಗಾಯವಾಗಿ ಅಂಗವಿಕಲರಾದರೇ, ಆಕಸ್ಮಿಕ ಜೀವಕ್ಕೆ ಕುತ್ತು ಬಂದರೇ ಯಾರು ಹೊಣೆ? ಯಾರು ಕಾನೂನಿನ ಪ್ರಕಾರ ನಡೆದುಕೊಳ್ಳುತ್ತಾರೋ ಅವರಿಗೆ ಇರುವಷ್ಟು ಗೌರವ ಬೇರೆ ಯಾರಿಗೂ ಇರುವುದಿಲ್ಲ. ಅದಕ್ಕೆ ತನಿಖೆ ಮಾಡಲು ಸಮಯ ನೀಡಬೇಕು. ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಬೇಕು. ಕರ್ನಾಟಕ ರಾಜ್ಯ ಅತ್ಯುತ್ತಮ ಸುಂದರ ನಗರಗಳನ್ನು ಹೊಂದಿದೆ. ಅಲ್ಲದೇ ಇಲ್ಲಿನ ಜನ ಧಾರ್ಮಿಕ ಮೌಲ್ಯಗಳಿಗೆ ಹೆಚ್ಚಿನ ಬೆಲೆ ಕೊಡ್ತಾರೆ. ನಮ್ಮ ರಾಜ್ಯದಲ್ಲಿರುವ ಧಾರ್ಮಿಕ ಕ್ಷೇತ್ರಗಳು ಪ್ರಸಿದ್ಧಿ ಪಡೆದಿವೆ. ರಾಜ್ಯದ ವಿವಿಧ ದೇವಸ್ಥಾನಗಳಿಗೆ ಲಕ್ಷಾಂತರ ಭಕ್ತರು ಭೇಟಿ ನೀಡಿ. ದೇವರ ದರ್ಶನ ಮಾಡುತ್ತಾರೆ. ಕರ್ನಾಟಕ ರಾಜ್ಯದಲ್ಲಿರುವ ಸುಂದರ ನಗರಗಳು, ಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳಿಗೆ ಮನಸೋತು ವಿದೇಶಿ, ಬೇರೆ–ಬೇರೆ ರಾಜ್ಯದ ಪ್ರವಾಸಿಗರು ಬರುತ್ತಾರೆ. ಅದಕ್ಕೆ ಎಲ್ಲರೂ ಕಾನೂನು ಪ್ರಕಾರ ನಡೆದುಕೊಳ್ಳುವ ಮೂಲಕ ಸಹಕರಿಸುವ ಮನೋಭಾವ ಬೆಳೆಸಿಕೊಳ್ಳುವ ಕಲೆ ಜನರ ಮನದಲ್ಲಿ ಬರಲಿ ಎಂಬ ಆಶಯ.

–ವೀರೇಶ ಧೂಪದಮಠ, ಮೈಸೂರು.



ಅಡಗೂರು ಹೆಚ್.ವಿಶ್ವನಾಥ್
ಸಾಹಿತಿ–ರಾಜಕಾರಣಿ
ಮೊ: 9663996390

ಹಳ್ಳಿ ಹಕ್ಕಿ ಹಾಡು



ಮಹಾ ಕುಂಭಮೇಳ; ಭಾರತೀಯರ ಸಂಭ್ರಮ–ಸಮ್ಮಿಲನ

ಈಗ ಎಲ್ಲೆಲ್ಲೂ ಮಹಾಕುಂಭ ಮೇಳದ್ದೇ ಹವಾ. ಭಾರತೀಯ ಮನಸುಗಳು ಬಹುಕಾಲದಿಂದ ಕಾದಿದ್ದ ಇಂತಹ ಸಂಭ್ರಮಕ್ಕೆ ನಮ್ಮ ತಲೆಮಾರು ಸಾಕ್ಷಿಯಾಗಿದ್ದು ಸತ್ಯ. ಮೂರು ಪುಣ್ಯ ಪಾವನ ನದಿಗಳು ಸಂಗಮವಾಗುವಲ್ಲಿ, ಸೂರ್ಯ–ಚಂದ್ರ–ಗುರುಗ್ರಹಗಳು ತಮ್ಮ ಪರಿಭ್ರಮಣೆಯ ಒಂದು ಬಿಂದುವಿಗೆ ಬಂದಾಗ, ಉಂಟಾಗುವ ಶಕ್ತಿಯ ಅಲೆಗಳಲ್ಲಿ ಕುಂಭಮೇಳಗಳಾಗುತ್ತವೆ. ಆ ಸಮಯದಲ್ಲಿ ಪ್ರಕೃತಿ ಆ ದಿವ್ಯಜಲದಲ್ಲಿ ಶಕ್ತಿ ತುಂಬುತ್ತಾಳೆ. ಹಾಗೂ ಆ ದೇವ ಜನಗಳ ದಿವ್ಯತೆಯಲ್ಲಿ ಮಿಂದವರು ಜನನ–ಮರಣಗಳ ಚಕ್ರದಿಂದ ಮುಕ್ತಿ ಪಡೆಯುತ್ತಾರೆಂಬ ಪಾರಂಪರಿಕ ನಂಬಿಕೆ ನಮ್ಮದು. ಹಿಂದೂ ಧರ್ಮವು ಪುನರ್ಜನ್ಮದಲ್ಲಿ ವಿಶ್ವಾಸವನ್ನಿಟ್ಟಿದೆ. ಭವಚಕ್ರದಿಂದ ಪಾರಾಗಲು ಮಾಘಮಾಸದ ಈ ಅಪೂರ್ವ ಘಳಿಗೆಯ ಸ್ನಾನವು ಸೋಪಾನ ಎಂಬ ನಂಬಿಕೆ ನಮ್ಮನ್ನು ಈ ಅಮೃತ ಸ್ನಾನ ಮಾಡಿ ಪುನೀತರಾಗುವಂತೆ ಪ್ರೇರೇಪಿಸುತ್ತದೆ. ಪ್ರತಿ 12 ವರ್ಷಕ್ಕೊಮ್ಮೆ ಭಾರತದ ಪ್ರಯಾಗ, ನಾಸಿಕ್, ಉಜ್ಜಯಿನಿ ಹಾಗೂ ಹರಿದ್ವಾರಗಳಲ್ಲಿ ಇವು ನಡೆಯುತ್ತಾ ಬಂದಿದೆ. 12 ವರ್ಷಗಳಿಗೆ ಈ ಕುಂಭಮೇಳದ ಕಾಲಮಾಪನವಾಗಿರುವುದಕ್ಕೂ ಕಾರಣವಿದೆ. ಗುರು ಗ್ರಹದ ಪರಿಭ್ರಮಣೆಯ ಚಲನೆಯ ಅವಧಿ 12 ವರ್ಷಗಳು. ಚಾಂದ್ರಮಾನ ಪಂಚಾಂಗದ ಲೆಕ್ಕದ ಪ್ರಕಾರ ಈ ಅವಧಿ, ಘಳಿಗೆಗಳು ನಿರ್ಧರಿತವಾಗಿವೆ.



ಕುಂಭಮೇಳದ ಚರಿತ್ರೆ ಸಾವಿರಾರು ವರ್ಷಗಳದ್ದು. ಋಗ್ವೇದದಲ್ಲೇ ಇದರ ಮೊದಲ ಉಲ್ಲೇಖವಿದೆ ಎಂದು ಋತ್ವಿಕರು ಹೇಳುತ್ತಾರೆ. ಪ್ರಪಂಚದಲ್ಲೆಲ್ಲೂ ಈ ಗಾತ್ರದ ಧಾರ್ಮಿಕ ಮೇಳವಿಲ್ಲ. ಈ ಸಮಯದಲ್ಲಿ ದೇವತೆಗಳು ಪ್ರಸನ್ನರಾಗಿದ್ದು ನದಿಗಳಿಗೆ ದಿವ್ಯಶಕ್ತಿ ಒದಗಿ, ಕುಂಭಮೇಳ ನಡೆಯುವ ಭೂಮಿಯ ಗುರುತ್ವಾಕರ್ಷಣ ಹಾಗೂ ಆಯಸ್ಕಾಂತೀಯ ಶಕ್ತಿಗಳು ಬಲಗೊಂಡು, ಆ ಸ್ಥಳದಲ್ಲಿ ಓಡಾಡಿ, ಸ್ನಾನ ಮಾಡುವವರ ಶರೀರ, ಆತ್ಮ, ಬುದ್ಧಿ, ಹೃದಯಗಳನ್ನು ಪ್ರಭಾವಿಸುತ್ತದೆಂದೂ, ನರ ಮನುಷ್ಯರ ಚೇತನ ಗಳು ಬ್ರಹ್ಮಾಂಡದ ಚೈತನ್ಯದೊಡನೆ ಮಿಳಿತವಾಗಿ ಸಂಗಮವಾಗುತ್ತದೆಂದೂ ಪೂರ್ವಜರು ಹೇಳಿ ದ್ದಾರೆ. ಆಗಾಗ ಮನುಷ್ಯನಿಗೆ ಇಂತಹ ಅನು ಸಂಧಾನಗಳು ಜರೂರತ್ತಿದೆ.

ದೈನಿಕದ ಜಂಜಾಟಗಳಲ್ಲಿ ದಣಿದ ಜೀವ, ಆತ್ಮಗಳಿಗೆ ಇಂತಹ ಆಧ್ಯಾತ್ಮಿಕ, ಧಾರ್ಮಿಕ ಆಸರೆಯ ಅಗತ್ಯವಿದೆ. ಮನೋದೈಹಿಕ, ಭಾವನಾತ್ಮಕ ಆರೋಗ್ಯಕ್ಕೂ ಧಾರ್ಮಿಕ ಸಮ್ಮೇಳನಗಳು ಅವಶ್ಯವಾಗಿದೆ. ಇಡೀ ಭಾರತ ಹಾಗೂ ವಿಶ್ವದ ನಾಗರಿಕರು ಒಗ್ಗೂಡಿ, ಮತ್ತೆ ಚೈತನ್ಯ ಪಡೆವ ಈ ಮೇಳಗಳಿಗೆ ಚಿಕಿತ್ಸಕ ಗುಣವಿದೆ.

ಚಂದ್ರಗುಪ್ತಮೌರ್ಯನ ಆಸ್ಥಾನಕ್ಕೆ ಬಂದಿದ್ದ ವಿದೇಶಿ ಯಾತ್ರಿಕ ಮೆಗಸ್ತಾನೀಸ್ ಕುಂಭಮೇಳ ನಡೆದಿದ್ದನ್ನು ಉಲ್ಲೇಖಿಸಿದ್ದಾನೆ. ಆತ ಗ್ರೀಕ್ ವಿದ್ವಾಂಸ, ಪ್ರವಾಸಿ ಹಾಗೂ ಇತಿಹಾಸಕಾರ. ಮುಂದೆ ಹರ್ಷವರ್ಧನನ ಕಾಲದಲ್ಲಿ ಭಾರತದಲ್ಲಿ ಪ್ರವಾಸ ಮಾಡಿ ತಾನು ಕಂಡ ದಿನಗಳನ್ನು ದಾಖಲಿಸಿದ. ಚೀನಾದ ಹ್ಯು–ಎನ್–ತ್ಸಾಂಗ್ ಕೂಡ ಕುಂಭಮೇಳ ಕುರಿತು ಬರೆದಿದ್ದಾನೆ. ಆತನು ದೊರೆ ಹರ್ಷವರ್ಧನನು ತನ್ನ ರಾಣಿವಾಸ, ಕುಟುಂಬ, ಗುರುಜನ, ಮಂತ್ರಿಗಳು ಹಾಗೂ ಕಲಾವಿದರೊಡನೆ ಕುಂಭಮೇಳಕ್ಕೆ ಬಂದು, ಅಲ್ಲೇ ತಂಗಿ, ಮಿಂದು ನಂತರ ಉದಾರವಾಗಿ ಹಣ, ಚಿನ್ನ, ರತ್ನಗಳು, ಪೀತಾಂಬರಗಳನ್ನು ಭಕ್ತರಿಗೆ ದಾನ ಮಾಡಿದ್ದನ್ನು ಸೋಜಿಗದಿಂದ ವರ್ಣಿಸಿದ್ದಾನೆ.

ದೇಹ ದಂಡಿಸುವ, ಶುದ್ಧಗೊಳಿಸುವ ತೀರ್ಥಯಾತ್ರೆ, ಸ್ನಾನ, ಧ್ಯಾನ, ಜಪ ಮತ್ತು ದಾನ–ಇವು ಹಿಂದೂ ಧರ್ಮದ ಶಕ್ತಿ. ಆದಿಶಂಕರಚಾರ್ಯರೂ ಕೂಡ ಕುಂಭಮೇಳದಲ್ಲಿ ತಮ್ಮ ಆಧ್ಯಾತ್ಮಿಕ ಸಾಧನೆಯ ಔನ್ನತ್ಯಕ್ಕೇರಿದರೆಂಬ ಮಾತಿದೆ. ಹೀಗೆ ಭಾರತದ ವೇದ, ಪುರಾಣ, ಚರಿತ್ರೆ, ರಾಜವಂಶಗಳು, ಧರ್ಮಗುರುಗಳ ಮುನ್ನೋಟ, ಆಧ್ಯಾತ್ಮಿಕ ತರಂಗ ಗಳಿಂದ ಕುಂಭ ಮೇಳಗಳು ಜನರ ಶ್ರದ್ಧಾ ಕೇಂದ್ರ ಗಳಾದವು. ಬ್ರಿಟಿಷರ ಕಾಲದಲ್ಲೂ ಹಲವು ಕುಂಭಮೇಳಗಳು ಜರುಗಿದವು. ಆಗ ಅಲ್ಲಿ ವ್ಯಾಪಾರಿಗಳ ಸಂತೆಯೇ ನೆರೆಯಲಾರಂಭಿಸಿತು. ಅಲ್ಲಿಯ ವ್ಯಾಪಾರ–ವಹಿವಾಟುಗಳ ಮೇಲೆ ಸುಂಕವೂ ನಿರ್ಧರಿಸಲ್ಪಟ್ಟಿತು. ಕ್ಷಾರಿಕರೂ ತಮ್ಮ ಆದಾಯದ ಮೇಲೆ ತೆರಿಗೆ ನೀಡಬೇಕಾಗಿತ್ತು. ಬ್ರಿಟಿಷ್ ಸರ್ಕಾರ ಧಾರ್ಮಿಕ ಮೇಳಗಳಿಗೆ ಖರ್ಚು ಮಾಡಿದ ಹಣ ಹಾಗೂ ಅದರಿಂದ ಬಂದ ತೆರಿಗೆಯ ಲೆಕ್ಕವನ್ನು ಲಂಡನ್ನಿನ ಟವರ್‌ಬ್ರಿಡ್ಜ್‌ನ ಪತ್ರಾಗಾರದಲ್ಲಿ ಇಂದಿಗೂ ಇಟ್ಟಿದ್ದಾರೆ. UNESCO ಕೂಡ ಭಾರತದ ಕುಂಭಮೇಳಗಳಿಗೆ ಪಾರಂಪರಿಕ ಉತ್ಸವ ಎಂಬ ಮಾನ್ಯತೆ ಕೊಟ್ಟು, ಪುರಸ್ಕರಿಸಿದೆ. ಈಗಿಲ್ಲಿ ಸಾಧು–ಸಂತರು, ಯೋಗಿಗಳು, ಸಿದ್ಧ ಪುರುಷರು, ಸಾಧಕರು, ಕಲಾವಿದರು, ತತ್ವವೇತರು, ವಿಜ್ಞಾನಿಗಳು, ಗೃಹಿಣಿಯರು, ಕುಟುಂಬಸ್ಥರು, ವ್ಯಾಪಾರಿಗಳು, ನಟ–ನಟಿ, ರಾಜಕಾರಣಿಗಳು ಹೀಗೆ ಸಮಾಜದ ಎಲ್ಲರೂ ನೆರೆದಿದ್ದಾರೆ. ಈಗ ಕುಂಭಮೇಳಗಳು ರಾಜಕೀಯಗೊಳ್ಳುತ್ತಿವೆಯೇ?

ಇದನ್ನು ವಿರೋಧಿಸುವವರೂ, ಟೀಕಿಸುವವರೂ ಇಲ್ಲದಿಲ್ಲ. ಪರಿಸರವಾದಿಗಳು ನದಿ, ಪ್ರಕೃತಿಗೆ ಈ ಪರಿಯ ಜನಸಂದಣಿಯ ಒತ್ತಡ ಒಳ್ಳೆಯದಲ್ಲ ಎನ್ನುತ್ತಾರೆ. ಧರ್ಮವು ದೊಂಬಿಯಾಗಬಾರದು ಎನ್ನುವವರೂ ಇದ್ದಾರೆ. ಪಾಪ ತೊಳೆಯುವ ಈ ಹಪಾಹಪಿ ಏಕೆ? ಸರಳವಾಗಿ ಬದುಕಿದರಾಗದೇ ಅನ್ನುವ ವಾದವೂ ತಪ್ಪಲ್ಲ. ಪ್ರತಿಯೊಬ್ಬರೂ ದೇವರನ್ನು ತಲುಪಲು ಅವರದೇ ಆದ ಮಾರ್ಗ, ಸಿದ್ಧಾಂತ ಹೊಂದಿದ್ದಾರೆ. ಆ ಸ್ವಾತಂತ್ರ್ಯವನ್ನು ನಮ್ಮ ಸಂವಿಧಾನವು ಒಪ್ಪುತ್ತದೆ. ಆದರೆ ಇಲ್ಲೂ ರಾಜಕೀಯ ಪಕ್ಷಗಳು ರಂಗಪ್ರವೇಶ ಮಾಡಿವೆ. ಇದು ಆಡಳಿತ ಪಕ್ಷ, ವಿರೋಧ ಪಕ್ಷದ ಅದೇ ಹಳೇ ಆಟದ ಹೊಸ ಕಾಯಿಲೆಯಾಗಿದೆ.

ನಾನೂ ಮಹಾ ಕುಂಭಮೇಳಕ್ಕೆ ಹೋಗಿ ಬಂದೆ. ನಿಜಕ್ಕೂ ವ್ಯವಸ್ಥೆಗಳು ಅತ್ಯುತ್ತಮವಾಗಿದ್ದವು. ಟ್ರಾಫಿಕ್ ವ್ಯವಸ್ಥೆಯನ್ನೂ ಅನುಭವಿಸಿದ್ದಾಯಿತು. ಜನತೆಯ ಭಕ್ತಿಪರವಶತೆಯನ್ನು ಕಂಡು ಸಂತೋಷಿಸಿದ್ದಾಯಿತು. ನದಿ ನೀರು ಬಗ್ಗಡವಾಗುತ್ತಿದೆ ನಿಜ. ಆದರೆ ಗಂಗೆ ಇಂತಹ ಸ್ನಾನಗಳನ್ನು ತಡೆಯುವ ಚೈತನ್ಯ ಉಳ್ಳವಳು. ಇಡೀ ವಿಶ್ವವೇ ಇಲ್ಲಿ ಗಂಗೆಯ ತಟದಲ್ಲಿ ಏಕಾತ್ಮವಾಗಿದೆ. ಇದಂತೂ ನಿಜ.

> ದೈನಿಕದ ಜಂಜಾಟಗಳಲ್ಲಿ ದಣಿದ ಜೀವ, ಆತ್ಮಗಳಿಗೆ ಇಂತಹ ಆಧ್ಯಾತ್ಮಿಕ, ಧಾರ್ಮಿಕ ಆಸರೆಯ ಅಗತ್ಯವಿದೆ. ಮನೋದೈಹಿಕ, ಭಾವನಾತ್ಮಕ ಆರೋಗ್ಯಕ್ಕೂ ಧಾರ್ಮಿಕ ಸಮ್ಮೇಳನಗಳು ಅವಶ್ಯವಾಗಿವೆ. ಇಡೀ ಭಾರತ ಹಾಗೂ ವಿಶ್ವದ ನಾಗರಿಕರು ಒಗ್ಗೂಡಿ, ಮತ್ತೆ ಚೈತನ್ಯ ಪಡೆವ ಈ ಮೇಳಗಳಿಗೆ ಚಿಕಿತ್ಸಕ ಗುಣವಿದೆ.

ವಿಧ–ವಿಚಿತ್ರ ಬಾಬಾಗಳನ್ನು ಕಂಡೆ. ಸಾಂಪ್ರದಾಯಿಕ ಅಖಾಡಗಳು 13. ಅದಲ್ಲದೆ ದೇಶದ ಉದ್ದಗಲಗಳಿಂದ ತರಹೇವಾರಿ ಬಾಬಾಗಳು ಜನರನ್ನು ಆಕರ್ಷಿಸುತ್ತಿದ್ದರು. IIT ಬಾಬಾ, ಅಂಬಾಸಿಡರ್ ಬಾಬಾ, ಮನ್ಸೂಲರ್ ಬಾಬಾ, ತಲೆಯ ಮೇಲೆ ಸಸಿಗಳನ್ನು ಬೆಳೆಸಿಕೊಂಡ ಎನ್ವಿರಾನ್ಮೆಂಟ್ ಬಾಬಾ, ಕಂಪ್ಯೂಟರ್ ಬಾಬಾ, ಅನಾಜ್ವಾಲೆ (ಧಾನ್ಯಗಳ) ಬಾಬಾ, ರುದ್ರಾಕ್ಷಿ ಬಾಬಾ, Jewels ಬಾಬ, ಕಬೂತರ್ ಬಾಬಾ, ಸ್ನೇಕ್ ಬಾಬಾ, Zoo ಬಾಬಾ ಇವರೆಲ್ಲ ನೆರೆದಿದ್ದಾರೆ. ಒಟ್ಟಿನಲ್ಲಿ ಅವರವರಿಗೆ ಬೇಕಾದ್ದನ್ನು ಅರಸಿದ ಜನರಿಗೆ ಗಂಗೆ ಬೇಡಿದ್ದು ನೀಡುತ್ತಾಳೆ.

ಜಟಾಪಟಿಗಳೇನೇ ಇರಲಿ, ಕುಂಭಮೇಳ ಯಾವ ಸರ್ಕಾರದ ಸ್ವತ್ತೂ ಅಲ್ಲ. ಅದು ಜನರ ನಂಬಿಕೆಯ ನದಿ. ಅದನ್ನು ಗೌರವಿಸಬೇಕಲ್ಲದೆ, ಲೇವಡಿ ಮಾಡುವುದು ಭಾರತೀಯರಿಗೆ ಒಪ್ಪುವುದಿಲ್ಲ. ಪಕ್ಷವೇನೇ ಇರಲಿ, ಅಂತರಾಳದ ಧ್ವನಿಗೆ ಕಿವುಡಾಗಬಾರದು. ಮಾನ್ಯ ಪ್ರಧಾನಿಯವರು, ಸಂಪುಟ ಸಚಿವರು, ಘನತೆವೆತ್ತ ರಾಷ್ಟ್ರಪತಿಗಳು ಮೇಲಾಗಿ ದೇಶ–ವಿದೇಶದ ಗಣ್ಯರು ಹಿಂದೂ ಸಂಸ್ಕೃತಿಯ ಬಗ್ಗೆ ಪೂಜ್ಯತೆ ಹೊಂದಿರುವವರೆಲ್ಲಾ ಕುಂಭಮೇಳದ ಯಾತ್ರಿಕರಾಗಿ ಬಂದು, ಜನತೆಯ ಭಾವನೆಗಳನ್ನು ಪುರಸ್ಕರಿಸಿದ್ದು ವಿಶೇಷ. ನಮ್ಮ ರಾಜ್ಯದ ಉಪಮುಖ್ಯಮಂತ್ರಿಗಳೂ ಪತ್ನಿ ಸಮೇತ, ಮಂತ್ರೋಕ್ತಿ ಸ್ನಾನ ಮಾಡಿ ತಮ್ಮ ಸ್ವಂತಿಕೆ ನಿರೂಪಿಸಿದ್ದು ಕೂಡ ನನ್ನ ಮನಸೂರೆಗೊಂಡಿತು. ಮಹಾಕುಂಭ – ಅವರವರ ಭಾವಕ್ಕೆ, ಅವರವರ ಭಕುತಿಗೆ ಅಲ್ಲವೇ? 12 ವರ್ಷಗಳ 12 ಆವರ್ತದ ಈ ಮಹಾ ಕುಂಭಮೇಳದ ಬಗ್ಗೆ ನಾನೂ ನಿಮ್ಮಂತೆ ಒಬ್ಬ ಜಿಜ್ಞಾಸು, ಕುತೂಹಲಿ, ಭಕ್ತ ಅಷ್ಟೆ.

ಮತ್ತೆ ಮತ್ತೆ ನೆನಪಾಗುವ ಅಂಕೋರ್‌ವಾಟ್



ನಾದಲಹರಿ
ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಇಡೀ ವಿಶ್ವದಲ್ಲೇ ಅತ್ಯಂತ ದೊಡ್ಡ ಹಿಂದೂ ದೇವಾಲಯ ಇರುವ ತಾಣವೆಂದರೆ ಅಂಕೋರ್ ವಾಟ್ ಎಂಬುದನ್ನು ಎಳವೆಯಲ್ಲಿಯೇ ಕೇಳಿ, ಓದಿ ಅದರ ಬಗ್ಗೆ ಅದಮ್ಯ ಕುತೂಹಲ ಬೆಳೆಸಿಕೊಂಡಿದ್ದವಳಿಗೆ ಅದನ್ನು ಪ್ರತ್ಯಕ್ಷವಾಗಿ ನೋಡುವ ಅವಕಾಶ ಸಿಕ್ಕಿದ್ದು ಇತ್ತೀಚೆಗೆ. ಕಾಂಬೋಡಿಯಾದ ಸೀಮ್‌ರೀಪ್ ಎಂಬಲ್ಲಿಗೆ ಹೋಗಿಯೇ ಅಂಕೋರ್‌ವಾಟನ್ನು ತಲುಪಲು ಸಾಧ್ಯ. ಬೆಂಗಳೂರಿನಿಂದ ವಿಮಾನದಲ್ಲಿ ಬ್ಯಾಂಕಾಕ್ ಮೂಲಕ ಹಾದುಹೋಗಿ ಸೀಮ್‌ರೀಪ್ ನಲ್ಲಿ ಇಳಿದಾಗ ಮಹಡಿಗಳಿಲ್ಲದ, ಸಾಧಾರಣ ಉದ್ದನೆಯ ಮನೆಯಂತೆ ಕಾಣುತ್ತಿದ್ದ, 'ಇಷ್ಟು ಪುಟ್ಟ ವಿಮಾನ ನಿಲ್ದಾಣ ಇರಲೂ ಸಾಧ್ಯವೇ?' ಎಂಬ ಭಾವನೆ. ಕುತೂಹಲ, ನಿರೀಕ್ಷೆ, ಸಂಭ್ರಮದೊಂದಿಗೆ ನಿಲ್ದಾಣದ ಹೊರಗೆ ಬಂದಾಗ ನಮ್ಮ ಹೋಟೆಲಿನ ಸ್ವಾಗತಕಾರಿಣಿಯು ಮಾಸದ ಮುಗುಳ್ನಗೆಯೊಂದಿಗೆ ಕಾದಿದ್ದಳು. ಹೋಟೆಲಿನ ಕಾರಿನಲ್ಲಿ ನಮ್ಮನ್ನು ಕರೆದೊಯ್ಯುವಾಗ ಸ್ಥಳದ ಸ್ಥೂಲ ಪರಿಚಯ ಮಾಡಿಸಿದಳು. ಬೌದ್ಧಧರ್ಮವನ್ನು ಹೆಚ್ಚಾಗಿ ಅನುಸರಿಸುವ ಸೀಮ್‌ರೀಪ್‌ನ ಮಂದಿ ಆಡುವ ಭಾಷೆ– ಕೊಮಾಯಿನ್. ಸಾಂಪ್ರದಾಯಿಕ ನೋಟ ಹೊತ್ತ ಕಟ್ಟಡಗಳು, ಬೌದ್ಧ ದೇವಾಲಯಗಳನ್ನು ನೋಡುತ್ತಾ ಸಾಗಿ ಹೋಟೆಲನ್ನು ತಲುಪಿದಾಗ ಅದರ ಎರಡೂ ಬದಿಯಲ್ಲಿ ಭವ್ಯ ಗರುಡಾಕೃತಿಯನ್ನು ಕಂಡು ಅಚ್ಚರಿ.



ಕಾಂಬೋಡಿಯಾದ ಅಂಕೋರ್‌ವಾಟ್, ಜಗತ್ತಿನಾದ್ಯಂತ ಪ್ರವಾಸಿಗ ರನ್ನು ಸೆಳೆಯುತ್ತಿರುವ ಹಿಂದೂ ದೇವಾಲಯಗಳ ಸಮುಚ್ಚಯ. 'ಅಂಕೋರ್‌ವಾಟ್' ಮತ್ತು 'ಅಂಕೋರ್‌ಥಾಮ್' ಎಂಬ ಎರಡು ಬೃಹತ್ ದೇವಾಲಯ ಸಮುಚ್ಚಯಗಳನ್ನು ಕಟ್ಟಿಸಿದವರು ಎರಡನೆಯ ಸೂರ್ಯವರ್ಮ ಮತ್ತು ಏಳನೆಯ ಜಯವರ್ಮ ಎಂಬ ರಾಜರು. 'ಇದನ್ನು ಶಬ್ದಗಳಲ್ಲಿ ವರ್ಣಿಸಲು ಸಾಧ್ಯವೇಇಲ್ಲ'ವೆಂದ ಪೋರ್ಚು ಗೀಸ್‌ನ ಮೊದಲ ಪ್ರವಾಸಿಗ. 'ಜಗತ್ತಿನ ಅತ್ಯಂತ ಶ್ರೇಷ್ಠ ಕಲಾಕೃತಿಗೂ ಮೀರಿದ, ಗ್ರೀಕ್–ರೋಮನರ ಕೊಡುಗೆಗಿಂತ ಭವ್ಯವಾದ ಕಲಾಕೃತಿಗಳಿವು' ಎಂದ ನಂತರ ಬಂದ ಫ್ರೆಂಚ್ ಪ್ರಜೆ.

12ನೆಯ ಶತಮಾನದಲ್ಲಿ ಎರಡನೆಯ ಸೂರ್ಯವರ್ಮ ಕಟ್ಟಿಸಿದ ಅಂಕೋರ್‌ವಾಟ್ ದೇವಾಲಯ ಸಮುಚ್ಚಯಗಳು ಹಿಂದೂ ಸಂಸ್ಕೃತಿಯನ್ನು, ದೇವ ದೇವತೆಗಳನ್ನು, ಪುರಾಣ–ಮಹಾಕಾವ್ಯಗಳನ್ನು ಆವಿರ್ಭವಿಸಿಕೊಂಡಂತೆ ಭವ್ಯವಾಗಿ ತಲೆಯೆತ್ತಿ ನಿಂತಿವೆ. ಇಲ್ಲಿಯ ದೇವಾಲಯಗಳಲ್ಲಿ ಕಾಣುವ ಸಾಮಾನ್ಯ ಅಂಶವೆಂದರೆ, ಮೇರು ಪರ್ವತದ ಮೇಲಿರುವ ದೇವತೆಗಳ ವಾಸಸ್ಥಾನದ ಕಲ್ಪನೆಗೆ ಅನುಗುಣವಾಗಿ ಅವೆಲ್ಲವೂ ಎತ್ತರದಲ್ಲಿಯೇ ಇರುವುದು ಮತ್ತು, ಐದು ಅಂತಸ್ತುಗಳನ್ನು ಹೊಂದಿರುವುದು. ಪ್ರತೀ ಅಂತಸ್ತಿನ ನಾಲ್ಕು ದಿಕ್ಕುಗಳಲ್ಲಿಯೂ ಚಿಕ್ಕಚಿಕ್ಕ ಗುಡಿಗಳ ಗುಂಪು. ಕೊನೆಯ ಅಂತಸ್ತಿನಲ್ಲಿ ಮುಖ್ಯದೇವತೆಯ ಗರ್ಭಗುಡಿ. ಈ ಐದು ಗೋಪುರಗಳು ಮೇರು ಪರ್ವತದ ಐದು ಶಿಖರಗಳನ್ನು ಪ್ರತಿನಿಧಿಸುತ್ತವೆ. ಸೂರ್ಯವರ್ಮನು ಅಂದು ಪ್ರಚಲಿತವಿದ್ದ ಶೈವಧರ್ಮಕ್ಕೆ ಬದಲಾಗಿ ವಿಶಾಲವಾದ ವಿಷ್ಣು ಗುಡಿಯನ್ನು ತನ್ನ ರಾಜಧಾನಿ ಮತ್ತು ರಾಜ್ಯದ ಪ್ರಮುಖ ಗುಡಿಯನ್ನಾಗಿಸಲು ಮುಂದಾದುದು ಸೋಜಿಗ. ಅಂಕೋರ್‌ವಾಟ್‌ನ ವಿಷ್ಣು, ಶಿವನ ಗುಡಿಗಳೆಲ್ಲ ಕಾಲ ಕ್ರಮೇಣ ಬೌದ್ಧ ಗುಡಿಗಳಾಗಿ ಮಾರ್ಪಟ್ಟಿವೆ. ಫ್ರೆಂಚ್, ಅಮೇರಿಕಾ, ಚೈನ, ಕಾಂಬೋಡಿಯ ಮತ್ತು ವಿಯೆಟ್ನಾಮೀಯರ ಪರಸ್ಪರರ ಕಿತ್ತಾಟ, ಹಗೆತನದ ನಡುವೆ ಸಧ್ಯ ಜಗತ್ತಿನ ಅತ್ಯಂತ ಅಮೂಲ್ಯವಾದ ಈ ಸ್ಮಾರಕಗಳು ವಿಶ್ವ ಪಾರಂಪರಿಕ ಸಂರಕ್ಷಣೆಗೆ ಒಳಪಟ್ಟು ಈಗ ಸುರಕ್ಷಿತವಾಗಿವೆ.

ಸುಮಾರು 203 ಎಕರೆಯಷ್ಟು ವಿಶಾಲವಾದ ಸ್ಥಳದಲ್ಲಿ ಕಟ್ಟಲಾಗಿರುವ ಅಂಕೋರ್‌ವಾಟ್‌ನ ಈ ಸಮುಚ್ಚಯದ ಮೈಲುಗಟ್ಟಲೆ ಹೊರಭಾಗ ವನ್ನು ಆಳವಾದ ಕಮರಿ ಆವರಿಸಿಕೊಂಡಿದೆ. ಇದರ ಮಗ್ಗುಲಲ್ಲಿ 15 ಅಡಿ ಎತ್ತರದ ಸುಮಾರು 30 ಮೈಲಿ ಉದ್ದದ ಗೋಡೆಯ ಅವಶೇಷ ಗಳು. ನಾಲ್ಕು ದಿಕ್ಕಿಗೂ ತಲೆಎತ್ತಿರುವ ಗೋಪುರ ಮತ್ತು ಮಧ್ಯದ ಗೋಪುರಗಳ ಹಿಂಭಾಗದಿಂದ ಆಗುವ ಸೂರ್ಯೋದಯ ವನ್ನು ನೋಡಲು ನೂರಾರು ಮಂದಿ ಪ್ರತಿನಿತ್ಯ ಮುಂಜಾನೆ ಐದು ಗಂಟೆಗೇ ಇಲ್ಲಿ ನೆರೆಯುತ್ತಾರೆ. ಬೃಹತ್‌ಗಾತ್ರದ ಲಕ್ಷಾಂತರ ಮರಳುಗಲ್ಲಿನಿಂದ ಕಟ್ಟಿರುವ ಈ ಸಮುಚ್ಚಯಕ್ಕೆ ಮೂರು ಬಾಗಿಲುಗಳು. ಬಹುಶಃ ತನ್ನ ಗಾತ್ರದಿಂದಾಗಿ 'ಆನೆ ಬಾಗಿಲು' ಎಂದು ಕರೆಸಿಕೊಳ್ಳುವುದು ಒಂದಾದರೆ, ರಾಜಮನೆತನದವರಿಗಾಗಿಯೇ ಇದ್ದ ಮತ್ತೊಂದು ದ್ವಾರ. ಮೂರನೆಯ ಬಾಗಿಲಿನಿಂದ ನೀವು ಒಳಹೋಗಬಹುದು.

ಸಮುದ್ರಮಂಥನ ದೃಶ್ಯವು ಇಲ್ಲಿಯ ಪ್ರತೀ ದೇವಾಲಯದ ಹೊರಭಾಗದ ಅವಿಭಾಜ್ಯ ಅಂಗವಾಗಿದೆ. ಇಕ್ಕೆಲಗಳಲ್ಲಿಯೂ ಉದ್ದನೆಯ ವಾಸುಕಿಯ ಮೈಯನ್ನು ಹಿಡಿದೆಳೆಯುತ್ತಿರುವ ದೇವ–ದಾನವರು ಸಾಲುಸಾಲಾಗಿ ಕಾಣಿಸುತ್ತಾರೆ. ಸ್ಪಷ್ಟವಾಗಿ ಗೋಚರಿಸುವ ಅವರ ಮುಖದ ವ್ಯತ್ಯಾಸವನ್ನು ನೋಡುತ್ತಾ ಸುಮಾರು 1 ಕಿಲೋಮೀಟರಿ ನಷ್ಟು ದೂರವನ್ನು ಕ್ರಮಿಸಿದ ನಂತರವೇ ನೀವು ಗುಡಿಯನ್ನು ಸಮೀ ಪಿಸುವುದು. ವಿಶಾಲವಾದ ಪ್ರದೇಶದಲ್ಲಿ ಮೊದಲು ನಿಮಗೆ ಕಾಣುವುದು ಗ್ರಂಥಾಲಯದ ಅವಶೇಷ. ಅದನ್ನು ದಾಟಿದಾಗ ದೇವಾಲಯದ ಹೊರಭಾಗವನ್ನು ನೀವು ತಲುಪುತ್ತೀರಿ. ಮಹಾಭಾರತ, ರಾಮಾಯಣದ ಅದ್ಭುತ ಭಿತ್ತಿಚಿತ್ರಗಳು ನಿಮ್ಮನ್ನು ಸ್ವಾಗತಿಸುತ್ತವೆ. ಕಿಕ್ಕಿರಿದ ಕುರುಕ್ಷೇತ್ರ ಯುದ್ಧದ ಸನ್ನಿವೇಶ, ಕೃಷ್ಣ, ಅರ್ಜುನ, ಶರಶಯ್ಯೆಯಲ್ಲಿ ಮಲಗಿದ ಭೀಷ್ಮ, ವಾಲಿ–ಸುಗ್ರೀವರ ಕಾಳಗ, ಹಿಂದಿನಿಂದ ಬಾಣ ಪ್ರಯೋಗಿಸುತ್ತಿ ರುವ ರಾಮ, ಮತ್ತೊಂದು ಬದಿಯಲ್ಲಿ ಈ ದೇವಾಲಯವನ್ನು ಕಟ್ಟಿದ ಸೂರ್ಯವರ್ಮನ ಬದುಕಿನ ಚಿತ್ರಗಳು, ಮಗದೊಂದು ಬದಿಯಲ್ಲಿ 37ಸ್ವರ್ಗ–32 ನರಕದಲ್ಲಿನ ದೃಶ್ಯಗಳು, ಯಮನ ಒಡ್ಡೋಲಗ ಇವೆಲ್ಲವನ್ನೂ ಒಳಗೊಂಡ ಅತ್ಯಂತ ಸುಂದರ ಭಿತ್ತಿಗಳು ಮೈಮರೆಸುವುದ ರಲ್ಲಿ ಸಂಶಯವಿಲ್ಲ. ಮೇಲ್ಛಾವಣಿಯಲ್ಲಿ ಆಕರ್ಷಕ ಕೆತ್ತನೆಯನ್ನು ಕಾಣಬಹುದು. ಖ್ಮೆರ್ ಶೈಲಿಯಲ್ಲಿ ಕಟ್ಟಲಾಗಿರುವ ದೇವಾಲಯಗಳ ಅಂಕೋರ್‌ವಾಟ್ ಎಂಬ ಶಬ್ದವು ಸಂಸ್ಕೃತದಲ್ಲಿ ತನ್ನ ಬೇರುಗಳನ್ನು ಹೊಂದಿದೆ. ಸಂಸ್ಕೃತದಲ್ಲಿ 'ನಗರ' ಮತ್ತು 'ವಾಟ'ವು ಖ್ಮೆರ್ ಭಾಷೆಯಲ್ಲಿ ಅಂಕೂರ್ ಮತ್ತು ವಾಟ್ (ದೇವತಾ ಸ್ಥಳ) ಆಗಿದೆ. ಇದನ್ನು ಕಟ್ಟಿಸುತ್ತಿದ್ದ ಸೂರ್ಯವರ್ಮನ ಸಾವಿನಿಂದ ನಿರ್ಮಾಣ ಕೆಲಸವು ಅಪೂರ್ಣವಾಯಿತು. ದೊರೆಯು ಸತ್ತ 27 ವರ್ಷಗಳ ನಂತರ ಅಲ್ಲಿಯ ಚಂಪಾ ಜನಾಂಗವು ಅಂಕೋರ್‌ವಾಟನ್ನು ತೊರೆದರು ಎನ್ನುತ್ತದೆ ಇತಿಹಾಸ.

ಮುಂದುವರೆಯುವುದು....

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರಲ್ಲೇ ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರ ಉಳಿಸಿಕೊಳ್ಳಲು ಶತಪ್ರಯತ್ನ

ಕನ್ನಡ ಅನುಷ್ಠಾನ ಕುರಿತು ನಡೆದ ಅಧಿಕಾರಿಗಳ ಸಭೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಭರವಸೆ

ಮೈಸೂರು, ಫೆ.15(ಬಿಎಲ್‌ಯು)– ಕನ್ನಡ ಶಾಸ್ತ್ರೀಯ ಅತ್ಯುನ್ನತ ಅಧ್ಯಯನ ಕೇಂದ್ರವನ್ನು ಮೈಸೂರಿನಲ್ಲೇ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಶಕ್ತಿಮೀರಿ ಪ್ರಯತ್ನ ಮಾಡಲಾಗುವುದು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಭರವಸೆ ನೀಡಿದರು.

ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಇಂದು ಕನ್ನಡ ಅನುಷ್ಠಾನ ಕುರಿತು ನಡೆದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಕನ್ನಡ ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರವನ್ನು ಬೆಂಗಳೂರಿಗೆ ಸ್ಥಳಾಂತರ ಮಾಡದಂತೆ ಕೇಂದ್ರ ಮಾನವ ಸಂಪನ್ಮೂಲ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಈಗಾಗಲೇ ಭೇಟಿ ಮಾಡಿ, ಮನವಿ ಸಲ್ಲಿಸಿದ್ದೇವೆ ಎಂದು ತಿಳಿಸಿದರು.

ಪ್ರಸ್ತುತ ಮೈಸೂರಿನ ಭಾಷಾ ಅಧ್ಯಯನ ಕೇಂದ್ರದಲ್ಲಿ ನೆಲೆ ಕಂಡುಕೊಂಡಿದೆ. ಸಿಐಐ ಭಾಷಾ ಸಂಸ್ಥಾನವಾಗಿದ್ದು, ಅಲ್ಲಿ ಕನ್ನಡ ಸಾಹಿತ್ಯ ಅಧ್ಯಯನ ಕೇಂದ್ರ ಸ್ಥಾಪಿಸಿದರೆ ಹೆಚ್ಚಿನ ಫಲಿತಾಂಶ ನಿರೀಕ್ಷಿಸಲು ಸಾಧ್ಯವಿಲ್ಲ. ಕನ್ನಡ ಭಾಷೆ ತಿಳಿಯದ ಬಹಳಷ್ಟು ಜನರು ಅಲ್ಲಿದ್ದು, ಅವರಿಂದ ಕನ್ನಡ ಶಾಸ್ತ್ರೀಯ ಅಧ್ಯಯನವನ್ನು ಯಾವ ರೀತಿ ನಿರೀಕ್ಷೆ ಮಾಡಲು ಸಾಧ್ಯ ಎಂದು ಪ್ರಶ್ನಿಸಿದರು.

ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರಕ್ಕೆ ಸರ್ಕಾರ ನಾಲ್ಕೂವರೆ ಎಕರೆ ಭೂಮಿ ನೀಡಿದ್ದು, ಇಲ್ಲಿ ಶಾಶ್ವತ ಕಟ್ಟಡ ನಿರ್ಮಾಣ ಮಾಡಿ ಕನ್ನಡ ಶಾಸ್ತ್ರೀಯ ಸ್ಥಾನಮಾನದ ಬಗ್ಗೆ ಉನ್ನತ ಅಧ್ಯಯನ ಚಟುವಟಿಕೆಗಳ ಇಲ್ಲಿ ನಡೆಸಬಹುದು ಎಂದು ಹೇಳಿದರು.

ದೇಶದ ಅತ್ಯಂತ ಹಳೆಯ ಭಾಷೆಗಳಲ್ಲಿ ಕನ್ನಡ ಕೂಡ ಒಂದಾಗಿದ್ದು, 2008ರಲ್ಲಿ ಕೇಂದ್ರ ಸರ್ಕಾರ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ನೀಡಿದೆ. ಬೆಂಗಳೂರು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ವಿಚಾರದಲ್ಲಿ ವಿಶ್ವವನ್ನು ಆಕರ್ಷಿಸಿದೆ. ಈ ಹಿನ್ನೆಲೆ ಮೈಸೂರಿನಲ್ಲಿರುವ ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರವನ್ನು ಬೆಂಗಳೂರಿಗೆ ಸ್ಥಳಾಂತರಿಸಲು ಕೇಂದ್ರ ಸರ್ಕಾರ ಮುಂದಾಗಿದೆ ಎಂದರು.

ಆದರೆ ಮೈಸೂರಿನಲ್ಲೇ ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರ ಉಳಿಸಿಕೊಳ್ಳಲು ಎಲ್ಲಾ ಪ್ರಯತ್ನ ಮಾಡುತ್ತೇವೆ. ಧರ್ಮೇಂದ್ರ ಪ್ರದಾನ್ ಅವರು ಬೆಂಗಳೂರಿಗೆ ಬಂದ ಸಂದರ್ಭದಲ್ಲಿ ಇದನ್ನು ಮೈಸೂರಿನಲ್ಲೇ ಉಳಿಸಬೇಕೆಂಬ ಮಹತ್ವ ತಿಳಿಸುತ್ತೇವೆ ಎಂದು ಪುರುಷೋತ್ತಮ್ ಬಿಳಿಮಲೆ ತಿಳಿಸಿದರು.



ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಶನಿವಾರ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ್ ಬಿಳಿಮಲೆ ಅವರು, ಕನ್ನಡ ಅನುಷ್ಠಾನ ಕುರಿತಂತೆ ಕನ್ನಡಪರ ಸಂಘಟನೆಗಳ ಮುಖಂಡರ ಜೊತೆ ಸಭೆ ನಡೆಸಿದರು.

ಬೋರ್ಡ್‌ಗಳಲ್ಲಿ ಕನ್ನಡ ಬಳಸದಿದ್ದರೆ ಟ್ರೇಡ್ ಲೈಸನ್ಸ್ ನವೀಕರಣವಿಲ್ಲ!

ಮೈಸೂರಿನ ವಾಣಿಜ್ಯ ಮಳಿಗೆಗಳು, ವ್ಯಾಪಾರ–ವಹಿವಾಟು ಸ್ಥಳಗಳಲ್ಲಿ ನಾಮಫಲಕಗಳಲ್ಲಿ ಶೇಕಡ 60ರಷ್ಟು ಕನ್ನಡ ಬಳಕೆ ಮಾಡದಿದ್ದರೆ ಅಂತಹ ಅಂಗಡಿಗಳ ಟ್ರೇಡ್ ಲೈಸನ್ಸ್ ನವೀಕರಣ ಮಾಡುವುದಿಲ್ಲ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಎಚ್ಚರಿಸಿದ್ದಾರೆ. ಅಂಗಡಿಗಳ ನಾಮಫಲಕಗಳಲ್ಲಿ ಕನ್ನಡ ಭಾಷೆಯನ್ನು ಪೂರ್ಣವಾಗಿ ನಿರ್ಲಕ್ಷಿಸಿ ಇಂಗ್ಲಿಷ್ ಸೇರಿದಂತೆ ಇತರೆ ಭಾಷೆಗಳನ್ನು ಬಳಸಲಾಗುತ್ತಿದೆ ಎಂಬ ವಿಚಾರವನ್ನು ಪುರುಷೋತ್ತಮ ಬಿಳಿಮಲೆ ಸಭೆಯ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಲಕ್ಷ್ಮಿಕಾಂತರೆಡ್ಡಿ ಅವರು, ಅಂಗಡಿಗಳ ನಾಮಫಲಕಗಳಲ್ಲಿ ಶೇಕಡ 60:40 ಅನುಪಾತದ ಭಾಷೆ ಬಳಕೆ ಪಾಲಿಸಬೇಕು. ಕನ್ನಡ ಭಾಷೆಯನ್ನು ಶೇಕಡ 60 ಪ್ರಮಾಣದಲ್ಲಿ ಉಲ್ಲೇಖಿಸಬೇಕು. ಉಳಿದ 40 ರಷ್ಟು ಪ್ರಮಾಣವನ್ನು ಇಂಗ್ಲಿಷ್ ಸೇರಿದಂತೆ ತಮಗಿಷ್ಟದ ಭಾಷೆ ಬಳಸಬಹುದು. ಈ ನಿಯಮ ಕಡ್ಡಾಯವಾಗಿರುತ್ತದೆ ಎಂದರು.

ಅಂಗಡಿ ಮಾಲೀಕರು ಟ್ರೇಡ್ ಲೈಸನ್ಸ್ ನವೀಕರಣ ಮಾಡುವ ಸಂದರ್ಭದಲ್ಲಿ ಈ ನಿಯಮ ಪಾಲನೆ ಕುರಿತಂತೆ ಅಂಗಡಿ ಮುಂಭಾಗದ ಭಾವಚಿತ್ರ ತರಬೇಕು. ಈ ವೇಳೆ ಕನ್ನಡ ಭಾಷೆ ಕಡ್ಡಾಯವಾಗಿ ಅನುಸರಿಸದಿದ್ದರೆ ಮಾತ್ರ ಅಂತಹ ಅಂಗಡಿಗಳ ಟ್ರೇಡ್ ಲೈಸನ್ಸ್ ನವೀಕರಣ ಮಾಡುವುದಿಲ್ಲ ಎಂದು ಲಕ್ಷ್ಮಿಕಾಂತರೆಡ್ಡಿ ಎಚ್ಚರಿಸಿದರು.

- ಅನ್ಯ ಭಾಷಿಗರಿಗೆ ಕನ್ನಡ ಕಲಿಕಾ ಕೇಂದ್ರ
- ಜನರು ಮೈಕ್ರೋ ಫೈನಾನ್ಸ್‌ಗೆ ಹೋಗಲು ಇದು ಕಾರಣ
- ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕನ್ನಡಿಗರಿಗೆ ಆದ್ಯತೆ
- ಶಾಲೆಗಳ ಹಕ್ಕುಪತ್ರ ಪಡೆದು, ಸರ್ಕಾರದ ಆಸ್ತಿ ಉಳಿಸಿ

ನೌಕರರನ್ನು ವಜಾ ಮಾಡಿದ ಇನ್ಫೋಸಿಸ್‌ಗೆ ಪತ್ರ ಬರೆಯಿರಿ

ಮೈಸೂರಿನ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ಕನ್ನಡಿಗರು ಸೇರಿದಂತೆ ಬಹುಭಾಷೆಯ ನೌಕರರನ್ನು ಏಕಾಏಕಿ ಕೆಲಸದಿಂದ ವಜಾ ಮಾಡಿರುವ ಬಗ್ಗೆ ಜಿಲ್ಲಾಧಿಕಾರಿಗಳು ಇನ್ಫೋಸಿಸ್ ಸಂಸ್ಥೆಗೆ ಆಕ್ಷೇಪಣಾ ಪತ್ರ ಬರೆಯಬೇಕು ಎಂದು ಪುರುಷೋತ್ತಮ್ ಬಿಳಿಮಲೆ ಸೂಚನೆ ನೀಡಿದರು.

ಇನ್ಫೋಸಿಸ್‌ನಲ್ಲಿ 7 ಸಾವಿರಕ್ಕೂ ಹೆಚ್ಚು ನೌಕರರಿದ್ದಾರೆ. ಇವರಲ್ಲಿ ಕನ್ನಡಿಗರಿಗೆ ಆದ್ಯತೆ ನೀಡಬೇಕೆಂದು ಪತ್ರ ಬರೆಯಿರಿ ಎಂದು ಹೇಳಿದರು.

ಮಕ್ಕಳಿಗೆ ಕನ್ನಡ ಕಲಿಕೆ ಸುಲಭವಾಗಿರಬೇಕು. ಇಲ್ಲವೆಂದರೆ ಕನ್ನಡ ಕಲಿಕೆ ಕಠಿಣ ಎಂದು ಪುಸ್ತಕ ಮುಚ್ಚಿ ಮಕ್ಕಳು ಪಲಾಯನ ಮಾಡುತ್ತಾರೆ. ತರಗತಿಯ ಆರಂಭದಲ್ಲೇ ಮಕ್ಕಳಿಗೆ ಪಂಪ, ರನ್ನರ ಬಗ್ಗೆ ಹೇಳಿದರೆ ಅವರು ಕಲಿಯುವುದು ಕಷ್ಟ, ಕನ್ನಡ ಕಲಿಕೆಗೆ ಅಗತ್ಯ ವಿಚಾರ ಮೊದಲು ತಿಳಿಸಿ ಆ ನಂತರ ಪಂಪ, ರನ್ನರ ಬಗ್ಗೆ ಪಾಠ ಮಾಡಬೇಕು ಎಂದು ಸಲಹೆ ನೀಡಿದರು.

ತಮಿಳುನಾಡಿನಲ್ಲಿ ವೈದ್ಯರು ಔಷಧಿ ಹೆಸರನ್ನು ಕೂಡ ತಮಿಳು ಭಾಷೆಯಲ್ಲಿ ಬರೆದುಕೊಡುತ್ತಾರೆ. ಆದರೆ ನಮ್ಮಲ್ಲಿ ಇಂಗ್ಲಿಷ್ ಬಳಸುತ್ತಾರೆ. ತಮಿಳುನಾಡಿನಂತೆ ಭಾಷಾ ಪ್ರೇಮ ಕನ್ನಡಿಗರಲ್ಲೂ ಇರಬೇಕು ಎಂದರು. ಮೈಸೂರಿನ ಕನ್ನಡಪರ ಸಂಘಟನೆಗಳು ಸಕ್ರಿಯರಾಗಿದ್ದಾರೆ. ಕನ್ನಡ ಭಾಷೆ ಕುರಿತಂತೆ ಅವರು ನಿಮ್ಮನ್ನು ಭೇಟಿ ಮಾಡಲು ಇಚ್ಛಿಸಿದರೆ ಅವರಿಗೆ ಅವಕಾಶ ಕೊಡಿ. ಜೊತೆಗೆ ಅವರ ಜೊತೆ ಸೌಜನ್ಯದಿಂದ ವರ್ತಿಸಿ ಎಂದು ಪುರುಷೋತ್ತಮ್ ಬಿಳಿಮಲೆ ಸಲಹೆ ನೀಡಿದರು.

ಬ್ಯಾಂಕ್‌ಗಳಿಂದಾಗಿ ಮೈಕ್ರೋ ಫೈನಾನ್ಸ್ ಅನಿವಾರ್ಯತೆ: ಬ್ಯಾಂಕ್‌ಗಳಲ್ಲಿ ಕನ್ನಡ ಬಳಕೆ ಮಾಡುವುದಿಲ್ಲ. ಇದರಿಂದ ಇಂಗ್ಲಿಷ್ ಜ್ಞಾನ ಇಲ್ಲದ ಜನರು ಮೈಕ್ರೋ ಫೈನಾನ್ಸ್ ಸೇರಿದಂತೆ ಖಾಸಗಿ ಹಣಕಾಸು ಸಂಸ್ಥೆಗಳತ್ತ ಮುಖ ಮಾಡುತ್ತಾರೆ. ಈ ಹಿನ್ನೆಲೆಯಲ್ಲಿ ಬ್ಯಾಂಕ್‌ಗಳಲ್ಲಿ ಕೂಡ ಕನ್ನಡ ಭಾಷೆ ಬಳಕೆಯಾಗಬೇಕು. ಹಾಗಾಗಿ 100 ದಿನದಲ್ಲಿ ಕನ್ನಡ ಕಲಿಯುವ ಕಲಿಕಾ ಕೇಂದ್ರಗಳನ್ನು ಎಲ್ಲೆಡೆ ಸ್ಥಾಪಿಸುವ ಪ್ರಸ್ತಾವನೆ ಇದೆ ಎಂದು ಹೇಳಿದರು.

ಕರ್ನಾಟಕದಲ್ಲಿರುವ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕನ್ನಡ ಭಾಷಿಗರನ್ನು ಹುಡುಕಿದರೂ ಸಿಗದ ಪರಿಸ್ಥಿತಿ ಇದೆ. ಆದ್ದರಿಂದ ಬಹುರಾಷ್ಟ್ರೀಯ ಕಂಪನಿಗಳ ಮಾನವ ಸಂಪನ್ಮೂಲ ವಿಭಾಗದಲ್ಲಿ ಒಬ್ಬ ಕನ್ನಡಿಗನಿಗೆ ಅವಕಾಶ ನೀಡಬೇಕೆಂಬ ನಿಯಮವನ್ನು ತರಲು ಸರ್ಕಾರದ ಮುಂದೆ ಪ್ರಸ್ತಾವನೆ ಇಟ್ಟಿದ್ದೇವೆ ಎಂದು ತಿಳಿಸಿದರು.

ಸರ್ಕಾರಿ ಕನ್ನಡ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಇದರಿಂದ ಬಹಳಷ್ಟು ಕನ್ನಡ ಶಾಲೆ ಮುಚ್ಚಲಾಗುತ್ತಿದೆ. ಕರ್ನಾಟಕದಲ್ಲಿರುವ 7000 ಕನ್ನಡ ಶಾಲೆಗಳಿಗೆ ಹಕ್ಕುಪತ್ರವಿಲ್ಲ. ಇದರಿಂದ ತಾತ, ಮುತ್ತಾತನ ಕಾಲದಲ್ಲಿ ದಾನವಾಗಿ ಕೊಟ್ಟ ಸರ್ಕಾರಿ ಶಾಲೆಯ ಭೂಮಿಯನ್ನು ಮೊಮ್ಮಕ್ಕಳು ಈಗ ವಶಪಡಿಸಿಕೊಳ್ಳುತ್ತಿದ್ದಾರೆ. ಇನ್ನು ಕೆಲವು ಕಡೆ ಭೂಮಾಫಿಯಾ ಶಾಲೆಯ ಸರ್ಕಾರಿ ಭೂಮಿ ಒತ್ತುವರಿ ಮಾಡಿಕೊಳ್ಳುತ್ತಿದ್ದಾರೆ. ಈ ಹಿನ್ನೆಲೆ ಕನ್ನಡ ಶಾಲೆಗಳನ್ನು ಉಳಿಸಲು ಅಧಿಕಾರಿಗಳು ಮುಂದಾಗಬೇಕು ಎಂದು ಪುರುಷೋತ್ತಮ ಬಿಳಿಮಲೆ ಸೂಚನೆ ನೀಡಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ್ ಹಾನಗಲ್, ನಾಮ ನಿರ್ದೇಶಿತ ಸದಸ್ಯ ಟಿ.ಗುರುರಾಜ್, ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯತ್ರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್ ಹಾಗೂ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಹಾಸನ ಮಿತ್ರ

ಶಿರಾಡಿ ಸುರಂಗ ಮಾರ್ಗ ನಿರ್ಮಾಣಕ್ಕೆ ಡಿಪಿಆರ್ ಸಿದ್ಧ

ಒಟ್ಟು 23.63 ಕಿ.ಮೀ ಉದ್ದ, 6 ಕಡೆ ಸುರಂಗ ಮಾರ್ಗ ನಿರ್ಮಾಣಕ್ಕೆ ಯೋಜನೆ



ಹಾಸನ, ಫೆ.15– ಬೆಂಗಳೂರಿನಿಂದ ಮಂಗಳೂರಿಗೆ ಸಂಪರ್ಕ ಕೊಂಡಿಯಾಗಿರುವ ಶಿರಾಡಿಯ 23.63 ಕಿ.ಮೀ ಮಾರ್ಗದಲ್ಲಿ ಆರು ಕಡೆ ಸುರಂಗ ಮಾರ್ಗ ನಿರ್ಮಾಣಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಡಿಪಿಆರ್ ಸಿದ್ಧಪಡಿಸಿದ್ದು, ಕೇಂದ್ರ ಸರಕಾರಕ್ಕೆ ಸಲ್ಲಿಸಲು ಮುಂದಾಗಿದೆ. ಪ್ರಸ್ತುತ ಹಾಸನ–ಮಂಗಳೂರು ರೈಲ್ವೆ ಮಾರ್ಗದಲ್ಲಿ ಸುರಂಗ ಮಾರ್ಗವಿದ್ದು, ಶಿರಾಡಿ ಸುರಂಗ ಮಾರ್ಗ ಆಗಿದ್ದೇ ಆದಲ್ಲಿ ಜಿಲ್ಲೆಗೆ ಎರಡನೇ ಸುರಂಗ ಮಾರ್ಗದ ರಸ್ತೆಯಾಗಲಿದೆ.

ಶಿರಾಡಿಯಲ್ಲಿ ಸುರಂಗ ಮಾರ್ಗ ನಿರ್ಮಾಣ ಸಂಬಂಧ ಭಾರತೀಯ ವಿಜ್ಞಾನ ಸಂಸ್ಥೆಯ ವರದಿ ಆಧರಿಸಿ ನೀಡಿದ ವಿಸ್ತೃತ ವರದಿ ಅನ್ವಯ ಕೇಂದ್ರ ಅನುಮೋದನೆ ನೀಡಿದೆ. 12.60 ಕಿ.ಮೀ ಉದ್ದದ 6 ಸುರಂಗ ಮಾರ್ಗ, 1.5 ಕಿ.ಮೀ ಉದ್ದದ 10 ಸೇತುವೆಗಳನ್ನು ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ಈ ಮಾರ್ಗದಲ್ಲಿ ದ್ವಿಮುಖ ಮಾರ್ಗದಲ್ಲಿ ವಾಹನಗಳ ಸಂಚಾರಕ್ಕೆ ಅನುವು ಮಾಡುವ ಜತೆಗೆ ತುರ್ತು ಸಂದರ್ಭಕ್ಕಾಗಿ 8.58 ಮೀ. ವಿಸ್ತಾರದ ತುರ್ತು ಮಾರ್ಗವೂ ಯೋಜನೆಯಲ್ಲಿ ಒಳಗೊಂಡಿದೆ. ಶಿರಾಡಿ ಸುರಂಗ ಮಾರ್ಗದ ಕಾಮಗಾರಿಗೆ ಜಪಾನ್ ಇಂಟರ್ ನ್ಯಾಷನಲ್ ಕೋ–ಆಪರೇಷನ್ ಏಜೆನ್ಸಿ(ಜೆಐಸಿಎ) ಆರ್ಥಿಕ ನೆರವು ಒದಗಿಸಲಿದೆ.

ಸುರಂಗ ಮಾರ್ಗದ ಚಿಂತನೆ ಒಂದೆಡೆಯಾದರೆ ಹಿಂದಿನ ವರ್ಷ ಮಳೆಗಾಲದಲ್ಲಿ ಸಂಭವಿಸಿದ ಭೂಕುಸಿತ, ಅನಾಹುತದಿಂದ ಎಚ್ಚೆತ್ತು ಶಿರಾಡಿ ಮಾರ್ಗದ ಕಾಮಗಾರಿಯನ್ನು ಚುರುಕುಗೊಳಿಸಲಾಗಿದೆ. ಪ್ರತಿ ಮಳೆಗಾಲದಲ್ಲಿ ಭೂಕುಸಿತ, ಸಂಚಾರ ಸ್ಥಗಿತ ಸಮಸ್ಯೆ ಮರುಕಳಿಸುತ್ತಲೇ ಇರುವುದನ್ನು ಮನಗಂಡು ಈಗಾಗಲೇ ಚತುಷ್ಪಥ ರಸ್ತೆ ಹಾಗೂ ಸಕಲೇಶಪುರದಿಂದ ಮಾರನಹಳ್ಳಿವರೆಗೂ ಅಲ್ಲಲ್ಲಿ ತಡೆಗೋಡೆ ನಿರ್ಮಾಣ ಮಾಡಲಾಗುತ್ತಿದೆ. ಹಗಲು–ರಾತ್ರಿ ಕಾಮಗಾರಿ ಮಾಡುವ ಮೂಲಕ ಮಾರ್ಚ್ ಅಥವಾ ಏಪ್ರಿಲ್‌ನಲ್ಲಿ ಪೂರ್ಣಗೊಳಿಸುವ ವಿಶ್ವಾಸವನ್ನು ಅಧಿಕಾರಿಗಳು ವ್ಯಕ್ತಪಡಿಸಿದ್ದಾರೆ.

ಹಾಸನ–ಮಂಗಳೂರು ನಡುವೆ ವಾಣಿಜ್ಯ ವ್ಯವಹಾರದ ದೃಷ್ಟಿಯಿಂದ ನಿತ್ಯ ನೂರಾರು ಟ್ಯಾಂಕರ್, ಟ್ರಕ್, ಬಸ್ ಮತ್ತಿತರ ವಾಹನಗಳು ಸಂಚರಿಸುತ್ತಿವೆ. ವಾಹನ ದಟ್ಟಣೆಗೆ ತಕ್ಕನಾಗಿ ರಸ್ತೆ ವ್ಯವಸ್ಥೆ ಇಲ್ಲದೆ ಪದೇಪದೆ ಅಪಘಾತ, 12ರಿಂದ 16 ಗಂಟೆ ಸಂಚಾರ ಸ್ಥಗಿತದ ಉದಾಹರಣೆ ಕೂಡ ಇದೆ. ಪಶ್ಚಿಮಘಟ್ಟ ಅರಣ್ಯ ಪ್ರದೇಶವನ್ನು ಒಳಗೊಂಡಿರುವ ಶಿರಾಡಿ ರಸ್ತೆಯ ಮೂಲಕ ಮಂಗಳೂರು ಬಂದರು ಸಂಪರ್ಕ, ಧರ್ಮಸ್ಥಳ, ಉಡುಪಿ ಸೇರಿದಂತೆ ದಕ್ಷಿಣ ಕನ್ನಡದ ಧಾರ್ಮಿಕ ಕ್ಷೇತ್ರ ಹಾಗೂ ಪ್ರವಾಸಿ ಕ್ಷೇತ್ರದ ಸಂಪರ್ಕಕ್ಕಾಗಿ ಈ ರಸ್ತೆ ಮುಖ್ಯವಾಗಿದೆ.

ಬೆಂಗಳೂರಿನಿಂದ ಹಾಸನದವರಗೆ ಚತುಷ್ಪಥ ರಸ್ತೆ ಇದೆ. ಅಲ್ಲಿಂದ ಮುಂದಕ್ಕೆ ದ್ವಿಪಥ ರಸ್ತೆ ಇದ್ದರೂ, ಅತ್ಯಂತ ಕಿರಿದಾದದ್ದು ಹಾಗೂ ಹೆಚ್ಚು ತಿರುವು ಹೊಂದಿದೆ. ಹೀಗಾಗಿ ರಸ್ತೆ ವಿಸ್ತರಣೆ ಬೇಡಿಕೆ ಪದೇಪದೆ ಕೇಳಿ ಬರುತ್ತಿತ್ತು. ಹಾಸನದಿಂದ ಸಕಲೇಶಪುರದವರೆಗಿನ 45 ಕಿ.ಮೀ ಚತುಷ್ಪಥ ಕಾಮಗಾರಿಯಲ್ಲಿ 38 ಕಿ.ಮೀ ಪೂರ್ಣಗೊಂಡಿದೆ. ಇದಕ್ಕಾಗಿ 573 ಕೋಟಿ ರೂ. ವೆಚ್ಚ ಮಾಡಲಾಗಿದೆ. ಶಿರಾಡಿ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯನ್ನು ಮಾರ್ಚ್‌ಗೆ ಪೂರ್ಣಗೊಳಿಸಲು ಗಡುವು ನೀಡಲಾಗಿದೆ. ಏಪ್ರಿಲ್ ಅಂತ್ಯಕ್ಕೆ ಪೂರ್ಣಗೊಳಿಸುವ ಭರವಸೆ ನೀಡಿದ್ದಾರೆ. ಗುತ್ತಿಗೆ ಅವಧಿ ಮೇ ತನಕ ಇದೆ ಎಂದು ಹಾಸನ ಜಿಲ್ಲಾಧಿಕಾರಿ ಸತ್ಯಭಾಮ ತಿಳಿಸಿದ್ದಾರೆ.

ಹಾಸನ ರೈಲ್ವೆ ಜಂಕ್ಷನ್ ಬಳಿ ಅಪರಿಚಿತ ಮಹಿಳೆ ಮೇಲೆ ಅತ್ಯಾಚಾರವೆಸಗಿ ಕೊಲೆ

ಹಾಸನ, ಫೆ.15– ಹಾಸನ ರೈಲ್ವೆ ಜಂಕ್ಷನ್‌ಗೆ ಹೊಂದಿಕೊಂಡಿರುವ ನಿರ್ಮಾಣ ಹಂತದ ಟವರ್ ವ್ಯಾಗನ್ ಶೆಡ್ ಕಟ್ಟಡದಲ್ಲಿ 40 ವರ್ಷದ ಅಪರಿಚಿತ ಮಹಿಳೆಯ ಶವ ಗುರುವಾರ ಸಂಜೆ ಪತ್ತೆಯಾಗಿದೆ

ಅಪರಿಚಿತ ಮಹಿಳೆಯ ಮೇಲೆ ಕೋಣೆಯೊಂದರಲ್ಲಿ ಅತ್ಯಾಚಾರವೆಸಗಿದ ದುಷ್ಕರ್ಮಿ ನಂತರ, ಇಟ್ಟಿಗೆಗಳಿಂದ ಆಕೆಯ ತಲೆಗೆ ಹೊಡೆದಿದ್ದಾನೆ ಎಂದು ರೈಲ್ವೆ ಪೊಲೀಸರು ತಿಳಿಸಿದ್ದಾರೆ. ಪೊಲೀಸರಿಗೆ ಇನ್ನೂ ಸಂತ್ರಸ್ತೆಯ ಗುರುತು ಪತ್ತೆಯಾಗಿಲ್ಲ.

ಪೊಲೀಸರು ಶವವನ್ನು ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಯ (HIMS) ಶವಾಗಾರಕ್ಕೆ ಸ್ಥಳಾಂತರಿಸಿದ್ದು, ಆಕೆಯ ಗುರುತು ಪತ್ತೆಗೆ ಪ್ರಯತ್ನ ನಡೆಸುತ್ತಿದ್ದಾರೆ.

ಮೂಲವೊಂದರ ಪ್ರಕಾರ, ಸಂತ್ರಸ್ತೆ ನೆರೆಯ ರಾಜ್ಯದಿಂದ ವಲಸೆ ಬಂದಿರಬಹುದು ಮತ್ತು ಅದೇ ಕಟ್ಟಡ ನಿರ್ಮಾಣ ಸ್ಥಳದಲ್ಲಿ ನಿರ್ಮಾಣ ಕೆಲಸಗಾರನಾಗಿ ಕೆಲಸ ಮಾಡುತ್ತಿರುವ ಸಾಧ್ಯತೆಯಿದೆ ಎನ್ನಲಾಗಿದೆ. ಸಾಕ್ಷಿ ಸಂಗ್ರಹಿಸಲು ಬೆರಳಚ್ಚು ತಜ್ಞರು ಮತ್ತು ಶವ ನಿಗಾ ಘಟಕ ಸ್ಥಳಕ್ಕೆ ಆಗಮಿಸಿದೆ. ರೈಲ್ವೆ ಪೊಲೀಸರು ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಸಿದ್ದರಾಮಯ್ಯ ವಿರುದ್ಧದ ಪ್ರಕರಣದಲ್ಲಿ ಲೋಕಾಯುಕ್ತ ಎಸ್ಪಿ ಉದೇಶ್ ನಿಷ್ಪಕ್ಷಪಾತ ತನಿಖೆ ನಡೆಸಿಲ್ಲ

ಎಡಿಜಿಪಿ ಮನೀಶ್ ಕರ್ಬಿಕರ್‌ಗೆ ಸ್ನೇಹಮಯಿ ಕೃಷ್ಣ ದೂರು

ಮೈಸೂರು, ಫೆ.15 (ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣದಲ್ಲಿ ಮೈಸೂರು ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ಅವರು ನಿಷ್ಪಕ್ಷಪಾತ ತನಿಖೆ ನಡೆಸಿಲ್ಲ ಎಂದು ದೂರುದಾರ ಸ್ನೇಹಮಯಿ ಕೃಷ್ಣ ಲೋಕಾಯುಕ್ತ ಎಡಿಜಿಪಿ ಮನೀಶ್ ಕರ್ಬಿಕರ್ ಅವರಿಗೆ ದೂರು ನೀಡಿದ್ದಾರೆ.



ಸಿದ್ದರಾಮಯ್ಯ ಹಾಗೂ ಅವರ ಕುಟುಂಬಕ್ಕೆ ಸೇರಿದ 14 ನಿವೇಶನಗಳಿಗೆ ಸಂಬಂಧಿಸಿದಂತೆ ಏಕಪಕ್ಷೀಯವಾಗಿ ತನಿಖೆ ನಡೆಸಿ ಸಿದ್ದರಾಮಯ್ಯ ಅವರಿಗೆ ಅನುಕೂಲ ಆಗುವಂತೆ ಅಂತಿಮ ವರದಿ ತಯಾರಿಸಿದ್ದಾರೆ ಎಂದು ಆರೋಪಿಸಿದ್ದಾರೆ.

ತನಿಖಾಧಿಕಾರಿ ಉದೇಶ್ ಅವರು ಈ ತನಕ ದೂರುದಾರನಾದ ನನ್ನನ್ನು ತಮ್ಮ ಕಚೇರಿಗೆ ಕರೆಸಿಕೊಂಡು ಯಾವುದೇ ಚರ್ಚೆ ಮಾಡಿಲ್ಲ ಎಂದು ಹೇಳಿದ್ದಾರೆ.

ಸಿದ್ದರಾಮಯ್ಯ ವಿರುದ್ಧದ ಪ್ರಕರಣ ಕುರಿತಂತೆ ಉದೇಶ್ ಅವರು ನ್ಯಾಯಾಲಯಗಳಿಗೆ ಮತ್ತು ಹಿರಿಯ ಅಧಿಕಾರಿಗಳಿಗೆ ವರದಿ ನೀಡುವಾಗ ಕೆಲವೊಂದು ಮಾಹಿತಿ ಮತ್ತು ದಾಖಲೆಗಳನ್ನು ಮುಚ್ಚಿಟ್ಟು ಸುಳ್ಳು ವರದಿ ಸಲ್ಲಿಸಿದ್ದಾರೆ ಎಂದು ತಿಳಿಸಿದ್ದಾರೆ.

ಪ್ರಕರಣದ ಆರೋಪಿಗಳು ಯಾವಾಗ, ಯಾವ ಸ್ವತ್ತುಗಳಿಗೆ ಸಂಬಂಧಿಸಿದಂತೆ ಅಪರಾಧ ಕೃತ್ಯ ನಡೆಸಿದ್ದಾರೆ. ಇವರಿಗೆ ಯಾರು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಯಾವ ರೀತಿ ಸಹಕರಿಸಿದ್ದಾರೆ ಎಂಬ ಬಗ್ಗೆ ಸಮಗ್ರ ತನಿಖೆ ನಡೆಸಬೇಕು ಎಂದು ಸ್ನೇಹಮಯಿ ಕೃಷ್ಣ ಆಗ್ರಹಿಸಿದ್ದಾರೆ.

ಮುಡಾ ಅಧಿಕಾರಿಗಳು ಮತ್ತು ಇತರೆ ರಾಜಕೀಯ ವ್ಯಕ್ತಿಗಳು ಅಕ್ರಮ ನಡೆಸಿದ್ದು, ಇದರಿಂದ ಸರ್ಕಾರದ ಖಜಾನೆಗೆ ಐದು ಸಾವಿರ ಕೋಟಿ ರೂಪಾಯಿ ನಷ್ಟವಾಗಿದೆ. ಅನಧಿಕೃತವಾಗಿ ಸಾವಿರಾರು ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿ ದೊಡ್ಡ ಮಟ್ಟದಲ್ಲಿ ಲಂಚ ಪಡೆದಿದ್ದಾರೆ ಎಂದು ಆಪಾದಿಸಿದ್ದಾರೆ. ಸಿದ್ದರಾಮಯ್ಯ ಕುಟುಂಬ ಮುಡಾದಿಂದ ಪಡೆದ 14 ನಿವೇಶನಗಳಿಗೆ ಮಾತ್ರ ತನಿಖೆ ನಡೆಸುವಂತೆ ಆದೇಶ ಮಾಡಿಲ್ಲ. ಮುಡಾದಲ್ಲಿ ಇದೇ ರೀತಿ ನಡೆದಿರುವ ಎಲ್ಲಾ ಅಕ್ರಮಗಳ ಬಗ್ಗೆ ಸಮಗ್ರ ತನಿಖೆ ನಡೆಸಬಹುದಿದ್ದು, ಉದೇಶ್ ಅವರು ನ್ಯಾಯಾಲಯದ ಆದೇಶ ಉಲ್ಲಂಘಿಸಿದ್ದಾರೆ ಎಂದು ದೂರಿದ್ದಾರೆ.

ಈ ಹಿನ್ನೆಲೆ ಲೋಕಾಯುಕ್ತ ಎಸ್ಪಿ ಉದೇಶ್ ಅವರು ಸಲ್ಲಿಸಿರುವ ತನಿಖಾ ವರದಿಯನ್ನು ನೀವು ಕೂಲಂಕಷವಾಗಿ ಪರಿಶೀಲನೆ ನಡೆಸಬೇಕು ಎಂದು ಸ್ನೇಹಮಯಿ ಕೃಷ್ಣ ಎಡಿಜಿಪಿ ಮನೀಶ್ ಕರ್ಬಿಕರ್ ಅವರಿಗೆ ಮನವಿ ಮಾಡಿದ್ದಾರೆ.

ಅಪಘಾತದಲ್ಲಿ ಗಾಯಗೊಂಡಿರುವ ಕುರುಬೂರು ಶಾಂತಕುಮಾರ್ ಬೆಂಗಳೂರಿಗೆ ಏರ್‌ಲಿಫ್ಟ್

ಬೆಂಗಳೂರು, ಫೆ.15– ಪಂಜಾಬ್‌ನ ಪಟಿಯಾಲ ಬಳಿ ಸಂಭವಿಸಿದ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿರುವ ರೈತ ಮುಖಂಡ ಕುರುಬೂರು ಶಾಂತಕುಮಾರ್ ಅವರನ್ನು ಏರ್ ಆಂಬುಲೆನ್ಸ್ ಮೂಲಕ ಬೆಂಗಳೂರಿಗೆ ಕರೆತರಲು ರಾಜ್ಯ ಸರ್ಕಾರ ವ್ಯವಸ್ಥೆ ಮಾಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆ ಮೇರೆಗೆ ಅಧಿಕಾರಿಗಳು ಏರ್ ಆಂಬುಲೆನ್ಸ್ ಸಜ್ಜುಗೊಳಿಸಿದ್ದು, ಶಾಂತಕುಮಾರ್ ಅವರನ್ನು ಚಂಡೀಗಡದಿಂದ ಬೆಂಗಳೂರಿಗೆ ಕರೆತಂದು ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗುವುದು. ರಸ್ತೆ ಅಪಘಾತದಲ್ಲಿ ಶಾಂತಕುಮಾರ್ ಅವರ ಬೆನ್ನು ಮೂಳೆಗೆ ಗಂಭೀರ ಗಾಯವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ. ಪ್ರಸ್ತುತ ಶಾಂತಕುಮಾರ್ ಅವರಿಗೆ ಪಟಿಯಾಲದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ರಾಜ್ಯ ಸರ್ಕಾರದ ಪ್ರಕಟಣೆ ತಿಳಿಸಿದೆ.



ಸನ್ನಡತೆ ಮೇಲೆ ಮೈಸೂರು ಜೈಲಿಂದ ನಾಲ್ವರ ಬಿಡುಗಡೆ

ಮೈಸೂರು, ಫೆ.15(ಎಸ್‌ಬಿಡಿ)– ಮೈಸೂರು ಕೇಂದ್ರ ಕಾರಾಗೃಹದಲ್ಲಿದ್ದ ನಾಲ್ವರನ್ನು ಸನ್ನಡತೆ ಆಧಾರದಲ್ಲಿ ಶನಿವಾರ ಬಿಡುಗಡೆ ಮಾಡಲಾಯಿತು.

ರಾಜ್ಯ ಸರ್ಕಾರದ ಆದೇಶದಂತೆ ಸನ್ನಡತೆ ಆಧಾರದಲ್ಲಿ, ವಿವಿಧ ಪ್ರಕರಣಗಳಲ್ಲಿ ಜೈಲು ವಾಸಿಗಳಾಗಿದ್ದ ನಾಗೇಂದ್ರ, ಕುಮಾರ, ಕುಮಾರ ಅಲಿಯಾಸ್ ಬೇಟೆ ಹಾಗೂ ಕುಂಬಾರ ಪೂಣಚ್ಚ ಅವರನ್ನು ನಿಯಮಾನುಸಾರ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ಪಿ.ಎಸ್.ರಮೇಶ್ ಇಂದು ಸಂಜೆ ಕಾರಾಗೃಹದಿಂದ ಬಿಡುಗಡೆ ಮಾಡಿದರು.

ಈ ವೇಳೆ ಮುಂದಿನ ದಿನಗಳಲ್ಲಿ ಕುಟುಂಬದವರು, ನೆರೆಹೊರೆಯವರೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳಿ. ಸಮಾಜಕ್ಕೆ ಯಾವುದೇ ರೀತಿಯಲ್ಲೂ ನಿಮ್ಮಿಂದ ಕೆಡುಕಾಗದಂತೆ ನಡೆದುಕೊಳ್ಳಿ, ಶ್ರಮವಹಿಸಿ ದುಡಿಮೆ ಮಾಡಿ, ನೆಮ್ಮದಿಯ ಜೀವನ ನಡೆಸಿ ಎಂದು ಶುಭ ಹಾರೈಸಿದರು. ಇದೇ ವೇಳೆ ಕಾರಾಗೃಹದ ಇತರೆ ಅಧಿಕಾರಿಗಳಿದ್ದರು.



ಮೈಸೂರು ಮಿತ್ರ

ಮಂಡ್ಯ ವಿವಿ ವಿಲೀನಗೊಳಿಸಿದರೆ ವಿಧಾನಸೌಧ ಚಲೋ

ರಾಜ್ಯ ಸರ್ಕಾರಕ್ಕೆ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಎಚ್ಚರಿಕೆ



ಮಂಡ್ಯ,ಫೆ.15– ಮಂಡ್ಯ ಜಿಲ್ಲೆಯ ಜನರ ಬಹುದಿನಗಳ ಕನಸಾದ ಮಂಡ್ಯ ವಿಶ್ವವಿದ್ಯಾನಿಲಯವನ್ನು ರಾಜ್ಯ ಸರ್ಕಾರ ಮೈಸೂರು ವಿವಿಯೊಂದಿಗೆ ವಿಲೀನಗೊಳಿಸಲು ಮುಂದಾದರೆ ನಗರದ ಜಿಲ್ಲಾಧಿಕಾರಿ ಕಚೇರಿಯಿಂದ ಬೆಂಗಳೂರಿನ ವಿಧಾನಸೌಧದವರೆಗೆ ಪ್ರತಿಭಟನಾ ರ್ಯಾಲಿ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ರಾಜ್ಯ ಸರ್ಕಾರವನ್ನು ಎಚ್ಚರಿಸಿದ್ದಾರೆ.

ಶನಿವಾರ ನಗರದ ಮಂಡ್ಯ ವಿವಿಯ ಆಡಳಿತ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಂಡ್ಯ ವಿಶ್ವವಿದ್ಯಾನಿಲಯ ಜಿಲ್ಲೆಯ ಜನರ ಬಹುದಿನದ ಕನಸಾಗಿದೆ. ಸುಮಾರು 40 ಕಿಲೋ ಮೀಟರ್ ದೂರದಿಂದ ರೈತರ ಮಕ್ಕಳು ಕಾಲೇಜಿಗೆ ಬರುತ್ತಿದ್ದಾರೆ. 2019ರಲ್ಲಿ ವಿವಿ ಆರಂಭವಾದಾಗ 2 ಸಾವಿರ ವಿದ್ಯಾರ್ಥಿಗಳು ಸೇರ್ಪಡೆಯಾಗಿದ್ದರು. ಈಗ ಕೇವಲ 6 ವರ್ಷದಲ್ಲಿ ನಾಲ್ಕೂವರೆ ಸಾವಿರ ವಿದ್ಯಾರ್ಥಿಗಳು ಸೇರ್ಪಡೆಗೊಂಡಿದ್ದಾರೆ. ಇಂತಹ ವಿವಿ ಮುಚ್ಚುವುದು ಅಥವಾ ವಿಲೀನ ಮಾಡುವುದೆಂದರೆ ಹೇಗೆ ಎಂದು ಪ್ರಶ್ನಿಸಿದರು.

ಸರ್ಕಾರ ದಯವಿಟ್ಟು ಈ ವಿವಿಯನ್ನು ಉಳಿಸಿಕೊಡಬೇಕು. ಮಂಡ್ಯ ಜಿಲ್ಲೆಯ ಗ್ರಾಮೀಣ ಪ್ರದೇಶ ಮತ್ತು ರೈತರು ಮಕ್ಕಳು, 40ಕಿ.ಮೀ. ವ್ಯಾಪ್ತಿಯಿಂದ ಇಲ್ಲಿಗೆ ಬರುತ್ತಾರೆ. ಈ ಸಂಸ್ಥೆಯು ಉಳಿಯಬೇಕು. ಖಾಸಗಿ ಸಂಸ್ಥೆ, ಖಾಸಗಿ ಯೂನಿವರ್ಸಿಟಿಗಳನ್ನು ಸರ್ಕಾರಗಳು ಹಲವೆಡೆ ಮಂಜೂರು ಮಾಡಿವೆ ಮಂಡ್ಯ, ಮೈಸೂರಲ್ಲಿ 2 ವಿವಿಗಳನ್ನು ಹೊಸದಾಗಿ ಆರಂಭಿಸಲು ಅವಕಾಶ ನೀಡಿರುವ ಸರ್ಕಾರ ಅವುಗಳನ್ನು ಬೇಕಾದರೆ ನಿಲ್ಲಿಸಿ, ಮಂಡ್ಯ ವಿವಿಯನ್ನು ಮುನ್ನಡೆಸಿಕೊಂಡು ಹೋಗಲು ಅನುಮತಿ ಕೊಡಲಿ ಎಂದರು.

ನಿತ್ಯ ಸಚಿವ ಕೆ.ವಿ.ಶಂಕರಗೌಡರು ಶ್ರಮಪಟ್ಟು ಈ ಕಾಲೇಜನ್ನು ತಂದಿದ್ದಾರೆ. 29 ಎಕರೆಯಲ್ಲಿರುವ ಯೂನಿವರ್ಸಿಟಿ ಜಾಗಕ್ಕೆ ಮಂಡ್ಯ ತಾಲೂಕಿನ ತೂಬಿನಕೆರೆ ಬಳಿ 99 ಎಕರೆ ಜಾಗವಿದೆ. ಆ ಜಾಗವನ್ನು 1 ಎಕರೆಗೆ 1 ರೂ.ನಂತೆ ರೈತರು ಆಗಿನ ಕಾಲದಲ್ಲಿ ದಾನ ಮಾಡಿದ್ದಾರೆ. ಮಂಡ್ಯ ವಿವಿಗೆ ಸರ್ಕಾರದಿಂದ ಯಾರೂ ಸಹ ಅನುದಾನ ಕೇಳಿಲ್ಲ, ಅಥವಾ ಸರ್ಕಾರ ಸ್ವಯಂಪ್ರೇರಿತವಾಗಂತೂ ಅನುದಾನ ನೀಡಿಲ್ಲ. ಚೆನ್ನಾಗಿ ನಡೆಯುತ್ತಿರುವ ವಿವಿಯನ್ನು ಮುಚ್ಚುತ್ತೇವೆಂಬುದು ಎಷ್ಟು ಸರಿ.

ವಿವಿ ವಿಚಾರದಲ್ಲಿ ನೀವು ಹೊಂದಿರುವ ನಿಲುವನ್ನು ಶೀಘ್ರದಲ್ಲೇ ವಾಪಸ್ ಪಡೆಯಿರಿ. ತಮಿಳುನಾಡಿನಲ್ಲಿ ಜಿಲ್ಲೆಗೊಂದು ವಿವಿ ಇದೆ. ಪಕ್ಕದ ರಾಜ್ಯದಲ್ಲಿ ಹೀಗಿರುವಾಗ ನಮ್ಮ ರಾಜ್ಯದ 9 ವಿವಿಗಳನ್ನು ಮುಚ್ಚುವುದಾದರೆ ಮಕ್ಕಳ ಸ್ಥಿತಿ ಏನಾಗಬಹುದು?

ಇಲ್ಲಿ ಎರಡು ಕಾನ್ವೋಕೇಷನ್‌ಗಳನ್ನು ಈಗಾಗಲೇ ನೀಡಲಾಗಿದೆ. ಎಂಬಿಎ, ಎಂಸಿಎ ಹೊಸ ಕೋರ್ಸ್ ತೆರೆಯಲಾಗಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತವರು ಜಿಲ್ಲೆ ರಾಮನಗರಕ್ಕೆ ಐಐಟಿ, ಮೆಡಿಕಲ್ ಕಾಲೇಜು, ರಾಜೀವ್‌ಗಾಂಧಿ ವಿವಿ ಸೇರಿದಂತೆ ಎಲ್ಲಾ ತರಹದ ಶಿಕ್ಷಣ ಸಂಸ್ಥೆಗಳು ಬೇಕು ಎನ್ನುತ್ತಾರೆ. ಆದರೆ ಅವರ ಪಕ್ಕದ ಜಿಲ್ಲೆಯಾದ ಮಂಡ್ಯಕ್ಕೆ ಅದರಲ್ಲೂ ಅವರಿಗಾಗಿ ಹೆಚ್ಚು ಶಾಸಕರನ್ನು ನೀಡಿದ ಜಿಲ್ಲೆಗೆ ಈ ಹಿಂದೆ ಮಂಜೂರಾಗಿರುವ ವಿವಿ ಮುಚ್ಚುತ್ತೇನೆಂದು ಹೇಳುತ್ತಿರುವುದು ಒಳ್ಳೆಯ ಬೆಳವಣಿಗೆ ಅಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ರಾಜಕೀಯವನ್ನು ಬದಿಗಿಟ್ಟು ಓದುವ ಮಕ್ಕಳಿಗೆ ಅವಕಾಶ ಕೊಡುವ ನಿಟ್ಟಿನಲ್ಲಿ ಶಿಕ್ಷಣ ಸಂಸ್ಥೆಗಳನ್ನು ಉಳಿಸಬೇಕಾಗಿದೆ. ಇಲ್ಲಿ ಅಂತರರಾಷ್ಟ್ರೀಯ ಶಿಕ್ಷಣ ವ್ಯವಸ್ಥೆ ಇದ್ದು, ವಿದೇಶಿ ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಡಿಸಿಎಂ ಡಿಕೆಶಿ ಮತ್ತು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಸಹ ಈ ಬಗ್ಗೆ ಗಮನ ಹರಿಸಬೇಕು. ಈ ವಿವಿಯನ್ನು ಮುಚ್ಚುತ್ತೇವೆಂದರೆ ನಾವು ಉಗ್ರ ಹೋರಾಟ ಮಾಡಬೇಕಾಗುತ್ತದೆ. ಇಲ್ಲಿನ ವಿವಿಯ ಕ್ರೀಡಾ ವಿದ್ಯಾರ್ಥಿಗಳು ಖೋಖೋನಲ್ಲಿ ಅಂತರರಾಷ್ಟ್ರೀಯ ಮಟ್ಟಕ್ಕೆ ಹೋಗಿದ್ದಾರೆ. ಇಂತಹ ವಿವಿ ಮುಚ್ಚುವುದೇನೆಂದರೆ ಹೇಗೆ ಎಂದು ಪ್ರಶ್ನಿಸಿದರು.

ಮುತ್ತತ್ತಿಯಲ್ಲಿ ಇಬ್ಬರು ಜಲಸಮಾಧಿ

ದೇವರ ದರ್ಶನಕ್ಕೆಂದು ಬಂದಿದ್ದಾಗ ದುರಂತ



ಶೋಭಾ



ನದೀಯ

ಹಲಗೂರು,ಫೆ.15– ದೇವರ ಕಾರ್ಯಕ್ಕೆಂದು ಆಗಮಿಸಿ ಕಾವೇರಿ ನದಿಯಲ್ಲಿ ಸ್ನಾನ ಮಾಡುವಾಗ ಕಾಲು ಜಾರಿ ನದಿಗೆ ಬಿದ್ದು ಇಬ್ಬರು ಯುವತಿಯರು ಜಲಸಮಾಧಿಯಾಗಿರುವ ಘಟನೆ ಮಂಡ್ಯ ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ಮತ್ತು ಪ್ರವಾಸಿ ತಾಣ ಹಲಗೂರು ಬಳಿಯ ಮುತ್ತತ್ತಿಯಲ್ಲಿ ಶನಿವಾರ ಸಂಭವಿಸಿದೆ.

ರಾಮನಗರ ಜಿಲ್ಲೆಯ ಕನಕಪುರ ತಾಲೂಕಿನ ಗಾಣಾಳು ಗ್ರಾಮದ ವಡಿವೇಲು ಎಂಬುವವರ ಪುತ್ರಿ ನದೀಯ (19) ಹಾಗೂ ಅದೇ ಗ್ರಾಮದ ಮುರುಳಿ ಎಂಬುವರ ಪತ್ನಿ ಶೋಭಾ (23)ಸಾವನ್ನಪ್ಪಿರುವ ದುರ್ದೈವಿಗಳಾಗಿದ್ದಾರೆ.

ಹಲಗೂರಿನ ಪ್ರಸಿದ್ಧ ಪ್ರವಾಸಿ ಮತ್ತು ಧಾರ್ಮಿಕ ಕ್ಷೇತ್ರ ಮುತ್ತತ್ತಿಗೆ ಪಕ್ಕದ ಕನಕಪುರ ತಾಲೂಕಿನ ಗಾಣಾಳು ಗ್ರಾಮದಿಂದ ಬಸ್ ಮತ್ತು ನಾಲ್ಕು ಕಾರಿನಲ್ಲಿ ದೇವರ ದರ್ಶನ ಪಡೆಯಲು ಒಟ್ಟು 80 ಮಂದಿ ಆಗಮಿಸಿದ್ದು, ದರ್ಶನ ಪಡೆಯುವ ಮುನ್ನ ಸ್ನಾನ ಮಾಡಲು ನದಿಗೆ ಇಳಿದಿದ್ದಾರೆ. ಈ ಪೈಕಿ ನದೀಯ ಮತ್ತು ಶೋಭಾ ಕಾಲು ಜಾರಿ ಆಕಸ್ಮಿಕವಾಗಿ ನೀರಿನಲ್ಲಿ ಬಿದ್ದು ದಾರುಣ ಸಾವನ್ನಪ್ಪಿದ್ದಾರೆ.

ಕೂಡಲೇ ಸ್ಥಳೀಯರು ಇಬ್ಬರನ್ನು ಹೊರತೆಗೆದು ಹಲಗೂರಿನ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದರಾದರೂ ಅಷ್ಟರಲ್ಲಿ ಇಬ್ಬರು ಸಾವನ್ನಪ್ಪಿದ್ದರು. ಕುಟುಂಬಸ್ಥರು ಹಾಗೂ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು. ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್‌ನಿಂದ ಬಿದ್ದು ಗಾಯಗೊಂಡಿದ್ದ ಮತ್ತೋರ್ವ ಯುವಕ ಸಾವು

ಭಾರತೀನಗರ, ಫೆ.15– ಇಲ್ಲಿಗೆ ಸಮೀಪದ ಮುಟ್ಟನಹಳ್ಳಿ ಗೇಟ್‌ಬಳಿ ಬೈಕ್‌ನಿಂದ ಬಿದ್ದು



ಗಂಭೀರವಾಗಿ ಗಾಯಗೊಂಡಿದ್ದ ಮತ್ತೋರ್ವ ಯುವಕ ಸಾವನ್ನಪ್ಪಿದ್ದಾನೆ ಕುರಿಕೆಂಪನದೊಡ್ಡಿ ಗ್ರಾಮದ ವೈರಮುಡಿ ಉ||ಗುಂಡ (28) ಎಂಬುವವರೇ ಮೃತಪಟ್ಟ ಯುವಕ.

ಫೆ.12ರಂದು ಕೆ.ಎಂ.ದೊಡ್ಡಿಯಿಂದ ಮದ್ದೂರಿಗೆ ಹೋಗುವಾಗ ಮಾರ್ಗಮಧ್ಯೆ ಮುಟ್ಟನಹಳ್ಳಿ ಗೇಟ್‌ಬಳಿ ಆಯಾತಪ್ಪಿ ಬೈಕ್‌ನಿಂದ ಪ್ರೇಮ್‌ಸಾಗರ್ ಮತ್ತು ವೈರಮುಡಿ ಈ ಇಬ್ಬರು ಬಿದ್ದು ಗಂಭೀರವಾಗಿ ಗಾಯಗೊಂಡಿದ್ದರು. ಪ್ರೇಮ್‌ಸಾಗರ್ ಫೆ.13ರಂದು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದರು. ವೈರಮುಡಿ ಅವರಿಗೆ ಮೈಸೂರಿನ ಡಿಆರ್‌ಎಂ ಹಾಸ್ಪಿಟಲ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಚಿಕಿತ್ಸೆ ಫಲಕಾರಿಯಾಗದೆ ಫೆ.15ರ ಶನಿವಾರ ಮೃತಪಟ್ಟಿದ್ದಾರೆ.

ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲಕ್ಷ್ಮೀಗೌಡನದೊಡ್ಡಿ ಕೊಲೆ ಪ್ರಕರಣ: ಸುಪಾರಿ ಹಂತಕರ ಬಂಧನ



ಮಂಡ್ಯ,ಫೆ.15– ಕಳೆದ ಫೆಬ್ರವರಿ 11ರಂದು ಮದ್ದೂರು ತಾಲೂಕಿನ ಲಕ್ಷ್ಮೀಗೌಡನ ದೊಡ್ಡಿ ಗ್ರಾಮದ ಮದನಹಟ್ಟಿ ದೇಗುಲದ ಬಳಿ ಅದೇ ಗ್ರಾಮದ ಕೃಷ್ಣೇಗೌಡ ಬಿನ್ ಲಕ್ಷ್ಮೀಗೌಡ ಎಂಬಾತನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೃತನ ಸ್ವಂತ ಸಹೋದರ ಸೇರಿ ಏಳು ಮಂದಿ ಸುಪಾರಿ ಹಂತಕರನ್ನು ಕೆ.ಎಂ.ದೊಡ್ಡಿ ಪೊಲೀಸರು ಬಂಧಿಸಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಶನಿವಾರ ನಗರದ ಎಸ್ಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕೊಲೆ ಪ್ರಕರಣದ ಸಂಬಂಧ ಕೃಷ್ಣೇಗೌಡನ ಸಂಬಂಧಿ ಶಂಕರೇಗೌಡ ಎಂಬುವವರು ನೀಡಿದ್ದ ದೂರಿನ ಮೇರೆಗೆ ಕಾರ್ಯಪ್ರವೃತ್ತರಾಗಿದ್ದ ತನಿಖಾ ತಂಡ, ಅನುಮಾನದ ಮೇರೆಗೆ ಫೆ.14ರಂದು ಮಳವಳ್ಳಿ ತಾಲೂಕಿನ ನಿಟ್ಟೂರು ಗ್ರಾಮದ ಚಂದ್ರಶೇಖರ್ ಬಿನ್ ಲೇ.ಸ್ವಾಮಿ ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆ ಮಾಡಿದಾಗ ಕೊಲೆಯಾದ ಕೃಷ್ಣೇಗೌಡ ತುಂಬಾ ಸಾಲ ಮಾಡಿಕೊಂಡಿರುವ ಬಗ್ಗೆ ಮಾಹಿತಿ ನೀಡಿದ್ದು, ಕೃಷ್ಣೇಗೌಡನ ಸಾಲವನ್ನು ಆತನ ಸ್ವಂತ ಅಣ್ಣ ಶಿವ ನಂಜೇಗೌಡ ಅಲಿಯಾಸ್ ಗುಡ್ಡಪ್ಪ ತೀರಿಸಿರುವುದು ಬೆಳಕಿಗೆ ಬಂದಿರುವುದಾಗಿ ವಿವರಿಸಿದರು.

ಇದಕ್ಕೆ ಪ್ರತಿಯಾಗಿ ಕೊಲೆಯಾದ ಕೃಷ್ಣೇಗೌಡ ತನ್ನ ಜಮೀನನ್ನು ಸಹೋದರ ಶಿವನಂಜೇಗೌಡನ ಪತ್ನಿ ಹೆಸರಿಗೆ ಮಾಡಿಕೊಟ್ಟಿರುತ್ತಾನೆ. ಆದರೆ ಕೃಷ್ಣೇಗೌಡ ಸಹೋದರ ಶಿವನಂಜೇಗೌಡನಿಗೆ ಜಮೀನು ವಶಕ್ಕೆ ಕೊಡದೇ ತನ್ನ ಅಕ್ಕ–ತಂಗಿಯರನ್ನು ಪುಸಲಾಯಿಸಿ ಶಿವನಂಜೇಗೌಡನ ವಿರುದ್ಧ ಜಮೀನು ವಿಚಾರಕ್ಕೆ ಕೇಸು ಹಾಕಿಸಿದ್ದ. ಇದರಿಂದ ಅವಮಾನಕ್ಕೀಡಾದ ಶಿವನಂಜೇಗೌಡ ಮನನೊಂದು ತನ್ನ ತಮ್ಮ ಕೃಷ್ಣೇಗೌಡನನ್ನು ಹತ್ಯೆ ಮಾಡಲು ಏಳು ಮಂದಿ ಸುಪಾರಿ ತಂಡಕ್ಕೆ ಐದು ಲಕ್ಷ ರೂ ನೀಡಿರುತ್ತಾನೆ ಎಂದು ಹೇಳಿದರು.

ಖಚಿತ ಮಾಹಿತಿ ಮೇರೆಗೆ ಮದ್ದೂರು ತಾಲೂಕಿನ ಕೊಪ್ಪದಲ್ಲಿ ಆರೋಪಿಗಳನ್ನು ಬಂಧಿಸಲಾಗಿದ್ದು, ಆಟೋ ಡ್ರೈವರ್ ಸುನೀಲ್ ಬಿನ್ ಬೋರೇಗೌಡ (28), ಮರದ ವ್ಯಾಪಾರಿ ಕೆ.ಪಿ.ಉಲ್ಲಾಸ್‌ಗೌಡ ಅಲಿಯಾಸ್ ಸಂಜು ಬಿನ್ ಪ್ರಕಾಶ್ (25), ಕೂಲಿ ಕೆಲಸಗಾರ ಎ.ಎಂ.ಪ್ರತಾಪ್ ಲೇ.ಮರಿಯಯ್ಯ (26), ಆಟೋ ಡ್ರೈವರ್ ಕೆ.ಎಂ.ಅಭಿಷೇಕ್ ಬಿನ್ ಲೇ.ಕೃಷ್ಣಪ್ಪ (31), ರಾಮನಗರದ ಹೆಚ್. ಹನುಮೇಗೌಡ ಅಲಿಯಾಸ್ ಹರ್ಷ ಬಿನ್ ಹನುಮೇಗೌಡ (31) ಬಂಧಿತ ಸುಪಾರಿ ಕಿಲ್ಲರ್‌ಗಳಾಗಿದ್ದು, ಈ ಹತ್ಯೆಗೆ ಸುಪಾರಿ ನೀಡಿ ಕುಮ್ಮಕ್ಕು ನೀಡಿದ್ದ ಮೃತ ಅಣ್ಣ ಶಿವನಂಜೇಗೌಡ ಸೇರಿ ಒಟ್ಟು ಎಂಟು ಮಂದಿಯನ್ನು ಬಂಧಿಸಲಾಗಿದೆ ಎಂದು ತಿಳಿಸಿದರು.

ಆರೋಪಿಗಳ ಪತ್ತೆಗೆ ಎಎಸ್ಪಿಗಳಾದ ತಿಮ್ಮಯ್ಯ, ಗಂಗಾಧರಸ್ವಾಮಿ ಮಾರ್ಗದರ್ಶನದಲ್ಲಿ ಮಳವಳ್ಳಿ ಡಿವೈಎಸ್ಪಿ ಕೃಷ್ಣಪ್ಪ ನೇತೃತ್ವದಲ್ಲಿ ಕೆ.ಎಂ.ದೊಡ್ಡಿ ಠಾಣೆಯ ಪಿಐ ಆನಂದ್, ಮುಖ್ಯ ಪೇದೆಗಳಾದ ನಟರಾಜು, ಮಹೇಶ್, ರಾಜೇಶ್, ರಾಜೇಂದ್ರ ಶ್ರೀಕಾಂತ್, ಪೇದೆಗಳಾದ ವಿಠಲ್, ಅರುಣ್, ಶ್ರೀಕಾಂತ್, ಅನಿಲ್‌ಕುಮಾರ್, ಕೌಶಿಕ್, ಚಿರಂಜೀವಿ, ವಿಷ್ಣುವರ್ಧನ, ಕಿರಣ್‌ಕುಮಾರ್, ರವಿಕಿರಣ್, ಲೋಕೇಶ್ ಮತ್ತು ವಾಸುದೇವ ಅವರನ್ನೊಳಗೊಂಡ ತಂಡ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಎಸ್ಪಿ ಪ್ರಶಂಸಿಸಿದರು.

ಮುಷ್ಕರಕ್ಕೆ ಬೆಂಬಲ



ಬೇಡಿಕೆಗಳನ್ನು ಈಡೇರಿಸುವಂತೆ ತಾಲೂಕು ಗ್ರಾಮ ಆಡಳಿತ ಅಧಿಕಾರಿಗಳು ಕೆ.ಆರ್.ಪೇಟೆ ಪಟ್ಟಣದ ತಾಲೂಕು ಕಚೇರಿಯ ಆವರಣದಲ್ಲಿ ನಡೆಸುತ್ತಿರುವ ಅನಿರ್ದಿಷ್ಟಾವಧಿ ಮುಷ್ಕರವು 6ನೇ ದಿನಕ್ಕೆ ಕಾಲಿಟ್ಟಿದ್ದು, ಪ್ರತಿಭಟನಾ ಸ್ಥಳಕ್ಕೆ ರಾಜ್ಯ ಆರ್‌ಟಿಓ ಅಧಿಕಾರಿಗಳ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ್ ಅವರು ಭೇಟಿ ನೀಡಿ, ತಮ್ಮ ಬೆಂಬಲ ವ್ಯಕ್ತಪಡಿಸಿದರು.

ಅಪಘಾತದಲ್ಲಿ ಗಾಯಗೊಂಡ ರಾಸುಗಳನ್ನು ಆಸ್ಪತ್ರೆಗೆ ಸಾಗಿಸಲು ಮಾಜಿ ಸಚಿವ ಪುಟ್ಟರಾಜು ಆಂಬುಲೆನ್ಸ್ ಕೊಡುಗೆ

ಪಾಂಡವಪುರ, ಫೆ.15– ಅಪಘಾತವಾದ ರಾಸುಗಳನ್ನು ಪಶು ಆಸ್ಪತ್ರೆಗೆ ಸಾಗಿಸಲು ಅನುಕೂಲವಾಗುವಂತೆ ಹೊಸ ಆಂಬುಲೆನ್ಸ್‌ನ್ನು ತಮ್ಮ ತಂದೆ–ತಾಯಿ ಹೆಸರಿನ ಎಸ್‌ಟಿಜಿ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಮನ್‌ಮುಲ್ ಒಕ್ಕೂಟಕ್ಕೆ ಉಚಿತವಾಗಿ ಕೊಡುಗೆ ನೀಡಲಾಗುವುದು ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ತಿಳಿಸಿದರು.



ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಅವರನ್ನು ಅಭಿನಂದಿಸಲಾಯಿತು.

ತಾಲೂಕಿನ ಎಲೆಕೆರೆ ಹ್ಯಾಂಡ್‌ಪೋಸ್ಟ್‌ನ ರುತ್ವಿ ಅಕ್ಷಯ್ ಕನ್ವೆಷನ್ ಹಾಲ್‌ನಲ್ಲಿ ಪಾಂಡವಪುರ ತಾಲೂಕಿನ ಹಾಲು ಉತ್ಪಾದಕ ಸಹಕಾರ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನಡೆದ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಅವರಿಗೆ ಅಭಿನಂದನೆ ಹಾಗೂ ಫಲಾನುಭವಿಗಳಿಗೆ ಚೆಕ್ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮನುಷ್ಯರಿಗೆ ಅನಾಹುತಗಳು ಸಂಭವಿಸಿದಾಗ ಅವರನ್ನು ಆಸ್ಪತ್ರೆಗಳಿಗೆ ಸಾಗಿಸಲು ಆಂಬುಲೆನ್ಸ್‌ಗಳ ವ್ಯವಸ್ಥೆ ಇದೆ. ಆದರೆ, ರಾಸುಗಳನ್ನು ಸಾಗಿಸಲು ಆಂಬುಲೆನ್ಸ್‌ಗಳ ಕೊರತೆ ಇದೆ. ಆದ್ದರಿಂದ ಅಪಘಾತವಾದ ಸಂದರ್ಭದಲ್ಲಿ ರಾಸುಗಳನ್ನು ಪಶು ಆಸ್ಪತ್ರೆಗಳಿಗೆ ಸಾಗಿಸಲು ಹೊಸ ಆಂಬುಲೆನ್ಸ್ ವೈಯಕ್ತಿಕವಾಗಿ ತಮ್ಮ ತಂದೆ–ತಾಯಿ ಹೆಸರಿನ ಎಸ್‌ಟಿಜಿ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಒಕ್ಕೂಟಕ್ಕೆ ಉಚಿತವಾಗಿ ಕೊಡುಗೆ ನೀಡಲಾಗುವುದು ಎಂದರು.

ಜತೆಗೆ ತಾಲೂಕಿನಲ್ಲಿ 9 ಸಾವಿರ ರಾಸುಗಳಿಗೆ ವಿಮೆ ಮಾಡಿಸಲಾಗಿದೆ, ಇನ್ನೂ 5 ಸಾವಿರ ರಾಸುಗಳಿಗೆ ವಿಮೆ ಮಾಡಿಲ್ಲ ರೈತರು ರಾಸುಗಳಿಗೆ ಕಡ್ಡಾಯವಾಗಿ ಮಾಡಿಸಬೇಕು. ಮುಂದಿನ ದಿನಗಳಲ್ಲಿ ತಾಲೂಕಿ ಸುಮಾರು 5 ಸಾವಿರ ರಾಸುಗಳಿಗೆ ಪ್ರತಿವರ್ಷದ ರೈತರು ಪಾವತಿಸಿ ಮಾಡುವ ಶೇ.50 ವಿಮೆ ಹಣವನ್ನು ಸಹ ನಮ್ಮ ಎಸ್‌ಟಿಜಿ ಚಾರಿಟೆಬಲ್ ಟ್ರಸ್ಟ್ ವತಿಯಿಂದ ನೀಡಲಾಗುವುದು, ರೈತರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಒಂದನೇ ಪುಟದಿಂದ

ಸಿದ್ದರಾಮಯ್ಯ ಅನಿವಾರ್ಯ

ಬರಬೇಕೆಂದರೆ ಸಿದ್ದರಾಮಯ್ಯ ನಾಯಕತ್ವದಿಂದ ಮಾತ್ರ ಸಾಧ್ಯ ಎಂದರು. ಪಕ್ಷದ ನಾಯಕ ಬಸವರಾಜ ರಾಯರೆಡ್ಡಿ ಸೇರಿದಂತೆ ಅನೇಕ ಹಿರಿಯರು ಸಿದ್ದರಾಮಯ್ಯ ನಾಯಕತ್ವವೇ ಬೇಕೆಂದಿದ್ದಾರೆ. ಅದಕ್ಕೆ ನನ್ನ ಬೆಂಬಲವೂ ಇದೆ. ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಬದಲಾವಣೆಗೆ ಸಂಬಂಧಿಸಿದಂತೆ ಎಐಸಿಸಿ ಅಧ್ಯಕ್ಷ ಮಲ್ಲಿ ಕಾರ್ಜುನ ಖರ್ಗೆ ತೀರ್ಮಾನ ಕೈಗೊಳ್ಳುತ್ತಾರೆ. ಆ ಬಗ್ಗೆ ನಾವೇನೂ ಹೇಳುವುದಿಲ್ಲ ಎಂದಿದ್ದಾರೆ.

ಜಾರಕಿಹೊಳಿ ಹೇಳಿಕೆಗೆ ಧ್ವನಿಗೂಡಿಸಿದ ಕಾಂಗ್ರೆಸ್‌ನ ಕಂಪ್ಲಿ ಶಾಸಕ ಗಣೇಶ್, ಸಿದ್ದರಾಮಯ್ಯ ಸಾಹೇಬರು ಐದು ವರ್ಷಗಳ ಕಾಲ ಮುಖ್ಯಮಂತ್ರಿ ಆಗಿರಬೇಕು. ಸಿದ್ದರಾಮಯ್ಯ ರಾಜ್ಯಕ್ಕಷ್ಟೇ ಅಲ್ಲ, ದೇಶಕ್ಕೂ ಅನಿವಾರ್ಯ. ಅವರು ಇರುವುದರಿಂದಲೇ ಕಾಂಗ್ರೆಸ್ ಪಕ್ಷಕ್ಕೆ ಅನುಕೂಲ. ಅವರು ಒಂದು ರೀತಿ ರೋಲ್ ಮಾಡೆಲ್ ಇದ್ದಂತೆ. ಕಳೆದ ಬಾರಿಯ ಚುನಾವಣೆಯಲ್ಲಿ ಅವರ ನಾಯಕತ್ವದಿಂದಲೇ ಪಕ್ಷ 135 ಸ್ಥಾನಗಳ ಗೆಲುವು ಸಾಧಿಸಿದ್ದು, ಈ ಎಲ್ಲಾ ಶಾಸಕರೂ ಸಿದ್ದರಾಮಯ್ಯ ಅವರೇ ಇರಬೇಕೆಂದು ಬಯಸಿದ್ದಾರೆ. ನಮ್ಮ ಕ್ಷೇತ್ರಗಳಿಗೆ ಸಾಕಷ್ಟು ಅನುದಾನ ನೀಡಿದ್ದಾರೆ ಇದರಿಂದ ಅಭಿವೃದ್ಧಿಯೂ ಆಗಿದೆ. ಜನರು ಸಿದ್ದರಾಮಯ್ಯ ಅವರನ್ನು ಪೂಜಿಸುವ ಹಂತಕ್ಕೆ ಹೋಗಿದ್ದಾರೆ. ಇಂತಹವರನ್ನು ಅಧಿಕಾರದಿಂದ ಕೆಳಗಿಳಿಸಲು ಸಾಧ್ಯವೇ? ಎಂದು ಪ್ರಶ್ನಿಸಿದ್ದಾರೆ.

ವಂದೇ ಭಾರತ್ ರೈಲು ಸೌಕರ್ಯ

ಮೊಬೈಲ್ ಉತ್ಪಾದನಾ ಕಂಪನಿ ಆರಂಭವಾಗಲಿದೆ, ಇದರಿಂದ 40 ಸಾವಿರ ಉದ್ಯೋಗ ಸೃಷ್ಟಿಯಾಗುವ ಗುರಿ ಹೊಂದಲಾಗಿದೆ. ಮುಂದಿನ ಬಾರಿ ನಗರಕ್ಕೆ ಬಂದಾಗ ಈ ಕಂಪನಿಗೆ ಭೇಟಿ ಕೊಡುತ್ತೇನೆ.

ಉತ್ಪಾದನಾ ವಲಯಕ್ಕೆ ಬಜೆಟ್‌ನಲ್ಲಿ ಹೆಚ್ಚಿನ ಆದ್ಯತೆ ನೀಡಲಾಗಿದೆ, ಉದ್ಯೋಗ ಸೃಷ್ಟಿಯೇ ಇದರ ಗುರಿ, ಮೊಬೈಲ್ ಫೋನ್, ಎಲೆಕ್ಟ್ರಾನಿಕ್ಸ್, ಸೆಮಿಕಂಡಕ್ಟರ್, ಫುಟ್‌ವೇರ್ ವಲಯಗಳಿಗೆ ಬಜೆಟ್ ಪುಷ್ಟಿ ನೀಡಿದೆ ಎಂದರು. ಕಳೆದ 60 ವರ್ಷಗಳಲ್ಲಿ ಆಗದಿರುವ ಕೆಲಸವನ್ನು ಪ್ರಧಾನಿ ನರೇಂದ್ರ ಮೋದಿ, ಒಂದು ಮತ್ತು ಎರಡನೇ ಅವಧಿಯಲ್ಲಿ ಮಾಡಿ ತೋರಿಸಿದ್ದಾರೆ. ದೇಶದ ಯಾವ ಭಾಗಕ್ಕೆ ಹೋದರೂ ಅಭಿವೃದ್ಧಿ ಕಾರ್ಯ ಕಾಣುತ್ತದೆ.

ಲೋಕಸಭೆಯಲ್ಲಿ ಮಂಡಿಸಲಾದ 2025–26ನೇ ಸಾಲಿನ ಕೇಂದ್ರ ಮುಂಗಡ ಪತ್ರದಲ್ಲಿ ಆದಾಯ ತೆರಿಗೆ ರಿಯಾಯಿತಿ ಮಿತಿಯನ್ನು 12 ಲಕ್ಷ ರೂ.ವರೆಗೆ ಹೆಚ್ಚಿಸಲಾಗಿದೆ. ಇದರಿಂದ ಮಧ್ಯಮ ವರ್ಗದ ಜನರಿಗೆ ಅನುಕೂಲವಾಗಿದೆ.

ಯುಪಿಎ ಆಡಳಿತಾವಧಿಯಲ್ಲಿ ಭಾರತದ ಆರ್ಥಿಕತೆ ಬಹಳ ಕೆಟ್ಟ ಸ್ವರೂಪದಲ್ಲಿತ್ತು. 2014ರಲ್ಲಿ ಬ್ಯಾಂಕಿಂಗ್ ವಲಯ ಉತ್ತಮವಾಗಿರಲಿಲ್ಲ, ಪ್ರಧಾನಿ ಮೋದಿ ಹೊಸ ಆಯಾಮ ನೀಡಿದರು. ವರ್ಷದಿಂದ ವರ್ಷಕ್ಕೆ ದೇಶದ ರಾಷ್ಟ್ರೀಯ ಹೆದ್ದಾರಿ, ರೈಲ್ವೇ ಹಾಗೂ ನಾಗರಿಕ ವಿಮಾನಯಾನ ವಲಯಗಳಲ್ಲಿ ಅಭಿವೃದ್ಧಿ ಆಗಿದೆ.

ಕೇಂದ್ರ ಸರ್ಕಾರದ ಆಡಳಿತಕ್ಕೆ ಜನ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ, ಮೋದಿ ದೂರದೃಷ್ಟಿ ಯೋಜನೆಗಳಿಗೆ ಜನರ ಬೆಂಬಲ ಸಿಕ್ಕಿದೆ, ಜನಧನ್, ಉಜ್ವಲಾ, ಜಲಜೀವನ್ ಯೋಜನೆಗಳು ಜನರ ಬದುಕಿನಲ್ಲಿ ದೊಡ್ಡ ಬದಲಾವಣೆ ತಂದಿವೆ, ಮೂಲಸೌಕರ್ಯ ವೃದ್ಧಿ, ಶಿಕ್ಷಣ ಅಭಿವೃದ್ಧಿ, ರೈಲ್ವೇ ಯೋಜನೆಗಳು ಜನರ ಬದುಕಿನ ಗತಿ ಬದಲಿಸಿವೆ ಎಂದರು.

ಹತ್ತು ವರ್ಷಗಳ ಹಿಂದೆ ಕಾಲ್ ಡ್ರಾಪ್ ದೊಡ್ಡ ಚರ್ಚೆ ಆಗಿತ್ತು. ಈಗ ಉತ್ತಮ 5ಜಿ ನೆಟ್‌ವರ್ಕ್ ಇದೆ, ಕಳೆದ ಹತ್ತು ವರ್ಷದಿಂದ ವಿವಿಗಳು, ಐಐಎಂ, ಐಐಟಿ, ಮೆಡಿಕಲ್ ಕಾಲೇಜುಗಳ ಸಂಖ್ಯೆ ದುಪ್ಪಟ್ಟಾಗಿವೆ. ಬಡ, ಮಧ್ಯಮ ವರ್ಗದ ಮೇಲೆ ಬಜೆಟ್ ಕೇಂದ್ರೀಕರಿಸಲಾಗಿದೆ, ಕಿಸಾನ್ ಸಮ್ಮಾನ್ ನಿಧಿಯಂತಹ ರೈತ ಕಲ್ಯಾಣ ಯೋಜನೆಗಳು ಬದಲಾವಣೆಯ ಸಾಕ್ಷಿಯಾಗಿವೆ, ಸಣ್ಣ, ಅತಿ ಸಣ್ಣ ಕೈಗಾರಿಕೆಗಳಿಗೆ ದೊಡ್ಡ ನಿರೀಕ್ಷೆ ಹಾಗೂ ಭರವಸೆ ಎನ್‌ಡಿಎ ಸರ್ಕಾರದಿಂದ ಲಭಿಸಿದೆ, ದೇಶ ದೊಡ್ಡ ಆರ್ಥಿಕ ವ್ಯವಸ್ಥೆ ಸೃಷ್ಟಿಸಿದೆ, ಹಣದುಬ್ಬರಕ್ಕೆ ಕಡಿವಾಣ ಬಿದ್ದಿದೆ.

ಮುಂದಿನ ವರ್ಷದ ವೇಳೆಗೆ ಭಾರತ 356 ಲಕ್ಷ ಕೋಟಿ ರೂ. ಆರ್ಥಿಕತೆ ಹೊಂದಲಿದೆ, ಅಮೆರಿಕ, ಫ್ರಾನ್ಸ್, ಇಂಗ್ಲೆಂಡ್‌ಗೆ ಹೋಲಿಸಿದರೆ ನಮ್ಮ ಆರ್ಥಿಕತೆ ಉತ್ತಮವಾಗಿದೆ, ಉತ್ಪಾದನಾ ವಲಯಕ್ಕೂ ಬಜೆಟ್ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದರು.

ತಕ್ಷಣ ಬಂದ್ ಆಗಬೇಕು

ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಎಚ್ಚರಿಸಿದರು. ಕಾಯ್ದೆ ಜಾರಿಗೊಳಿಸಿದ ಬಳಿಕ ಹಲವು ಜಿಲ್ಲೆಗಳಲ್ಲಿ ಪ್ರಕರಣಗಳ ಸಂಖ್ಯೆಯಲ್ಲಿ ಗಣನೀಯವಾಗಿ ಇಳಿಮುಖವಾಗಿದ್ದು, ಕಟ್ಟುನಿಟ್ಟಿನಿಂದ ಕಾಯ್ದೆಯ ಅಂಶಗಳನ್ನು ಜಾರಿಗೊಳಿಸುವ ಮೂಲಕ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಮುಖ್ಯಮಂತ್ರಿಗಳು ಸೂಚನೆ ನೀಡಿದರು. ಕಾನೂನು ಸಚಿವ ಹೆಚ್.ಕೆ.ಪಾಟೀಲ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳಾದ ನಸೀರ್ ಅಹ್ಮದ್, ಗೋವಿಂದರಾಜು, ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್, ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಸರ್ಕಾರದ ಕಾರ್ಯದರ್ಶಿ ಬಿ.ಬಿ. ಕಾವೇರಿ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ಬೆಂಗಳೂರು ನಗರ ಪೊಲೀಸ್ ಆಯುಕ್ತ ದಯಾನಂದ್ ಉಪಸ್ಥಿತರಿದ್ದರು.

ರೈಲ್ವೆ ರಾಜ್ಯ ಸಚಿವ ಸೋಮಣ್ಣ ಚಾಲನೆ

ಮತ್ತು ಬೆಂಗಳೂರು ನಡುವೆ ಸಂಚಾರ ಆರಂಭಿಸಲಿವೆ (ರೈಲು ಸಂಖ್ಯೆ 06525/26 ಮತ್ತು 66551/52, ಪ್ರತಿದಿನ). ಉಳಿದ 6 ರೈಲುಗಳ ಸಂಚಾರ ಶೀಘ್ರದಲ್ಲೇ ಆರಂಭಗೊಳ್ಳಲಿದೆ. ಅಶೋಕಪುರಂ ರೈಲ್ವೆ ನಿಲ್ದಾಣದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ಉದ್ಘಾಟಿಸಿ, ರೈಲು ಸೇವೆಗೆ ಹಸಿರು ನಿಶಾನೆ ತೋರಿದರು. ಬಳಿಕ ಸಮಾರಂಭದಲ್ಲಿ ಮಾತನಾಡಿದ ವಿ. ಸೋಮಣ್ಣ, ಅಶೋಕಪುರಂ ರೈಲ್ವೆ ನಿಲ್ದಾಣ ವನ್ನು ಸುಮಾರು 40 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಪ್ರತಾಪ್ ಸಿಂಹ ಸಂಸದರಾಗಿದ್ದಾಗಲೇ ಅಭಿವೃದ್ಧಿಗೊಂಡ ಈ ನಿಲ್ದಾಣದ ಉದ್ಘಾಟನೆ ಸಹ ಆಗಿದೆ. ಭಾರತೀಯ ರೈಲ್ವೆಗೆ ಹಿಂದೆ ಪ್ರತ್ಯೇಕ ಬಜೆಟ್ ಮಾಡಿದ್ದರು. ಆ ಬಜೆಟ್ ನಲ್ಲಿ ಒಂದು ಜಿಲ್ಲಾ ಕೇಂದ್ರಕ್ಕೆ 5 ಲಕ್ಷ ಸಹ ಕೊಡದ ವ್ಯವಸ್ಥೆ ಇತ್ತು. ನರೇಂದ್ರ ಮೋದಿಯವರು ಸಾಮಾನ್ಯ ಬಜೆಟ್ ಜೊತೆಗೆ ರೈಲ್ವೆ ಬಜೆಟ್ ಸಹ ಸೇರಿಸಿದರು. ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ 2 ಲಕ್ಷದ 65 ಸಾವಿರ ಕೋಟಿ ಕೊಟ್ಟು ಭಾರತೀಯ ರೈಲ್ವೆಯನ್ನು ಉತ್ತುಂಗಕ್ಕೆ ಕೊಡೊಯ್ಯುವ ಕೆಲಸ ಮಾಡಿದ್ದಾರೆ. ಕೇವಲ ರೈಲ್ವೆ ಇಲಾಖೆಗೆ ಮಾತ್ರವಲ್ಲದೆ ಎಲ್ಲಾ ಇಲಾಖೆಗಳಿಗೂ ಒತ್ತು ನೀಡಿದ್ದಾರೆ ಎಂದು ತಿಳಿಸಿದರು. ಈ ಹಿಂದೆ ರಾಜಕೀಯ ಲಾಭಕ್ಕಾಗಿ ರೈಲ್ವೆ ಇಲಾಖೆಯಲ್ಲಿ ಅನೇಕ ದುರುಪಯೋಗ ಮಾಡಿಕೊಳ್ಳಲಾಗಿದೆ. 2013–14ರವರೆಗೆ ಭಾರತದ ಸರ್ಕಾರವು ರೈಲ್ವೆ ಇಲಾಖೆಗಾಗಿ ಒಂದು ರಾಜ್ಯಕ್ಕೆ 835 ಕೋಟಿ ಮಾತ್ರ ಕೊಡುತ್ತಿತ್ತು. ಆದರೆ ಇಂದು ಪ್ರಧಾನಿ ನರೇಂದ್ರ ಮೋದಿಯವರು ವರ್ಷಕ್ಕೆ 7,564 ಕೋಟಿ ಕೊಡುತ್ತಿದ್ದಾರೆ. ಅಲ್ಲದೆ, ಸುಮಾರು 33 ಸಾವಿರ ಕೋಟಿ ರೂ. ವೆಚ್ಚದ ಯೋಜನೆಗಳ ಸಂಬಂಧ ನಮ್ಮಲ್ಲಿ ಕೆಲಸ–ಕಾರ್ಯಗಳು ನಡೆಯುತ್ತಿವೆ ಎಂದರು. ನರೇಂದ್ರ ಮೋದಿಯವರು ದೇಶ ಅಭಿವೃದ್ಧಿಯಾಗಬೇಕಾದರೆ ರೈಲ್ವೆ ಕ್ಷೇತ್ರ ಅಭಿವೃದ್ಧಿಯಾಗಬೇಕು ಎಂದಿದ್ದಾರೆ. ಮೂರನೇ ಅವಧಿಯ ಅವರ ನೇತೃತ್ವದ ಸರ್ಕಾರ ಕಳೆದ 8 ತಿಂಗಳಲ್ಲಿ ದೇಶದ ಅಭಿವೃದ್ಧಿಗೆ ಸಾಕಷ್ಟು ಒತ್ತು ನೀಡಿದೆ. ಕರ್ನಾಟಕದಲ್ಲಿ 10 ವರ್ಷಗಳಲ್ಲಿ 37 ಸಾವಿರ ಕೋಟಿ ರೂ.ಗಳ ರೈಲ್ವೆ ಕಾಮಗಾರಿಗಳ ಅನುಷ್ಠಾನಕ್ಕೆ ಒತ್ತು ನೀಡಿದ್ದು, ಅನೇಕ ಯೋಜನೆಗಳಿಗೆ ಚಾಲನೆ ನೀಡಿದ್ದೇವೆ. ತುಮಕೂರು–ರಾಯದುರ್ಗ, ತುಮಕೂರು–ಚಿತ್ರದುರ್ಗ, ತುಮಕೂರು–ಚಿತ್ರದುರ್ಗ–ದಾವಣಗೆರೆ ಇತ್ಯಾದಿ ಯೋಜನೆಗಳನ್ನು 2 ವರ್ಷಗಳಲ್ಲಿ ಪೂರ್ಣಗೊಳಿಸಲು ಪ್ರಧಾನಿಗಳು ಸೂಚನೆ ಕೊಟ್ಟಿದ್ದಾರೆ ಎಂದು ಹೇಳಿದರು.

ರಾಜ್ಯದ 61 ನಿಲ್ದಾಣಗಳ ಅಭಿವೃದ್ಧಿ: ರಾಜ್ಯದ 61 ರೈಲ್ವೆ ನಿಲ್ದಾಣಗಳನ್ನು 1,900 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. 2025ರ ಡಿಸೆಂಬರ್ ಒಳಗೆ ಕರ್ನಾಟಕದಲ್ಲಿರುವ ಎಲ್ಲಾ ರೈಲ್ವೆ ಲೈನ್‌ಗಳನ್ನು ಎಲೆಕ್ಟ್ರಿಫಿಕೇಷನ್ ಮಾಡಬೇಕೆಂದು ಪ್ರಧಾನಿಗಳು ಸೂಚನೆ ಕೊಟ್ಟಿದ್ದಾರೆ. ಇಡೀ ರಾಜ್ಯದಲ್ಲಿರುವ ಲೆವೆಲ್ ಕ್ರಾಸಿಂಗ್ ತಪ್ಪಿಸಲು ಓವರ್ ಬ್ರಿಡ್ಜ್, ಅಂಡರ್‌ಪಾಸ್ ಮಾಡಲು ಕೇಂದ್ರವೇ ಅನುದಾನ ನೀಡುತ್ತಿದೆ. ಚಾಮರಾಜಪುರಂ ರೈಲ್ವೆ ಗೇಟ್ ಕೂಡ ಪರಿಗಣಿಸಲು ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದ್ದಾರೆ. ಹಾಗಾಗಿ ಪರಿಶೀಲಿಸಲು ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕವಚ್ ತಂತ್ರಜ್ಞಾನ ಅಳವಡಿಕೆ: 2025ರ ಅಂತ್ಯದೊಳಗೆ ಸಂಪೂರ್ಣವಾಗಿ ಅಪಘಾತ ತಪ್ಪಿಸಲು ಕವಚ್ ತಂತ್ರಜ್ಞಾನ ಅಳವಡಿಸಲು ರಾಜ್ಯದಲ್ಲಿ 1,600 ಕಿ.ಮೀ. ಆಯ್ಕೆ ಮಾಡಿಕೊಳ್ಳಲಾಗಿದೆ. ಇದಕ್ಕೆ 1,108 ಕೋಟಿ ವೆಚ್ಚವಾಗಲಿದೆ. ಇಂದು 10 ವಂದೇ ಭಾರತ್ ರೈಲುಗಳು ರಾಜ್ಯದಲ್ಲಿ ಸಂಚಾರ ಮಾಡುತ್ತಿವೆ. ಆ ಮೂಲಕ ರಾಜ್ಯದ 12 ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸುತ್ತಿವೆ. 50 ವಂದೇ ಭಾರತ್ ಸ್ಲೀಪರ್ ಕೋಚ್‌ಗಳನ್ನು 2025–26 ಸಾಲಿನಲ್ಲಿ ಉತ್ಪಾದನೆ ಮಾಡುತ್ತಿದ್ದು, ಮೈಸೂರಿಗೂ ಇದರ ಪ್ರಯೋಜನ ಲಭಿಸುತ್ತಿದೆ. ಮೈಸೂರು ರೈಲ್ವೆ ನಿಲ್ದಾಣವನ್ನು 354 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ತ್ವರಿತಗತಿಯಲ್ಲಿ ಅಭಿವೃದ್ಧಿ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚಿಸಿದರು.

ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಕೆ.ವಿವೇಕಾನಂದ, ನೈರುತ್ಯ ರೈಲ್ವೆ ಮೈಸೂರು ವಿಭಾಗದ ಡಿಆರ್‌ಎಂ ಶಿಲ್ಪಿ ಅಗರ್‌ವಾಲ್ ಮತ್ತಿತರರು ಹಾಜರಿದ್ದರು.

ಸುಳ್ಳು ಹೇಳುತ್ತಿದ್ದಾರೆ

ಸುಳ್ಳು ಹೇಳುತ್ತಿದ್ದಾರೆ ಎಂದು ಮುಖ್ಯಮಂತ್ರಿ ಗಳು ಆಪಾದಿಸಿದ್ದಾರೆ. ನಾನು ಈಗಾಗಲೇ ಟ್ವೀಟ್ ಮೂಲಕವೇ ಅಂಕಿ ಅಂಶಗಳನ್ನು ಅವರಿಗೆ ಕೊಟ್ಟಿದ್ದೇನೆ. ನಾಳೆ ಮಾಧ್ಯಮಕ್ಕೂ ಬಿಡುಗಡೆ ಮಾಡುತ್ತಿದ್ದೇನೆ. ಬಡ ಬೋರೆಗೌಡನ ದುಡ್ಡು ಯಾರೋ ದೋಚಲು ಪ್ರಧಾನಿ ನರೇಂದ್ರ ಮೋದಿ ಬಿಡುವುದಿಲ್ಲ ಎಂದು ವಿ.ಸೋಮಣ್ಣ ಕಿಡಿಕಾರಿದರು.

ನಿಮ್ಮ ಸರ್ಕಾರ ಮಾಡುತ್ತಿರುವ ಅನೇಕ ಅವ್ಯವಸ್ಥೆ ಸರಿಪಡಿಸಲು ನಿಮ್ಮ ಜೊತೆಗೆ ಬೇಕಿದ್ದರೆ ಕೈಜೋಡಿಸುತ್ತೇವೆ. ಆದರೆ ಸುಳ್ಳು ಹೇಳಬೇಡಿ, ಸರ್ಕಾರದ ಖಜಾನೆಯಲ್ಲಿ ಖಾಲಿಯಾಗಿರುವ ಹಣಕ್ಕೆ ಸಂಬಂಧಿಸಿದಂತೆ ಬೇರೊಂದು ರೂಪ ನೀಡಬೇಡಿ. ನೀವು ಹಿರಿಯರಿದ್ದೀರಿ. 14ನೇ ಬಾರಿಗೆ ಬಜೆಟ್ ಮಂಡನೆ ಮಾಡುತ್ತಿದ್ದೀರಿ. ನಿಮ್ಮ ಬಾಯಿಯಿಂದ ಸುಳ್ಳು ಬರುವುದು ಒಳ್ಳೆಯದಲ್ಲ ಎಂದು ಟೀಕಿಸಿದರು.

ಭಾರತ ಸರ್ಕಾರ ನೀಡಿದ ಅಭಿವೃದ್ಧಿ ಪೂರಕವಾದ ಬಜೆಟ್ ಅನ್ನು ಒಮ್ಮೆ ಓದಿ. ಬಜೆಟ್‌ನಲ್ಲಿ 12 ಲಕ್ಷ ರೂ. ಆದಾಯಕ್ಕೆ ತೆರಿಗೆ ಮುಕ್ತಗೊಳಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ದೇಶದ್ಯಾಂತ 10 ಸಾವಿರ ವೈದ್ಯಕೀಯ ಸೀಟುಗಳ ಹೆಚ್ಚಳ ಮಾಡಲಾಗಿದೆ. ನಮಗೇನು ಕೊಟ್ಟಿಲ್ಲ ಎನ್ನುತ್ತಾರೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಒಂದು ನಾಣ್ಯದ ಎರಡು ಮುಖಗಳಂತೆ. ಕಳಕಳಿಯಿಂದ ಒಟ್ಟಾಗಿ ಅಭಿವೃದ್ಧಿ ಕೆಲಸ ಮಾಡೋಣ ಎಂದು ನಿನ್ನೆಯಷ್ಟೇ ಹೇಳಿದ್ದೇನೆ. ಅದಾಗ್ಯೂ ಅರ್ಥ ಮಾಡಿಕೊಳ್ಳದಿದ್ದರೆ ನಾವೇನು ಮಾಡಲಾಗದು. ರಾಜ್ಯ ಸರ್ಕಾರದವರು ಇಂತಹ ಕಾರ್ಯಕ್ರಮಗಳಿಗೆ ಬನ್ನಿ ಅಂದ್ರು ಬರುವುದಿಲ್ಲ ಎಂದರು.

ನಾನು ವಿವಿಧ ರಾಜ್ಯಗಳಿಗೆ ಭೇಟಿ ನೀಡುತ್ತಿದ್ದು, ನಾಳಿದ್ದು ಕೇರಳಗೆ ಭೇಟಿ ನೀಡುತ್ತಿದ್ದೇನೆ. ದೇಶದಲ್ಲಿ ರೈಲ್ವೆ ವ್ಯವಸ್ಥೆಯಲ್ಲಿ ಸುಧಾರಣೆಯಾಗಿದೆ. ರಸ್ತೆ ಸಂಪರ್ಕವೂ ಸುಧಾರಣೆಯಾಗಿದೆ. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಮಾಡಲು ಇನ್ನು 50 ವರ್ಷಗಳಾದರೂ ಆಗುತ್ತಿರಲಿಲ್ಲ. ಅದನ್ನು ಕೇಂದ್ರ ಸಚಿವ ನಿತಿನ್ ಗಡ್ಕರಿ ಹಾಗೂ ಮಾಜಿ ಸಂಸದ ಪ್ರತಾಪ್‌ಸಿಂಹ ಮಾಡಿ ತೋರಿಸಿದ್ದಾರೆ. ಇಂದಿನ ಈ ಕಾರ್ಯಕ್ರಮ ತ್ವರಿಗತಿಯಲ್ಲಿ ಆಗಲು ಸಂಸದ ಯದುವೀರ ಒಡೆಯರ್ ಕಾರಣ. ನರೇಂದ್ರ ಮೋದಿಯವರ ಆಡಳಿತದ 10 ವರ್ಷಗಳಲ್ಲಿ 50 ವರ್ಷಗಳಲ್ಲಿ ಆಗದ ಸಾಧನೆಯಾಗಿದೆ ಎಂದರು.

ಪೊಲೀಸರ ವಿರುದ್ಧ ಮಹಿಳೆ ಆಕ್ರೋಶ: ಕಾರ್ಯಕ್ರಮದಲ್ಲಿ ಸಂಸದ ಯದುವೀರ ಒಡೆಯರ್ ಭಾಷಣ ಮಾಡುವ ವೇಳೆ ಸಚಿವ ವಿ.ಸೋಮಣ್ಣನವರ ಬಳಿ ತನ್ನ ಅವಹಾಲು ಹೇಳಿಕೊಳ್ಳಲು ಪೊಲೀಸರು ವೇದಿಕೆಯ ಬಳಿಗೆ ಬಿಡಲಿಲ್ಲವೆಂದು ಮಹಿಳೆಯೊಬ್ಬರು ಪೊಲೀಸರ ವಿರುದ್ಧ ಏರು ಧ್ವನಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದ ಘಟನೆ ನಡೆಯಿತು. ಗಲಾಟೆ ಕೇಳಿಸಿದ ಹಿನ್ನೆಲೆಯಲ್ಲಿ ವೇದಿಕೆ ಸಮೀಪದಲ್ಲೇ ಇದ್ದ ಆ ಮಹಿಳೆಯ ಬಳಿಗೆ ಹೋದ ಸೋಮಣ್ಣ, ಅವರ ಅವಹಾಲು ಆಲಿಸಿದರು. ಈ ವೇಳೆ ಸದರಿ ಮಹಿಳೆಯು, ನಮ್ಮ ಭೂಮಿಯನ್ನು ಅಶೋಕಪುರಂ ರೈಲ್ವೆ ನಿಲ್ದಾಣದ ಅಭಿವೃದ್ಧಿಗಾಗಿ ಸ್ವಾಧೀಪಡಿಸಿಕೊಂಡು ಯಾವುದೇ ಪರಿಹಾರ ನೀಡಿಲ್ಲ ಎಂದು ಹೇಳಿದಾಗ, ಪರಿಶೀಲಿಸಿ ಕ್ರಮ ವಹಿಸುವುದಾಗಿ ಮಹಿಳೆಯನ್ನು ಸಮಾಧಾನ ಪಡಿಸಿ, ಸೋಮಣ್ಣ ಕಳುಹಿಸಿದರು. ತಮ್ಮ ಭಾಷಣದ ನಡುವೆ ಈ ವಿಷಯ ಪ್ರಸ್ತಾಪಿಸಿದ ವಿ.ಸೋಮಣ್ಣ, ಆ ಹೆಣ್ಣು ಮಗಳು ದೂರು ಹೇಳಿಕೊಂಡಿದ್ದು, ನಿಜವಾಗಲೂ ಅನ್ಯಾಯವಾಗಿದ್ದರೆ ಸರಿಪಡಿಸಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸದ್ಯದಲ್ಲೇ ಜೆಡಿಎಸ್ ಬೃಹತ್ ಸಮಾವೇಶ

ಸಿಎಂ ಸಿದ್ದರಾಮಯ್ಯ ಪ್ರಶ್ನೆಗೆ ಜವಾಬ್ ನೀಡಲು ಸಿದ್ಧತೆ

- ನಾನಿನ್ನು ನಾಲ್ಕೈದು ವರ್ಷ ಬದುಕಿರುತ್ತೇನೆ; ರಾಜಕೀಯ ಮಾಡ್ತೇನೆ–ದೇವೇಗೌಡರ ಗುಟುರು
- ನದಿಗಳ ಜೋಡಣೆ ಜೊತೆಗೆ 25 ಟಿಎಂಸಿ ನೀರಿಗೆ ಹೋರಾಡುತ್ತೇನೆ



ಬೆಂಗಳೂರು, ಫೆ.15(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಠಕ್ಕರ್ ಕೊಡಲು ಹಾಸನ ಇಲ್ಲವೇ ತುಮಕೂರಿನಲ್ಲಿ ಕಾರ್ಯಕರ್ತರ ಬೃಹತ್ ಸಮಾವೇಶವನ್ನು ಮೇ ತಿಂಗಳಿ ನಲ್ಲಿ ನಡೆಸುವುದಾಗಿ ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.6ರಂದು ಪೂರ್ವಭಾವಿ ಸಭೆ ಕರೆಯಲಾಗಿದೆ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ನಾಯಕತ್ವದಲ್ಲೇ ಈ ಸಮಾವೇಶ ಜರುಗಲಿದೆ ಎಂದರು. ಮಂಡ್ಯ–ತುಮಕೂರು ಮಧ್ಯಭಾಗದಲ್ಲಿ, ಇಲ್ಲವೇ ಹಾಸನದಲ್ಲಿ ನಡೆಸಬೇಕೇ ಎಂಬ ಬಗ್ಗೆ ಈ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗುವುದು. ಪಕ್ಷ ಮತ್ತು ಸರ್ಕಾರಕ್ಕಿಂತ ತಮ್ಮ ವರ್ಚಸ್ಸು ಮತ್ತು ವ್ಯಕ್ತಿತ್ವ ಬಿಂಬಿಸಿ ಕೊಳ್ಳಲು ಸಿದ್ದರಾಮಯ್ಯ ಕೆಲವು ತಿಂಗಳ ಹಿಂದೆ ಹಾಸನದಲ್ಲಿ ಸಮಾವೇಶ ಮಾಡಿದ್ದಾರೆ. ಅಲ್ಲಿ ನಮಗೆ ಹಲವು ಪ್ರಶ್ನೆಗಳನ್ನು ಮುಂದಿಟ್ಟಿದ್ದಾರೆ. ಅವರ ಎಲ್ಲ ಪ್ರಶ್ನೆಗಳು, ಸಂಶಯಗಳು ಮತ್ತು ಆರೋಪಗಳಿಗೆ ಜನರ ಮುಂದೆಯೇ ಉತ್ತರ ಕೊಡುತ್ತೇವೆ. ನಾವೆಲ್ಲೂ ಓಡಿ ಹೋಗಿಲ್ಲ, ಕಾರಣಾಂತರಗಳಿಂದ ತಕ್ಷಣಕ್ಕೆ ಉತ್ತರ ಕೊಡಲು ಸಾಧ್ಯವಾಗಿಲ್ಲ ಎಂದರು.

ನಾನಿನ್ನೂ ಐದು ವರ್ಷಗಳ ಕಾಲ ಬದುಕಿರುತ್ತೇನೆ. ಅಲ್ಲಿಯವರೆಗೂ ರಾಜಕೀಯವನ್ನೂ ಮಾಡುತ್ತೇನೆ, ಎಲ್ಲಕ್ಕಿಂತ ಮಿಗಿಲಾಗಿ ರಾಜ್ಯದ ಉದ್ದಗಲಕ್ಕೆ ನೀರಾವರಿಗಾಗಿ ಹೋರಾಟ ಮಾಡುವುದಾಗಿ ತಿಳಿಸಿದರು.

25 ಟಿಎಂಸಿ ನೀರಿಗೆ ಹೋರಾಟ: ಗೋದಾವರಿ–ಕೃಷ್ಣ–ಕಾವೇರಿ ನದಿ ಜೋಡಣೆ ಯೋಜನೆಯಿಂದ ನಮಗೆ 25 ಟಿಎಂಸಿ ನೀರು ತರಲು ನನ್ನ ಹೋರಾಟ ಮುಂದುವರೆಸುತ್ತೇನೆ. ನದಿಗಳ ಜೋಡಣೆಯಿಂದ ಕುಡಿಯುವ ನೀರಲ್ಲದೆ, ಸೊರಗಿರುವ ಹಳೇ ಮೈಸೂರು ಭಾಗದ ಅನೇಕ ಪ್ರದೇಶ ಗಳಿಗೆ ಜಲ ಮೂಲ ದೊರೆಯುತ್ತದೆ. ನಾನು ಕಾವೇರಿ ನದಿ ಪಾತ್ರಕ್ಕೆ ಮಾತ್ರ ಹೋರಾಟ ಮಾಡುತ್ತಿಲ್ಲ, ಕುಡಿಯುವ ನೀರಲ್ಲದೆ ಸೊರಗಿರುವ ಜನರಿಗಾಗಿ ನದಿಗಳ ಜೋಡಣೆಯಿಂದ ನೀರು ತರಲು ಹೋರಾಟ ಮುಂದುವರೆಸುತ್ತೇನೆ. ಈ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಅವರಿಗೂ ಎರಡು ಬಾರಿ ಪತ್ರ ಬರೆದಿದ್ದೇನೆ, ರಾಜ್ಯಸಭೆಯಲ್ಲೂ ಪ್ರಸ್ತಾಪ ಮಾಡಿದ್ದೇನೆ.

2ನೇ ಪ್ರವೇಶ ದ್ವಾರದ ಟಿಕೆಟ್ ಕೌಂಟರ್



ಅಶೋಕಪುರಂ ರೈಲ್ವೆ ನಿಲ್ದಾಣದ 2ನೇ ಪ್ರವೇಶ ದ್ವಾರದ ಟಿಕೆಟ್ ಕೌಂಟರ್ ಅನ್ನು ವಿ.ಸೋಮಣ್ಣ ಉದ್ಘಾಟಿಸಿ, ಕಾರ್ಯಕ್ರಮದ ನಾಮಫಲಕ ಅನಾವರಣ ಮಾಡುತ್ತಿರುವುದನ್ನು ಕಾಣಬಹುದು. ಚಿತ್ರದಲ್ಲಿ ಸಂಸದ ಯದುವೀರ್, ಶಾಸಕ ಶ್ರೀವತ್ಸ, ನೈರುತ್ಯ ರೈಲ್ವೆ ಮೈಸೂರು ವಿಭಾಗದ ಡಿಆರ್‌ಎಂ ಶಿಲ್ಪಿ ಅಗರ್‌ವಾಲ್ ಇತರರಿದ್ದಾರೆ.

ಮೈಸೂರು ಸೇರಿದಂತೆ ರಾಜ್ಯಾದ್ಯಂತ ಗ್ರಾಮ ಆಡಳಿತ ಅಧಿಕಾರಿಗಳ ಅನಿರ್ದಿಷ್ಟಾವಧಿ ಮುಷ್ಕರ



ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಗ್ರಾಮ ಆಡಳಿತ ಅಧಿಕಾರಿಗಳು ಮೈಸೂರು ತಾಲೂಕು ಕಚೇರಿ ಮುಂದೆ ಅನಿರ್ದಿಷ್ಟಾವಧಿ ಮುಷ್ಕರ ನಡೆಸುತ್ತಿದ್ದಾರೆ.

ಮೈಸೂರು, ಫೆ.15(ಬಿಎಲ್‌ಯು)– ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಕಂದಾಯ ಇಲಾಖೆಯ ಗ್ರಾಮ ಆಡಳಿತ ಅಧಿಕಾರಿಗಳು ಕರ್ತವ್ಯಕ್ಕೆ ಗೈರಾಗಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸುತ್ತಿದ್ದು, ಪ್ರತಿಭಟನೆ ಆರನೇ ದಿನಕ್ಕೆ ಕಾಲಿಟ್ಟಿದೆ.

ಗ್ರಾಮ ಆಡಳಿತ ಅಧಿಕಾರಿಗಳು ಮೈಸೂರು ಸೇರಿದಂತೆ ರಾಜ್ಯಾದ್ಯಂತ ಮುಷ್ಕರ ನಡೆಸುತ್ತಿದ್ದು, ಹತ್ತು ಸಾವಿರ ಅಧಿಕಾರಿಗಳು ಇದರಲ್ಲಿ ಭಾಗಿಯಾಗಿದ್ದಾರೆ.

ಆದಾಯ ಮತ್ತು ಜಾತಿ ಪ್ರಮಾಣ ಪತ್ರ ನೀಡುವ ಗ್ರಾಮ ಆಡಳಿತ ಅಧಿಕಾರಿಗಳು ಕೆಲಸಕ್ಕೆ ಗೈರಾಗಿ ಮುಷ್ಕರ ನಡೆಸುತ್ತಿರುವುದರಿಂದ ಸಾರ್ವಜನಿಕರು ತಾಲೂಕು ಕಚೇರಿಗೆ ಪ್ರತಿದಿನ ಅಲೆದು ಅಲೆದು ಹೈರಾಣಾಗಿದ್ದಾರೆ. ಮೈಸೂರು ಜಿಲ್ಲೆಯಲ್ಲಿ 440 ಅಧಿಕಾರಿಗಳು ಪ್ರತಿಭಟನೆ ನಡೆಸುತ್ತಿದ್ದು, ಇವರು ಕಾರ್ಯನಿರ್ವಹಿಸುವ ತಾಲೂಕು ಕಚೇರಿ ಕೊಠಡಿಗಳು ಈಗ ಭಣಗುಟ್ಟುತ್ತಿವೆ.

ಸಾರ್ವಜನಿಕರಿಗೆ ನೇರವಾಗಿ ಸೇವೆ ನೀಡುವ ಗ್ರಾಮ ಆಡಳಿತ ಅಧಿಕಾರಿಗಳಿಗೆ ಪ್ರತ್ಯೇಕ ಕಚೇರಿ ಇಲ್ಲ, ಮಹಿಳಾ ಗ್ರಾಮ ಆಡಳಿತ ಅಧಿಕಾರಿಗಳಿಗೆ ಸುರಕ್ಷಿತ ಸೌಲಭ್ಯಗಳಿಲ್ಲ, ವರ್ಗಾವಣೆ ಮತ್ತು ಬಡ್ತಿ ಸೌಲಭ್ಯ ನೀಡುತ್ತಿಲ್ಲ, ಸಾರ್ವಜನಿಕರಿಗೆ ವಿವಿಧ ಸೇವೆ ನೀಡುವ ಗ್ರಾಮ ಆಡಳಿತ ಅಧಿಕಾರಿಗಳಿಗೆ ರಕ್ಷಣೆ ಇಲ್ಲ. ತಾವು ಎದುರಿಸುತ್ತಿರುವ ಸಮಸ್ಯೆಗಳನ್ನು ಸರ್ಕಾರಕ್ಕೆ ಮನವರಿಕೆ ಮಾಡಿರುವ ಅಧಿಕಾರಿಗಳು ಇದನ್ನು ಈಡೇರಿಸುವವರೆಗೆ ಪ್ರತಿಭಟನೆ ಕೈ ಬಿಡುವುದಿಲ್ಲ ಎಂದು ಎಚ್ಚರಿಸಿದ್ದಾರೆ. ಸಿಇಟಿಗಾಗಿ ಆದಾಯ ಹಾಗೂ ಜಾತಿ ಪ್ರಮಾಣ ಪತ್ರ ಅತ್ಯವಶ್ಯವಾಗಿದೆ. ಈ ಹಿನ್ನೆಲೆ ವಿದ್ಯಾರ್ಥಿಗಳಿಗೆ ಆದಾಯ ಮತ್ತು ಜಾತಿ ಪ್ರಮಾಣ ಪತ್ರ ಮಾತ್ರ ನೀಡುತ್ತಿರುವ ಅಧಿಕಾರಿಗಳು ಉಳಿದ ಕೆಲಸಗಳಿಂದ ದೂರ ಉಳಿದಿದ್ದಾರೆ.

ಮೈಸೂರಲ್ಲಿ ಪೊಲೀಸರಿಗೇ ರಕ್ಷಣೆ ನೀಡಬೇಕಾದ ಪರಿಸ್ಥಿತಿ ಬಂದಿದೆ

ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಆತಂಕ



ಮೈಸೂರು, ಫೆ.15 (ಆರ್‌ಕೆ)– ಮೈಸೂರು ನಗರದಲ್ಲಿ ಜನಸಾಮಾನ್ಯರಿಗೆ ರಕ್ಷಣೆ ನೀಡಬೇಕಾದ ಪೊಲೀಸರಿಗೇ ರಕ್ಷಣೆಯ ಅಗತ್ಯ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಇಂದಿಲ್ಲಿ ಅಚ್ಚರಿ, ಆತಂಕ ವ್ಯಕ್ತಪಡಿಸಿದ್ದಾರೆ.

ಯಾವುದೋ ಅವಹೇಳನಕಾರಿ ಪೋಸ್ಟ್ ಅನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟರು ಎಂಬ ಕಾರಣಕ್ಕಾಗಿ ಉದಯಗಿರಿ ಠಾಣೆ ಮುಂದೆ ಜಮಾಯಿಸಿದ ಸಾವಿರಾರು ಮಂದಿ, ಪೊಲೀಸ್ ಠಾಣೆ ಮೇಲೆ ಕಲ್ಲು ತೂರಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಗಾಯಗೊಳಿಸಿದ್ದಾರೆ. ಅಲ್ಲದೆ, ಕಾನೂನು ಸುವ್ಯವಸ್ಥೆ ವಿಭಾಗದ ಡಿಸಿಪಿ ಕಾರು ಸೇರಿದಂತೆ ಹಲವು ವಾಹನಗಳನ್ನು ಜಖಂಗೊಳಿಸಲಾಗಿದೆ. ಪೊಲೀಸರ ಮೇಲೆ ಹಲ್ಲೆ ಮಾಡಿದವರ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು. ನಾನು ಬಜೆಟ್ ಅಧಿವೇಶನದಲ್ಲಿ ಪಾಲ್ಗೊಂಡಿದ್ದರಿಂದ ಉದಯಗಿರಿಗೆ ಹೋಗಿರಲಿಲ್ಲ. ಇಷ್ಟರಲ್ಲೇ ಅಲ್ಲಿಗೆ ತೆರಳಿ ಪರಿಸ್ಥಿತಿ ಅವಲೋಕನ ಮಾಡುತ್ತೇನೆ ಎಂದ ಅವರು, ಇಂತಹ ಪರಿಸ್ಥಿತಿಯಲ್ಲಿ ಪೊಲೀಸರಿಗೇ ರಕ್ಷಣೆ ನೀಡಬೇಕಾದ ಪರಿಸ್ಥಿತಿ ಬಂದಿರುವುದು ವಿಪರ್ಯಾಸ ಎಂದು ವಿಷಾದಿಸಿದರು.

ಆರೋಪಿಗಳು ಯಾರೇ ಆಗಲಿ ತಪ್ಪು ಮಾಡಿದವರ ವಿರುದ್ಧ ಕ್ರಮವಹಿಸಿ, ಅವರಿಗೆ ಶಿಕ್ಷೆಯಾಗಬೇಕು. ಸಮಾಜದಲ್ಲಿ ಶಾಂತಿ ನೆಲೆಸುವಂತೆ ಮಾಡಬೇಕಾದ ಪೊಲೀಸರು ಆತಂಕಪಡುವ ಪರಿಸ್ಥಿತಿ ನಿರ್ಮಾಣವಾದರೆ ಸಾರ್ವಜನಿಕರಿಗೆ ರಕ್ಷಣೆ ನೀಡುವವರ್‍ಯಾರು? ಕ್ರಿಮಿನಲ್ ಚಟುವಟಿಕೆಯಲ್ಲಿ ಪಾಲ್ಗೊಳ್ಳುವವರು ಎಷ್ಟೇ ಪ್ರಭಾವಶಾಲಿಗಳಾಗಿದ್ದರೂ ಅವರ ವಿರುದ್ಧ ಕಾನೂನು ರೀತ್ಯಾ ಕ್ರಮ ಅತ್ಯಗತ್ಯ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಬಿಜೆಪಿಯಲ್ಲಿನ ಬಣಗಳ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಯದುವೀರ್, ಕಾಂಗ್ರೆಸ್ ಪಕ್ಷದಲ್ಲೂ ಈ ರೀತಿಯ ಬಣಗಳಿವೆ. ಕುರ್ಚಿಗಾಗಿ ಕಿತ್ತಾಟ ಎಲ್ಲಾ ಕಡೆಯೂ ಇದ್ದೇ ಇದೆ. ನಮ್ಮ ಪಕ್ಷದ ಒಳಗಡೆ ಗೊಂದಲವನ್ನು ನಾವು ಪರಿಹರಿಸಿಕೊಳ್ಳುತ್ತೇವೆ. ಈಗಾಗಲೇ ಬಿಜೆಪಿ ಕೇಂದ್ರ ಶಿಸ್ತು ಸಮಿತಿಯಿಂದ ಯತ್ನಾಳ್ ಅವರಿಗೆ ನೋಟಿಸ್ ನೀಡಿರುವ ವಿಚಾರಕ್ಕೆ ಸಂಬಂಧಿಸಿದಂತೆ ವರಿಷ್ಠರು ಸ್ಪಷ್ಟನೆ ನೀಡುತ್ತಾರೆ. ಈ ಬಗ್ಗೆ ಕೇಂದ್ರದ ನಾಯಕರು ತೀರ್ಮಾನ ಕೈಗೊಳ್ಳುತ್ತಾರೆ ಎಂದ ಯದುವೀರ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರೇ ರಾಜ್ಯಾಧ್ಯಕ್ಷರಾಗಿ ಮುಂದುವರಿಯಲಿ. ಜವಾಬ್ದಾರಿಯಿಂದ ಪಕ್ಷ ಮುನ್ನಡೆಸುತ್ತಿರುವ ಅವರ ನೇತೃತ್ವದಲ್ಲಿ ನಾವು ಮುಂದುವರೆಯುತ್ತೇವೆ ಎಂದರು.

ಮೈಸೂರನ್ನು ಸೈಬರ್ ಕ್ರೈಂ ಮುಕ್ತ ನಗರ ಮಾಡಬೇಕಿದೆ: ಯದುವೀರ್

ಮೈಸೂರು, ಫೆ.15 (ಆರ್‌ಕೆ)– ಮೈಸೂರನ್ನು ಸೈಬರ್ ಕ್ರೈಂ ಮುಕ್ತ ನಗರ ಮಾಡುವ ನಿಟ್ಟಿನಲ್ಲಿ ಎಲ್ಲರೂ ಕೈಜೋಡಿಸುವ ಅಗತ್ಯವಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ದಿ ರ್‍ಯಾಡಿಸನ್ ಬ್ಲ್ಯೂ ಪ್ಲಾಜಾ ಹೋಟೆಲ್‌ನಲ್ಲಿ ಸೈಬರ್‌ವರ್ಸ್ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನಮಗೂ ಸಹ ಸೈಬರ್ ವಂಚನೆ ಕರೆಗಳು ಬರುತ್ತವೆ. ಓಟಿಪಿ ಕೊಡಿ ಎಂದು ಕೇಳುತ್ತಾರೆ. ನಾನು ಅದನ್ನೆಲ್ಲಾ ಸ್ಕ್ಯಾಮ್ ಎಂದು ಬಿಟ್ಟು ಬಿಡುತ್ತೇನೆ. ಮನೆಯವರಿಗೂ ಸಹ ಸೈಬರ್ ವಂಚನೆ ಕರೆಗಳು ನಿರಂತರವಾಗಿ ಬರುತ್ತವೆ. ಅದರಿಂದ ತಪ್ಪಿಸಿಕೊಳ್ಳಲು ಕೆಲವೊಮ್ಮೆ ಸಾಧ್ಯವಾಗುವುದಿಲ್ಲ ಎಂದರು.

ನನ್ನ ಗೆಳೆಯರೂ ಸೈಬರ್ ಕ್ರೈಂ ಜಾಲದಲ್ಲಿ ಸಿಲುಕಿಕೊಂಡಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದಂತೆಲ್ಲಾ ಕ್ರಿಮಿನಲ್‌ಗಳು ಸೈಬರ್ ಸ್ವರೂಪದ ಅಪರಾಧವನ್ನು ಸುಲಭವಾಗಿ ಎಸಗುತ್ತಿದ್ದಾರೆ. ಸಣ್ಣ ಹಾಡಿಯಲ್ಲೂ ಕೂಡ ಮೊಬೈಲ್ ಫೋನ್ ಸಂಪರ್ಕ ಸಿಗುತ್ತಿದೆ. ತಂತ್ರಜ್ಞಾನವನ್ನು ಯಥೇಚ್ಛವಾಗಿ ಬಳಸುತ್ತಿರುವ ಇಂದಿನ ದಿನಗಳಲ್ಲಿ ಅಪರಾಧಗಳ ಸಂಖ್ಯೆಯೂ ಹೆಚ್ಚಾಗಿರುವುದು ಕಂಡುಬಂದಿದೆ. ಕರ್ನಾಟಕ ರಾಜ್ಯದಲ್ಲಿ ಸೈಬರ್ ಅಪರಾಧ ಹೆಚ್ಚಾಗುತ್ತಿರುವುದರಿಂದ ವ್ಯಾಪಕವಾಗಿ ಜನಜಾಗೃತಿ ಆರಂಭವಾಗಿದೆ. ಅದರ ಬೆನ್ನಲ್ಲೇ ಮೈಸೂರನ್ನು ಸೈಬರ್ ಕ್ರೈಂ ಮುಕ್ತ ಮಾಡುವ ನಿಟ್ಟಿನಲ್ಲಿ ಹೋರಾಟ ಮಾಡಬೇಕಿದೆ ಎಂದು ಸಲಹೆ ನೀಡಿದರು.

ನ್ಯಾಯಾಲಯದಲ್ಲಿ ನಾವು ಕೇಸ್ ಗೆದ್ದರೂ ಸರ್ಕಾರ ಟಿಡಿಆರ್ ಹಣ ನೀಡುತ್ತಿಲ್ಲ: ಯದುವೀರ್ ವಿಷಾದ

ಮೈಸೂರು, ಫೆ.15 (ಆರ್‌ಕೆ)– ನ್ಯಾಯಾಲಯದಲ್ಲಿ ನಾವು ಕೇಸ್ ಗೆದ್ದಿದ್ದರೂ ಕರ್ನಾಟಕ ರಾಜ್ಯ ಸರ್ಕಾರವು ನಮಗೆ ಟಿಡಿಆರ್ ಹಣ ನೀಡುತ್ತಿಲ್ಲ ಎಂದು ಸಂಸದ ಹಾಗೂ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಇಂದಿಲ್ಲಿ ಅಸಮಾಧಾನ ಹೊರಹಾಕಿದ್ದಾರೆ.

ಬೆಂಗಳೂರು ಅರಮನೆಗೆ ಟಿಡಿಆರ್ ನೀಡುವ ವಿಚಾರಕ್ಕೆ ಸಂಬಂಧಿಸಿದಂತೆ ನಾವು ರಾಜ್ಯ ಸರ್ಕಾರದ ವಿರುದ್ಧ ನ್ಯಾಯಾಲಯದ ಮೊರೆ ಹೋಗಿದ್ದೆವು. ಕೋರ್ಟ್ ಆದೇಶ ನೀಡಿದ್ದರೂ ಸರ್ಕಾರ ಈ ಮೊದಲಿನಿಂದಲೂ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದೆ. ನಮಗೆ ಟಿಡಿಆರ್ ಸರ್ಟಿಫಿಕೇಟ್ ನೀಡಲೇಬೇಕಿದೆ. ಆದರೆ, ಸರ್ಕಾರ ಇತ್ತ ಮನಸ್ಸು ಮಾಡುತ್ತಿಲ್ಲ. ಈ ವಿಷಯದಲ್ಲಿ ಜನಸಾಮಾನ್ಯರಿಂದ ಹಿಡಿದು ರಾಜ ಮಹಾರಾಜರಿಗೂ ಒಂದೇ ಮಾನದಂಡ. ಆದರೆ, ಸರ್ಕಾರ ಈ ನಿಟ್ಟಿನಲ್ಲಿ ನಿರ್ಲಕ್ಷ್ಯ ಧೋರಣೆ ತೋರುತ್ತಿದೆ. ಈ ಕುರಿತಂತೆ ಮುಂದಿನ ದಿನಗಳಲ್ಲಿ ಜನರೇ ಪ್ರಶ್ನೆ ಮಾಡುತ್ತಾರೆ. ರಾಜ್ಯ ಸರ್ಕಾರದ ನಿರ್ಧಾರದ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ ಎಂದರು.

ರಸ್ತೆ ಅಗಲೀಕರಣ ಮಾಡಬೇಕಾದರೆ ಟಿಡಿಆರ್ ಹಣ ನೀಡಿ ಎಂಬುವಷ್ಟೇ ನಮ್ಮ ಬೇಡಿಕೆ. ಆದರೆ ರಾಜ್ಯ ಸರ್ಕಾರ ನ್ಯಾಯಾಲಯದ ಆದೇಶವನ್ನು ಪಾಲಿಸುತ್ತಿಲ್ಲ. ಅಲ್ಲದೆ, ಮೈಸೂರಿನ ಕುರುಬಾರಹಳ್ಳಿ, ಗರಿಕೆಮಾಳ ವಿಚಾರದಲ್ಲೂ ಸರ್ಕಾರ ಸ್ಪಂದಿಸುತ್ತಿಲ್ಲ. ಈ ಮೊದಲಿನಿಂದಲೂ ಅರಮನೆಯನ್ನು ಟಾರ್ಗೆಟ್ ಮಾಡುತ್ತಿದ್ದಾರೆ. ನಾನು ಸಂಸದನಾದ ಮೇಲೆ ಈ ವಿಚಾರ ಹೆಚ್ಚು ಮುನ್ನೆಲೆಗೆ ಬರುತ್ತಿದೆ. ಮೂರು ದಶಕಗಳಿಂದ ನಮ್ಮ ತಂದೆ ಕಷ್ಟ ಅನುಭವಿಸಿದ್ದಾರೆ. ಇಡೀ ಅವರ ಜೀವನವನ್ನು ನ್ಯಾಯಾಲಯದ ವ್ಯಾಜ್ಯದಲ್ಲೇ ಕಳೆದರು. ಅವರ ಬದುಕು ನಿರಂತರ ಹೋರಾಟವಾಗಿತ್ತು. ತಂದೆಯವರು ಹೋರಾಟ ಮಾಡಿಯೇ ಕಾಲವಾದರು ಎಂದು ವಿಷಾದಿಸಿದರು.

ಲಿಂಗತ್ವ ಅಲ್ಪಸಂಖ್ಯಾತ ಅಕ್ರಂಪಾಷ ಪುತ್ರಿಗೆ ಕಿಕ್ ಬಾಕ್ಸಿಂಗ್‌ನಲ್ಲಿ ಎರಡು ಬೆಳ್ಳಿ ಪದಕ


ಮೈಸೂರು, ಫೆ.15(ಜಿಎ)–ಮೈಸೂರಿನ ರಾಜೀವ್‌ನಗರದ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಅಕ್ರಂ ಪಾಷಾ (ಶೋಭನಾ) ಅವರ ಸಾಕು ಮಗಳಾದ ಎಸ್.ಬೇಬಿ ಫಾತಿಮಾ ಅವರು ನವದೆಹಲಿಯಲ್ಲಿ ಈಚೆಗೆ ನಡೆದ 4ನೇ ಇಂಡಿಯನ್ ಓಪನ್ ಇಂಟರ್‌ನ್ಯಾಷನಲ್ ಕಿಕ್ ಬಾಕ್ಸಿಂಗ್‌ನಲ್ಲಿ 2 ಬೆಳ್ಳಿ ಪದಕಗಳನ್ನು ಪಡೆದಿದ್ದು, ಹೆಚ್ಚಿನ ಸಾಧನೆಗೆ ಆರ್ಥಿಕ ಸಹಾಯದ ನಿರೀಕ್ಷೆಯಲ್ಲಿದ್ದಾರೆ ಎಂದು ಸಮುದಾಯದ ಮುಖಂಡರಾದ ಪ್ರಣತಿ ಪ್ರಕಾಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಕ್ರಂ ಪಾಷಾ ಅವರು ಸಂಕಷ್ಟದ ನಡುವೆಯೂ ಫಾತಿಮಾ ಅವರ ಪೋಷಣೆ, ಸಾಧನೆಗೆ ಸಹಕಾರ ನೀಡುತ್ತಿದ್ದಾರೆ. ತರಬೇತಿ ಮತ್ತು ಇತರ ವೆಚ್ಚಕ್ಕಾಗಿ ಪ್ರತಿ ತಿಂಗಳು 10 ಸಾವಿರ ಖರ್ಚಾಗುತ್ತಿದ್ದು, ಸರ್ಕಾರ ಅಥವಾ ಇತರ ಸಂಘ ಸಂಸ್ಥೆಗಳು ಸಹಾಯ ನೀಡಿದರೆ ಅನುಕೂಲವಾಗುತ್ತದೆ ಎಂದರು.

ಅಕ್ರಂ ಪಾಷಾ ಮಾತನಾಡಿ, ಮಗಳು ಜೆಎಸ್‌ಎಸ್ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಕಟ್ಟಿದ್ದಾರೆ. ಕ್ರೀಡೆ ಬಗ್ಗೆ ವಿಶೇಷ ಆಸಕ್ತಿಯಿದ್ದು, ಒಲಿಂಪಿಕ್ ಸ್ಪರ್ಧೆಯಲ್ಲಿ ಭಾಗವಹಿಸುವ ಗುರಿ ಹೊಂದಿದ್ದು, ಮೈಸೂರು ವಿಶ್ವವಿದ್ಯಾಲಯದ ಜಸ್ವಂತ್ ಅವರ ಬಳಿ ತರಬೇತಿ ಪಡೆಯುತ್ತಿದ್ದಾಳೆ. ಸಹಾಯ ಮಾಡಲು ಇಚ್ಛಿಸುವವರು ಮೊ.ಸಂ. 97405 34739 ಸಂಪರ್ಕಿಸಬಹುದು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಎಸ್.ಬೇಬಿ ಫಾತಿಮಾ ಉಪಸ್ಥಿತರಿದ್ದರು.

ಫೆ.18ರಂದು ವಿಶೇಷ 'ಸ್ವಾತಿ' ಪೂಜೆ





ಮೈಸೂರು, ಫೆ.15– ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಇತಿಹಾಸ ಪ್ರಸಿದ್ಧ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಫೆ.18 ರಂದು ಮಂಗಳವಾರ 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಆಯೋಜಿಸಲಾಗಿದೆ. ಅಂದು ಬೆಳಿಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾ ಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗವನ್ನು ಏರ್ಪಡಿಸಲಾಗಿದೆ. ಸಂಜೆ 7.30ಕ್ಕೆ ಪ್ರಾಕಾರೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಮುಖ್ಯಸ್ಥ ವಿದ್ವಾನ್ ಕೆ.ಆರ್.ಯೋಗಾನರ ಸಿಂಹನ್ (ಮುರುಳಿ ಅಯ್ಯಂಗಾರ್) ತಿಳಿಸಿದ್ದಾರೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಕೋರಿದ್ದಾರೆ. ಮಾಹಿತಿಗೆ ಮೊಬೈಲ್ 9342188323, 7598832271 ಸಂಪರ್ಕಿಸಬಹುದು.

ಅಭಿನಂದನೆ...



ದೇಶದ ಐದು ವಿವಿಧ ಬ್ಯಾಂಕುಗಳ ಹುದ್ದೆಗಳಿಗೆ ಆಯ್ಕೆಯಾಗಿ ಎಸ್‌ಬಿಟಿಯಲ್ಲಿ ಕಾರ್ಯನಿರ್ವಹಿಸಿ ಪ್ರಸ್ತುತ ಕೆಎಎಸ್ ಹಿರಿಯ ಅಧಿಕಾರಿಯಾಗಿರುವ ಪುರಾತತ್ವ, ವಸ್ತು ಸಂಗ್ರಹಾಲಯ ಮತ್ತು ಪಾರಂಪರಿಕ ಇಲಾಖೆ ಆಯುಕ್ತ ಎ.ದೇವರಾಜು ಅವರನ್ನು ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಭಿನಂದಿಸಿದರು. ಈ ವೇಳೆ ವಿವಿ ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ, ಹಣಕಾಸು ಅಧಿಕಾರಿ ಪ್ರೊ.ನಿರಂಜನ್‌ರಾಜ್, ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ಉಪಸ್ಥಿತರಿದ್ದರು.

ಬಿರು ಬೇಸಿಗೆಯಲ್ಲಿ 'ನಾಗರಹೊಳೆ' ಸಂರಕ್ಷಣೆ

- 2600 ಕಿ.ಮೀ ಬೆಂಕಿ ರೇಖೆ ನಿರ್ಮಾಣ
- 400 ಮಂದಿ ತಾತ್ಕಾಲಿಕ ವಾಚರ್ ನೇಮಕ
- ವೀಕ್ಷಣಾ ಗೋಪುರದಿಂದಲೂ ಕಣ್ಗಾವಲು
- ಜಿಎಸ್‌ಎಂ ಕ್ಯಾಮರಾ, ಫೈರ್ ಅಲರ್ಟ್ ಸಿಸ್ಟಮ್



ಅಗ್ನಿಶಾಮಕ, ಅರಣ್ಯ ಇಲಾಖಾ ಸಿಬ್ಬಂದಿ ಬೆಂಕಿ ನಂದಿಸುವ ಪ್ರಾತ್ಯಕ್ಷಿಕೆಯಲ್ಲಿ ತೊಡಗಿರುವುದು.

ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ



"ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವನ್ಯಸಂಪತ್ತನ್ನು ಬೇಸಿಗೆಯಿಂದ ಸಂರಕ್ಷಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಈಗಾಗಲೇ 2600 ಕಿ.ಮಿ ಬೆಂಕಿರೇಖೆ ನಿರ್ಮಿಸಲಾಗಿದೆ. ಇಲಾಖೆ ಸಿಬ್ಬಂದಿಗಳೊಂದಿಗೆ ಹೆಚ್ಚುವರಿಯಾಗಿ ತಾತ್ಕಾಲಿಕವಾಗಿ 400ಕ್ಕೂ ಹೆಚ್ಚು ಫೈರ್ ವಾಚರ್‌ಗಳನ್ನು ನೇಮಿಸಲಾಗಿದೆ. ಅಗ್ನಿಶಾಮಕ ಸಿಬ್ಬಂದಿ ಸಹಕಾರ ಕೋರಲಾಗಿದೆ. ಗಸ್ತು ಹೆಚ್ಚಳ ಮಾಡಲಾಗಿದೆ. ಕಾಡಂಚಿನ ಗ್ರಾಮಗಳ ಜನರ ಸಹಕಾರ ಪಡೆಯಲಾಗಿದೆ. ಪ್ರತಿ ವಲಯದಲ್ಲೂ ಟ್ಯಾಂಕರ್ ಹಾಗೂ ಬೆಂಕಿ ನಂದಿಸುವ ಉಪಕರಣಗಳನ್ನು ನೀಡಲಾಗಿದೆ. ವಿವಿಧ ಕಾರ್ಯಕ್ರಮಗಳ ಮೂಲಕ ಕಾಡಂಚಿನ ಗ್ರಾಮಗಳ ಜನರಲ್ಲಿ ಜಾಗೃತಿ ಮೂಡಿಸಲಾಗಿದೆ. 8 ವಲಯಗಳ ಎಲ್ಲಾ ಸಿಬ್ಬಂದಿ ಅರಣ್ಯ ಸಂಪತ್ತಿನ ಸಂರಕ್ಷಣೆಗೆ ಪಣತೊಟ್ಟು ಕಾರ್ಯನಿರ್ವಹಿಸುತ್ತಿದ್ದಾರೆ. ನೀರಿನ ಮೂಲಗಳನ್ನು ಗುರುತಿಸಿಕೊಂಡು ಮುಂಜಾಗ್ರತ ಕಾರ್ಯಾಚರಣೆ ನಡೆಸಲಾಗುತ್ತಿದೆ. –ಸೀಮಾ, ನಿರ್ದೇಶಕಿ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ.

ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು,ಫೆ.15– ಹುಲಿ, ಆನೆ ಸೇರಿದಂತೆ ವಿವಿಧ ವನ್ಯಪ್ರಾಣಿಗಳು ಯಥೇಚ್ಛವಾಗಿ ಹೆಚ್ಚಿನ ಸಾಂದ್ರತೆಯಲ್ಲಿ ಕಂಡು ಬರುವ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ಬೇಸಿಗೆ ಎದುರಿಸಲು ಸಜ್ಜಾಗಿದ್ದು, ಕಾಡ್ಗಿಚ್ಚಿಗೆ ಕಡಿವಾಣ ಹಾಕಲು ಈ ಬಾರಿ 2600 ಕಿ.ಮೀ ಬೆಂಕಿ ತಡೆ ರೇಖೆ ನಿರ್ಮಿಸಿ, ಅರಣ್ಯ ಸಿಬ್ಬಂದಿಗಳೊಂದಿಗೆ 400ಕ್ಕೂ ಹೆಚ್ಚು ವಾಚರ್‌ಗಳು ಅರಣ್ಯ ಸಂಪತ್ತು ಕಾಯುವ ಕಾಯಕದಲ್ಲಿ ಮಗ್ನರಾಗಿದ್ದಾರೆ.

ಹಳೆ ಮೈಸೂರು ಪ್ರಾಂತ್ಯದ ಮೂರು ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅತ್ಯಂತ ಸುಂದರ ಹಾಗೂ ವೈವಿಧ್ಯಮಯ ಅರಣ್ಯ ಪ್ರದೇಶ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ. ಮೈಸೂರು–ಕೊಡಗು ಜಿಲ್ಲೆ ಮಾತ್ರವಲ್ಲದೆ, ಕೇರಳ ಗಡಿಗೂ ಹೊಂದಿಕೊಂಡಿರುವುದರಿಂದ ಬೇಸಿಗೆ ವೇಳೆ ಕಾಡು ಸಂರಕ್ಷಿಸಿಕೊಳ್ಳುವುದು ಸವಾಲಾಗಿ ಪರಿಣಮಿಸಿದೆ. ಕಳೆದ 5 ವರ್ಷಗಳಿಂದ ನಾಗರಹೊಳೆ ಅಭಯಾರಣ್ಯದಲ್ಲಿ ದೊಡ್ಡ ಪ್ರಮಾಣದ ಕಾಡ್ಗಿಚ್ಚು ಪ್ರಕರಣ ದಾಖಲಾಗಿಲ್ಲ. ಈ ಬಾರಿಯೂ ಶೂನ್ಯ ಬೆಂಕಿ ಪ್ರಕರಣದ ದಾಖಲೆ ಮಾಡಲು ಅರಣ್ಯ ಸಿಬ್ಬಂದಿ ತಂಡ ಹಗಲು ರಾತ್ರಿ ಶ್ರಮಿಸುತ್ತಿದ್ದಾರೆ.

ನಿತ್ಯಹರಿದ್ವರ್ಣ, ಕುರುಚಲು ಕಾಡು ಸೇರಿದಂತೆ ವಿವಿಧ ಬಗೆಯ ಕಾಡುಗಳನ್ನು ಮಡಿಲಲ್ಲಿಟ್ಟುಕೊಂಡಿರುವ ನಾಗರಹೊಳೆ ಅಭಯಾರಣ್ಯ 864 ಚದರ ಕಿ.ಮೀ ವಿಸ್ತೀರ್ಣವಿದ್ದು, 8 ವಲಯಗಳಾಗಿ ವಿಂಗಡಿಸಲಾಗಿದೆ. ಪ್ರತಿ ವಲಯದಲ್ಲೂ 40ಕ್ಕೂ ಹೆಚ್ಚು ಮಂದಿ ಅರಣ್ಯ ಸಿಬ್ಬಂದಿಗಳಿದ್ದು, ಬೇಸಿಗೆಗಾಗಿ ಕಾಡಂಚಿನ ಗ್ರಾಮ, ಹಾಡಿಗಳಿಂದ 400ಕ್ಕೂ ಹೆಚ್ಚು ಮಂದಿಯನ್ನು ತಾತ್ಕಾಲಿಕ ವಾಚರ್‌ಗಳನ್ನು ದಿನಗೂಲಿ ಆಧಾರದಲ್ಲಿ ನೇಮಿಸಿಕೊಳ್ಳಲಾಗಿದೆ. 8 ವಲಯಗಳಲ್ಲೂ ತಲಾ 40 ಮಂದಿ ತಾತ್ಕಾಲಿಕ ವಾಚರ್‌ಗಳು ಬೆಂಕಿ ತಡೆ ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳಲು ನಿಯೋಜಿಸಲಾಗಿದೆ.

2600 ಕಿ.ಮೀ ಬೆಂಕಿ ತಡೆ ರೇಖೆ: ಬೇಸಿಗೆ ವೇಳೆ ಅರಣ್ಯ ಸಂಪತ್ತು ಸಂರಕ್ಷಿಸಿಕೊಳ್ಳಲು ಬೆಂಕಿ ತಡೆ ರೇಖೆಗಳು ಪ್ರಮುಖ ಪಾತ್ರವಹಿಸುತ್ತವೆ. ಒಂದು ಕಡೆಯಿಂದ ಮತ್ತೊಂದು ಕಡೆ ಬೆಂಕಿ ಹರಡುವುದನ್ನು ತಡೆಗಟ್ಟಲು ಬೆಂಕಿ ತಡೆರೇಖೆ ಮಹತ್ವದ ಪಾತ್ರವಹಿಸುತ್ತದೆ. ಈ ಹಿನ್ನೆಲೆಯಲ್ಲಿ ವಿವಿಧ ವಲಯಗಳಲ್ಲಿ ಆಯ್ದ ಸ್ಥಳಗಳಲ್ಲಿ ಬೆಂಕಿರೇಖೆ ನಿರ್ಮಿಸಲಾಗುತ್ತದೆ.



ಅರಣ್ಯದಲ್ಲಿ ಬೆಂಕಿ ತಡೆ ರೇಖೆ ನಿರ್ಮಿಸುತ್ತಿರುವುದು.

ಹೀಗೆ, ನಾಗರಹೊಳೆಯ ಹುಣಸೂರು ವಲಯದಲ್ಲಿ 300 ಕಿ.ಮಿ, ವೀರನಹೊಸಳ್ಳಿ ವಲಯದಲ್ಲಿ 222 ಕಿ.ಮಿ, ಆನೆಚೌಕೂರು ವಲಯದಲ್ಲಿ 462 ಕಿ.ಮಿ, ಡಿ.ಬಿ.ಕುಪ್ಪೆ ವಲಯದಲ್ಲಿ 467 ಕಿ.ಮಿ, ಅಂತರಸಂತೆ ವಲಯದಲ್ಲಿ 238 ಕಿ.ಮಿ, ಮೇಟಿಕುಪ್ಪೆ ವಲಯದಲ್ಲಿ 234 ಕಿ.ಮಿ, ಕಲ್ಲಳ್ಳ ವಲಯದಲ್ಲಿ 282 ಕಿ.ಮಿ ಹಾಗೂ ನಾಗರಹೊಳೆ ವಲಯದಲ್ಲಿ 360 ಕಿ.ಮಿ ದೂರದ ಬೆಂಕಿತಡೆ ರೇಖೆ ನಿರ್ಮಿಸಲಾಗಿದೆ. ಅಲ್ಲದೆ, ನಾಗರಹೊಳೆ ಕಾಡಿನ ನಡುವೆ ಹಾದು ಹೋಗಿರುವ ಮುಖ್ಯ ರಸ್ತೆಗಳಾದ ಹುಣಸೂರು–ಕುಟ್ಟಾ ರಸ್ತೆ ಹೆಚ್.ಡಿ.ಕೋಟೆ–ಬಾವಲಿ ರಸ್ತೆ ಆನೆಚೌಕರು–ತಿತಿಮತಿ ರಸ್ತೆ ಸೇರಿದಂತೆ ವಿವಿಧ ಮುಖ್ಯ ರಸ್ತೆ ಬದಿಯಲ್ಲೂ ಕಳೆಗಿಡ, ಒಣಹುಲ್ಲು, ಒಣ ಎಲೆಗಳಿಗೆ ಬೆಂಕಿ ಹಾಕಿ ವಾಹನ ಸವಾರರು ಬೀಡಿ, ಸಿಗರೇಟ್ ಎಸೆದು ಹೋಗುವುದರಿಂದ ಆಗುವ ಸಂಭವನೀಯ ಕಾಡ್ಗಿಚ್ಚು ಪ್ರಕರಣ ತಡೆಗೆ ಅರಣ್ಯ ಸಿಬ್ಬಂದಿ ಶ್ರಮಿಸುತ್ತಿದ್ದಾರೆ.

ವಾಚ್ ಟವರ್‌ಗಳ ಮೇಲಿಂದ ವೀಕ್ಷಣೆ: ನಾಗರಹೊಳೆಯ 8 ವಲಯಗಳಲ್ಲೂ ಸುಮಾರು 80ಕ್ಕೂ ವಾಚ್ ಟವರ್‌ಗಳಿದ್ದು, ಅವುಗಳ ಮೇಲೆ ಸುಡು ಬಿಸಿಲನ್ನು ಲೆಕ್ಕಿಸದೆ ಸಿಬ್ಬಂದಿ ಅರಣ್ಯ ಕಾಯುತ್ತಿದ್ದಾರೆ. ಪ್ರತಿಯೊಂದು ವಲಯದಲ್ಲೂ ಎತ್ತರದ ಪ್ರದೇಶದಲ್ಲಿ ವಾಚ್ ಟವರ್ ನಿರ್ಮಿಸಲಾಗಿದ್ದು, ಸಿಬ್ಬಂದಿಗಳಿಗೆ ಬೈನಾಕ್ಯುಲರ್ ನೀಡಿ ವೀಕ್ಷಿಸಲು ನಿಯೋಜಿಸಲಾಗಿದೆ.

ಟ್ಯಾಂಕರ್ ವ್ಯವಸ್ಥೆ: ಅರಣ್ಯ ಪ್ರದೇಶದಲ್ಲಿರುವ ಪ್ರತಿಯೊಂದು ವಲಯಕ್ಕೂ ತಲಾ ಒಂದೊಂದು ಟ್ಯಾಂಕರ್ ನೀಡಲಾಗಿದೆ. 10ಕ್ಕೂ ಹೆಚ್ಚು ನೀರು ಚಿಮುಕಿಸುವ (ಸ್ಪ್ರೇಯರ್) ಯಂತ್ರ ನೀಡಲಾಗಿದೆ. ವಾಚರ್‌ಗಳನ್ನು ಕರೆದೊಯ್ಯಲು ಪಿಕ್‌ಅಪ್ ವಾಹನ ನೀಡಲಾಗಿದೆ.

ವಿವಿಧ ಕ್ರಮ: ನಾಗರಹೊಳೆ ಅರಣ್ಯ ವ್ಯಾಪ್ತಿಯಲ್ಲಿ 180ಕ್ಕೂ ಹೆಚ್ಚು ಗಡಿ ಗ್ರಾಮಗಳಿವೆ. ಗ್ರಾಮಗಳಿರುವ ಗಡಿಯಲ್ಲಿ 500 ಮೀಟರ್‌ಗೆ ಓರ್ವ ಸಿಬ್ಬಂದಿ ಗಸ್ತು ತಿರುಗಲು ವ್ಯವಸ್ಥೆ ಮಾಡಲಾಗಿದೆ. ಕಾಡಂಚಿನ ಗ್ರಾಮಗಳಲ್ಲಿ ಬೀದಿ ನಾಟಕದ ಮೂಲಕ ಕಾಡಿನ ಸಂಪತ್ತಿನ ಸಂರಕ್ಷಣೆ ಕುರಿತಂತೆ ಜಾಗೃತಿ ಮೂಡಿಸಲಾಗುತ್ತಿದೆ. ಫೈರ್ ಅಲರ್ಟ್ ಸಿಸ್ಟಮ್ ಅಳವಡಿಸಿಕೊಳ್ಳಲಾಗಿದ್ದು, ಯಾವುದಾದರೂ ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಂಡರೆ ತಕ್ಷಣವೇ ಉಪಗ್ರಹದಿಂದ ಅಲರ್ಟ್ ಮೆಸೇಜ್(ಎಚ್ಚರಿಕೆ ಸಂದೇಶ) ಬರುವ ವ್ಯವಸ್ಥೆ ಮುಂದುವರೆಸಲಾಗಿದೆ. ಈಗಾಗಲೇ ಕಾಡ್ಗಿಚ್ಚು ನಂದಿಸುವ ಕಾರ್ಯಾಚರಣೆ ಹೇಗೆ ನಡೆಸಬೇಕೆಂದು ವಾಚರ್, ಅಗ್ನಿಶಾಮಕ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಾಗಾರ ನಡೆಸಲಾಗಿದ್ದು, ಕಾರ್ಯಾಚರಣೆಗೆ ಸಜ್ಜುಗೊಳಿಸಲಾಗಿದೆ. ಅಲ್ಲದೆ, ಅಗ್ನಿಶಾಮಕ ಸಿಬ್ಬಂದಿಗಳ ಸಹಕಾರ ಕೋರಲಾಗಿದೆ. ಕಳೆದ ವರ್ಷದಂತೆ ಈ ಬಾರಿಯೂ ವಾಯುಸೇನೆಯೊಂದಿಗೆ ಒಪ್ಪಂದ ಮುಂದುವರೆಸಲಾಗಿದ್ದು, ಅಗತ್ಯ ಬಿದ್ದರೆ ಸಹಕಾರ ಕೋರಲಾಗಿದೆ. ಕಾಡಂಚಿನ ಗ್ರಾಮಗಳ ಗಡಿಯಲ್ಲಿ ಇ–ಸರ್ವೆಲನ್ಸ್ ಸಿಸಿ ಕ್ಯಾಮರಾ, ಜಿಎಸ್‌ಎಂ ಬೇಸ್ಡ್ ಕ್ಯಾಮರಾ ಅಳವಡಿಸಲಾಗಿದೆ.

ಅಭಿನಂದನೆ...



ಕರ್ನಾಟಕ ರಾಜ್ಯ ಲಿಕ್ಕರ್ ಮರ್ಚೆಂಟ್ ಡೆವಲಪ್‌ಮೆಂಟ್ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ಎಸ್.ಚಂದ್ರಶೇಖರ್, ರಾಜ್ಯ ಸಹಕಾರ ಸಂಘಗಳ ಪತ್ತಿನ ಮಹಾಮಂಡಲ ನಿಗಮದ ಅಧ್ಯಕ್ಷರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಸೊಸೈಟಿಯ ನಿರ್ದೇಶಕ ರಾಜಶೇಖರ ಕದಂಬ ಅಭಿನಂದಿಸಿದರು. ಈ ವೇಳೆ ಶಾಸಕ ಹರೀಶ್‌ಗೌಡ ಇದ್ದಾರೆ.

ಕೇಜ್ರಿವಾಲ್ ಬಂಗಲೆ 'ಶೀಶ್ ಮಹಲ್' ನವೀಕರಣದ ತನಿಖೆಗೆ ಕೇಂದ್ರ ಆದೇಶ



ನವದೆಹಲಿ: ದೆಹಲಿ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ಬಂಗಲೆ 'ಶೀಶ್ ಮಹಲ್' ನವೀಕರಣ ಮತ್ತು ಐಷಾರಾಮಿ ಸೌಲಭ್ಯಗಳ ವೆಚ್ಚದ ಬಗ್ಗೆ ಕೇಂದ್ರ ಜಾಗೃತ ಆಯೋಗ(ಸಿವಿಸಿ) ವಿವರವಾದ ತನಿಖೆಗೆ ಆದೇಶಿಸಿದೆ.

40,000 ಚದರ ಗಜಗಳಷ್ಟು (8 ಎಕರೆ) ವಿಸ್ತೀರ್ಣದ ಐಷಾರಾಮಿ ಮಹಲು (ಶೀಶ್ ಮಹಲ್) ನಿರ್ಮಿಸಲು ಕಟ್ಟಡ ನಿಯಮಗಳನ್ನು ಉಲ್ಲಂಘಿಸಿದ್ದಾರೆ ಎಂಬ ಆರೋಪದ ಮೇಲೆ ವಿವರವಾದ ತನಿಖೆ ನಡೆಸುವಂತೆ ಸಿವಿಸಿ ಕೇಂದ್ರ ಲೋಕೋಪಯೋಗಿ ಇಲಾಖೆ (ಸಿಪಿಡಬ್ಲ್ಯೂಡಿ)ಗೆ ಸೂಚಿಸಿದೆ.

ಬಿಜೆಪಿ ನಾಯಕ ವಿಜೇಂದರ್ ಗುಪ್ತಾ ಅವರ ದೂರಿನ ಮೇರೆಗೆ ಸಿಪಿಡಬ್ಲ್ಯೂಡಿ ಅರವಿಂದ್ ಕೇಜ್ರಿವಾಲ್ ಅವರ ಅಧಿಕೃತ ಸಿಎಂ ನಿವಾಸದ ಬಗ್ಗೆ ವಾಸ್ತವಿಕ ವರದಿಯನ್ನು ಸಲ್ಲಿಸಿದ ನಂತರ ಸಿವಿಸಿ ತನಿಖೆಗೆ ಆದೇಶಿಸಿದೆ. ಅ.14, 2024 ರಂದು, 6 ಫ್ಲ್ಯಾಗ್ ಸ್ಟಾಫ್ ರಸ್ತೆಯಲ್ಲಿರುವ ಕೇಜ್ರಿವಾಲ್ ಅವರ ಹಿಂದಿನ ನಿವಾಸದಲ್ಲಿ ಅಕ್ರಮ ನಿರ್ಮಾಣದ ಬಗ್ಗೆ ಗುಪ್ತಾ ಕೇಂದ್ರ ಜಾಗೃತ ಆಯೋಗ(ಸಿವಿಸಿ)ಕ್ಕೆ ದೂರು ನೀಡಿದ್ದರು.

ದೇಶ - ವಿದೇಶ

ಒಂಟಿ ಪುರುಷರಿಗೆ ಪ್ರವೇಶ ನಿಷೇಧಿಸಿದ ಮೃಗಾಲಯ



ಜಪಾನ್: ಖಾಸಗಿ ಸಂಸ್ಥೆಯೊಂದರಿಂದ ಸರ್ಕಾರಿ ಸಹಭಾಗಿತ್ವದಲ್ಲಿ ನಿರ್ಮಾಣ ಮಾಡಿಕೊಂಡಿರುವ ಮೃಗಾಲಯಕ್ಕೆ ಒಂಟಿಯಾಗಿ ಭೇಟಿ ನೀಡುವ ಪುರುಷರಿಗೆ ಪ್ರವೇಶ ನಿಷೇಧಿಸಿದೆ.

ಪೂರ್ವ ಜಪಾನ್‌ನ ಟೋಚಿಗಿ ಪ್ರಿಫೆಕ್ಚರ್‌ನಲ್ಲಿರುವ ಹೀಲಿಂಗ್ ಪೆವಿಲಿಯನ್ ಎಂಬ ಮೃಗಾಲಯವು ಪುರುಷರಿಗೆ ಈ ನಿಷೇಧವನ್ನು ವಿಧಿಸಿದೆ. ಪ್ರಾಣಿಗಳೊಂದಿಗೆ ಸಂವಹನ ನಡೆಸಲು, ಅವುಗಳಿಗೆ ಆಹಾರ ನೀಡಲು ಮತ್ತು ಅವುಗಳೊಂದಿಗೆ ಸಮಯ ಕಳೆಯಲು ಸಂದರ್ಶಕರಿಗೆ ಅವಕಾಶ ನೀಡುವ ಟೋಚಿಗಿಯಲ್ಲಿರುವ ಒಂದು ಪ್ರಸಿದ್ಧ ಮೃಗಾಲಯವಾಗಿದೆ ಹೀಲಿಂಗ್ ಪೆವಿಲಿಯನ್. ಆದರೆ, ಇಲ್ಲಿಗೆ ಒಂಟಿಯಾಗಿ ಬರುವ ಪುರುಷ ಸಂದರ್ಶಕರಿಂದ ಮೃಗಾಲಯದ ಸಿಬ್ಬಂದಿಗೆ ಕೆಟ್ಟ ಅನುಭವಗಳನ್ನು ಎದುರಿಸಬೇಕಾಗಿ ಬಂದಿದ್ದರಿಂದ ಮೃಗಾಲಯವು ಈ ಕಠಿಣ ನಿರ್ಧಾರವನ್ನು ತೆಗೆದುಕೊಂಡಿದೆ. ಪ್ರಾಣಿಗಳೊಂದಿಗೆ ಸಂವಹನ ನಡೆಸುವ ಮೂಲಕ ಜನರ ಮಾನಸಿಕ ಆರೋಗ್ಯವನ್ನು ಹೆಚ್ಚಿಸುವುದು ಈ ಮೃಗಾಲಯದ ಉದ್ದೇಶ. ಆದ್ದರಿಂದ, ಇಲ್ಲಿಗೆ ಬರುವ ಸಂದರ್ಶಕರು ತಮ್ಮ ಸಾಕುಪ್ರಾಣಿಗಳನ್ನು ಸಹ ಕರೆತರಬಹುದು. ಅವುಗಳೊಂದಿಗೆ ಸಮಯ ಕಳೆಯಲು ಪ್ರತ್ಯೇಕವಾಗಿ ತಯಾರಿಸಲಾದ ಒಂದು ಉದ್ಯಾನವನವೂ ಈ ಮೃಗಾಲಯದಲ್ಲಿದೆ.

ನ್ಯೂ ಇಂಡಿಯಾ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿ 122 ಕೋಟಿ ದುರುಪಯೋಗ



ಮುಂಬೈ: ರೂ.122 ಕೋಟಿ ಹಣ ದುರುಪಯೋಗ ಆರೋಪಕ್ಕೆ ಸಂಬಂಧಿಸಿದಂತೆ ನ್ಯೂ ಇಂಡಿಯಾ ಬ್ಯಾಂಕ್ ಜನರಲ್ ಮ್ಯಾನೇಜರ್ ಮತ್ತು ಮುಖ್ಯ ಅಕೌಂಟೆಂಟ್ ಹಾಗೂ ಆತನ ಸಹಚರನ ವಿರುದ್ಧ ಪೊಲೀಸರು ಕೇಸ್ ದಾಖಲಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನ್ಯೂ ಇಂಡಿಯಾ ಕೋ ಆಪರೇಟಿವ್ ಬ್ಯಾಂಕ್ ಹೊಸ ವ್ಯವಹಾರ ನಡೆಸುವುದು, ಹಣ ಹಿಂಪಡೆಯುವುದನ್ನು ಆರ್‌ಬಿಐ ಶುಕ್ರವಾರ ನಿರ್ಬಂಧಿಸಿತ್ತು. ಇದಾದ ಬೆನ್ನಲ್ಲೆ ಈ ವಂಚನೆ ಆರೋಪ ಕೇಳಿಬಂದಿದೆ. ಈ ಸಂಬಂಧ ಬ್ಯಾಂಕ್‌ನ ಕಾರ್ಯನಿರ್ವಾಹಕ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ದೇವರ್ಷಿ ಘೋಷ್ ಶುಕ್ರವಾರ ಮಧ್ಯ ಮುಂಬೈನ ದಾದರ್ ಪೊಲೀಸ್ ಠಾಣೆಗೆ ಬಂದು ಹಣ ದುರುಪಯೋಗದ ಬಗ್ಗೆ ದೂರು ದಾಖಲಿಸಿದ್ದಾರೆ. ಆ ದೂರಿನ ಪ್ರಕಾರ ಬ್ಯಾಂಕಿನ ಜನರಲ್ ಮ್ಯಾನೇಜರ್ ಮತ್ತು ಮುಖ್ಯ ಅಕೌಂಟೆಂಟ್ ಹಿತೇಶ್ ಮೆಹ್ತಾ ತನ್ನ ಸಹಚರರೊಂದಿಗೆ ಸೇರಿ ಸಂಚು ರೂಪಿಸಿ ಪ್ರಭಾದೇವಿ ಮತ್ತು ಗೊರೆಗಾಂವ್ ಬ್ಯಾಂಕಿನ ಕಚೇರಿಗಳ ತಿಜೋರಿಯಲ್ಲಿಟ್ಟಿದ್ದ ಹಣದಿಂದ ರೂ.122 ಕೋಟಿ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ತಂದೆ ಮುಂದೆ ಪುತ್ರನ ನುಂಗಿದ ತಿಮಿಂಗಲ; ಪವಾಡಸದೃಶ ಪಾರು



ಸ್ಯಾಂಟಿಯಾಗೋ: ಚಿಲಿ ದೇಶದ ಬಹಿಯಾ ಎಲ್ ಅಗುಯಿಲಾ ಎಂಬ ಪ್ರದೇಶದಲ್ಲಿ 24 ವರ್ಷದ ವ್ಯಕ್ತಿಯೊಬ್ಬ ತನ್ನ ತಂದೆಯೊಂದಿಗೆ ದೋಣಿ ವಿಹಾರ ಮಾಡುತ್ತಿದ್ದಾಗ, ಬೃಹತ್ ಹಂಪ್‌ಬ್ಯಾಕ್ ತಿಮಿಂಗಿಲವೊಂದು ಹಳದಿ ಬಣ್ಣದ ದೋಣಿ ಸಮೇತ ಆತನನ್ನು ನುಂಗಿದೆ. ಚಿಲಿಯ ದಕ್ಷಿಣದ ಪ್ಯಾಟಗೋನಿಯಾ ಪ್ರದೇಶದ ಮೆಗೆಲ್ಲನ್ ಜಲಸಂಧಿಯಲ್ಲಿರುವ ಸ್ಯಾನ್ ಇಸಿಡ್ರೊ ಲೈಟ್‌ಹೌಸ್ ಬಳಿ ಶನಿವಾರ ಈ ಘಟನೆ ನಡೆದಿದೆ. ತಂದೆ ಮತ್ತು ಪುತ್ರ ಇಬ್ಬರೂ ಪ್ರತ್ಯೇಕ ದೋಣಿಗಳ ಮೂಲಕ ಸಾಗುತ್ತಿದ್ದರು. ಈ ವೇಳೆ ತಂದೆ ಪುತ್ರನ ದೋಣಿ ವಿಹಾರ ಚಿತ್ರೀಕರಿಸುತ್ತಿದ್ದ. ಇದೇ ಸಂದರ್ಭದಲ್ಲಿ ಬೃಹತ್ ತಿಮಿಂಗಲ 24 ವರ್ಷದ ಪುತ್ರನನ್ನು ನುಂಗಿದೆ. ತಿಮಿಂಗಲ ಬಾಯಿತೆರೆಯುವ ವೇಳೆ ಭಾರಿ ಪ್ರಮಾಣದ ನೀರು ಮೇಲೆ ಬಂದಿತು. ಇದನ್ನು ತಂದೆ ಅಲೆಗಳಿರಬಹುದು ಎಂದು ತಪ್ಪಾಗಿ ಭಾವಿಸಿದ್ದರು. ಪುತ್ರ ಸತ್ತೇ ಹೋದ ಎನ್ನುವಾಗಲೇ ತಿಮಿಂಗಲ ಆತನನ್ನು ಬೋಟ್ ಸಹಿತ ಉಗುಳಿದೆ. ಬೋಟ್ ಸಹಿತ ದೂರಕ್ಕೆ ಹಾರಿ ಬಿದ್ದ ಪುತ್ರನ ಕಂಡು ತಂದೆ ಕೂಡಲೇ ಆತನ ನೆರವಿಗೆ ಧಾವಿಸಿ, ಆತನನ್ನು ರಕ್ಷಿಸಿದ್ದಾರೆ.

ಆರ್ಕೆಸ್ಟ್ರಾದಲ್ಲಿ ಡ್ಯಾನ್ಸ್ ಮಾಡುತ್ತಿದ್ದ ಯುವತಿಯ ವೇದಿಕೆಯಲ್ಲೇ ಮದುವೆಯಾದ!



ಪಾಟ್ನಾ: ಬಿಹಾರದಲ್ಲಿ ನಡೆದ ನೃತ್ಯ ಕಾರ್ಯಕ್ರಮವೊಂದರಲ್ಲಿ ಯುವಕನೊಬ್ಬ ವೇದಿಕೆ ಮೇಲೆ ಬಂದು ಆರ್ಕೆಸ್ಟ್ರಾ ನೃತ್ಯಗಾರ್ತಿಯೊಬ್ಬರ ಹಣೆಗೆ 'ಸಿಂಧೂರ' ಇಟ್ಟು ವಿವಾಹವಾಗಿರುವ ವಿಡಿಯೋ ವೈರಲ್ ಆಗುತ್ತಿದೆ. ಬಿಹಾರದ ಛಾಪ್ರಾದಲ್ಲಿ ಮದುವೆ ಕಾರ್ಯಕ್ರಮದಲ್ಲಿ ಆಯೋಜಿಸಲಾಗಿದ್ದ ಆರ್ಕೆಸ್ಟ್ರಾದಲ್ಲಿ ಯುವತಿ ಡ್ಯಾನ್ಸರ್ ಆಗಿ ಆಗಮಿಸಿದ್ದಳು. ಸಿನಿಮಾವೊಂದರ ಗೀತೆಗೆ ನೃತ್ಯ ಮಾಡುತ್ತಿದ್ದಾಗಲೇ ಅಲ್ಲಿದ್ದ ಯುವಕನೋರ್ವ ಆಕೆಯ ಡ್ಯಾನ್ಸ್ ನೋಡಿ ಇಷ್ಟಪಟ್ಟಿದ್ದಾನೆ. ಬಳಿಕ ಆಕೆಯೊಂದಿಗೆ ತಾನೂ ಕೂಡ ವೇದಿಕೆ ಮೇಲೆ ಹೆಜ್ಜೆ ಹಾಕಿದ್ದು, ಆಕೆ ಕೂಡ ಆತನೊಂದಿಗೆ ನಗುತ್ತಲೇ ನೃತ್ಯ ಮಾಡಿದ್ದಾಳೆ. ಈ ವೇಳೆ ಯುವಕ ನೋಡ ನೋಡುತ್ತಲೇ ಬಿಳಿ ಬಣ್ಣದ ಟವಲ್ ಅನ್ನು ಆಕೆಯ ಮೇಲೆ ಹೊದಿಸಿ ಆಕೆಯನ್ನು ಬಿಗಿದಪ್ಪಿ ಆಕೆಯ ಹಣೆಗೆ ಸಿಂಧೂರ ಇಟ್ಟಿದ್ದಾನೆ. ಯುವತಿ ಇದಕ್ಕೆ ವಿರೋಧ ವ್ಯಕ್ತಪಡಿಸದೇ ವಿವಾಹಕ್ಕೆ ಒಪ್ಪಿಗೆ ನೀಡಿ ಆತ ಹಾಸಿದ್ದ ಟವೆಲ್ ಅನ್ನೇ ತನ್ನ ತಲೆ ಮೇಲೆ ಹಾಕಿಕೊಂಡು ವಿವಾಹ ಒಪ್ಪಿಕೊಂಡಿದ್ದಾಳೆ. ಈ ವಿಡಿಯೋ ಇದೀಗ ಬಿಹಾರದಲ್ಲಿ ವ್ಯಾಪಕ ವೈರಲ್ ಆಗುತ್ತಿದೆ.

ಮಗು ಬೇಡದಿದ್ದರೂ ಸಂಭೋಗದ ವೇಳೆ ಸ್ಖಲನ ಮಾಡುವ ಗಂಡಸರಿಗೆ ಭಾರಿ ದಂಡ!

ನ್ಯೂಯಾರ್ಕ್: ಮಗು ಬೇಡದಿದ್ದರೂ ಸಂಭೋಗದ ವೇಳೆ ಸ್ಖಲನ ಮಾಡುವ ಗಂಡಸರಿಗೆ ಲಕ್ಷ ಲಕ್ಷ ದಂಡ ಹೇರಲು ಅಮೆರಿಕಾ ಸರ್ಕಾರ ಮುಂದಾಗಿದೆ. ಅಮೆರಿಕದಲ್ಲಿ ಹೊಸದಾಗಿ ಪ್ರಸ್ತಾಪಿಸಲಾದ ಓಹಿಯೋ ಮಸೂದೆಯಡಿಯಲ್ಲಿ ಪುರುಷರು ಮಗುವನ್ನು ಪಡೆಯುವ ಉದ್ದೇಶವಿಲ್ಲದಿದ್ದರೂ ತಮ್ಮ ಸಂಗಾತಿ ಜೊತೆ ಲೈಂಗಿಕ ಕ್ರಿಯೆ ನಡೆಸುವಾಗ ಸ್ಖಲನ ಮಾಡಿದರೆ ಅವರಿಗೆ 1 ಸಾವಿರ ಡಾಲರ್‌ನಿಂದ 10,000 ಡಾಲರ್‌ವರೆಗೆ ದಂಡ ಹೇರಲಾಗುತ್ತದೆ ಎಂದು ಹೇಳಲಾಗಿದೆ.

ಈ ಪ್ರಸ್ತಾವಿತ ಮಸೂದೆಯ ಪ್ರಕಾರ ಮಗುವಿಗಾಗಿ ಗರ್ಭ ಧರಿಸುವ ಉದ್ದೇಶವಿಲ್ಲದೆ ಸಂಭೋಗದ ವೇಳೆ ಸ್ಖಲನ ಮಾಡಿದರೆ ಪುರುಷರಿಗೆ ದಂಡ ಹೇರಲಾಗುತ್ತದೆಯಂತೆ. ಮೊದಲ ಬಾರಿ ಈ ತಪ್ಪು ಮಾಡುವ ಪುರುಷರಿಗೆ 1,000 ಡಾಲರ್ (87 ಸಾವಿರ ರೂ.), ಎರಡನೇ ಬಾರಿಗೆ 5,000 ಡಾಲರ್ ಮತ್ತು ನಂತರದ ಅಪರಾಧಕ್ಕಾಗಿ 10,000 ಡಾಲರ್ (8.66 ಲಕ್ಷ ರೂ.) ದಂಡ ತೆರಬೇಕಾಗುತ್ತದೆ ಎಂದು ಹೇಳಲಾಗಿದೆ.

ಗರ್ಭಪಾತದಿಂದ ಮಹಿಳೆಯ ಶರೀರ ಮತ್ತು ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಮಹಿಳೆ ಸ್ವಂತವಾಗಿ ಗರ್ಭಿಣಿಯಾಗುವುದಿಲ್ಲ. ಅದಕ್ಕೆ ಕಾರಣಕರ್ತನಾಗುವ ಪುರುಷನೂ ಆಕೆ ಗರ್ಭ ಧರಿಸದಿರುವ ಬಗ್ಗೆ ಎಚ್ಚರ ವಹಿಸಬೇಕು ಎಂಬ ಕಾರಣಕ್ಕೆ ಈ ದಂಡ ವಿಧಿಸಲಾಗುವುದು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೈಸೂರು ಮಿತ್ರ ಭಾನುವಾರ 16 ಫೆಬ್ರವರಿ 2025

ಕೊಡವರಿಗೂ ಬೌದ್ಧ ಭಿಕ್ಷುಗಳಂತೆ ಸಂಸತ್ತು, ರಾಜ್ಯ ವಿಧಾನಸಭೆಯಲ್ಲಿ ವಿಶೇಷ ಪ್ರಾತಿನಿಧ್ಯಕ್ಕೆ ಮನವಿ

ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಬಳಿ ಸಿಎನ್‌ಸಿ ಶಾಂತಿಯುತ ಪ್ರತಿಭಟನೆ



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಶಾಂತಿಯುತ ಸತ್ಯಾಗ್ರಹ ನಡೆಸಿದ ಸಿಎನ್‌ಸಿ ಪದಾಧಿಕಾರಿಗಳು.

ಮಡಿಕೇರಿ,ಫೆ.15– ಸಿಕ್ಕಿಂನ ಬೌದ್ಧ ಭಿಕ್ಷುಗಳಿಗೆ 'ಸಂಘ' ಮತ ಕ್ಷೇತ್ರದ ರೀತಿಯಲ್ಲಿ ಸಂಸತ್ತು ಮತ್ತು ರಾಜ್ಯ ವಿಧಾನಸಭೆಯಲ್ಲಿ ಕೊಡವರಿಗೆ ವಿಶೇಷ ಪ್ರಾತಿನಿಧ್ಯ ಕಲ್ಪಿಸಬೇಕು ಎಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಶಾಂತಿಯುತ ಸತ್ಯಾಗ್ರಹ ನಡೆಸಿತು.

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರ ನೇತೃತ್ವದಲ್ಲಿ ಸತ್ಯಾಗ್ರಹ ನಡೆಸಿ ಕೊಡವರ ಹಕ್ಕೊತ್ತಾಯಗಳ ಮನವಿ ಪತ್ರವನ್ನು ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಯಿತು. ಕೊಡವರಿಗೆ ಕೊಡವ ಸಾಂಪ್ರದಾಯಿಕ ಜನ್ಮ ಭೂಮಿಯಲ್ಲಿ ಪ್ರತ್ಯೇಕ ಲೋಕಸಭೆ ಮತ್ತು ಅಸೆಂಬ್ಲಿ ಕೊಡವ ಮತ ಕ್ಷೇತ್ರವನ್ನು ರಚಿಸಬೇಕು ಎಂದು ಎನ್.ಯು.ನಾಚಪ್ಪ ಒತ್ತಾಯಿಸಿದರು.


2026ರಲ್ಲಿ ಸಂಸತ್ತಿನ ಮತ್ತು ಅಸೆಂಬ್ಲಿಯ ಕ್ಷೇತ್ರದ ಗಡಿ ಹಾಗೂ ಸಂಖ್ಯೆ ಪುನರ್ ನಿರ್ಣಯಿಸಲಾಗುತ್ತಿದ್ದು, ಇದಕ್ಕಾಗಿ ಪ್ರಕ್ರಿಯೆ ಪ್ರಾರಂಭವಾಗಿದೆ. ರಾಜ್ಯದಲ್ಲಿ ಗರಿಷ್ಠ ಪ್ರಾತಿನಿಧ್ಯವನ್ನು ಹೊಂದಿರುವ ಜನಸಂಖ್ಯಾ ಪ್ರಾಬಲ್ಯದ ಕೂಟ ಕೊಡಗಿಗೆ ಪ್ರತ್ಯೇಕ ಲೋಕಸಭಾ ಕ್ಷೇತ್ರವನ್ನು ನಿರ್ಮಿಸುವ ನೆಪದಲ್ಲಿ ಸುಳ್ಯ ತಾಲೂಕನ್ನು ಕೊಡಗಿಗೆ ಸೇರಿಸಿ ಪ್ರತ್ಯೇಕ ಕೊಡಗು ಲೋಕಸಭಾ ಕ್ಷೇತ್ರ ನಿರ್ಮಿಸಿ ಶಾಶ್ವತವಾಗಿ ತಾವು ಸಂಸತ್ ಪ್ರಾತಿನಿಧ್ಯ ಪಡೆಯುವುದರೊಂದಿಗೆ ಸಂಸತ್ತಿನಲ್ಲಿ ಕೊಡವರಿಗೆ ಪ್ರಾತಿನಿಧ್ಯ ದಕ್ಕದಂತೆ ಒಳಸಂಚು ರೂಪಿಸಲಾಗುತ್ತಿದೆ ಎಂದು ಆರೋಪಿಸಿದರು.

ಕೊಡವಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆ, ಸ್ವಯಂ ಆಡಳಿತ, ಕೊಡವರ ಆಂತರಿಕ ರಾಜಕೀಯ ಸ್ವಯಂ ನಿರ್ಣಯ ಹಕ್ಕುಗಳಿಗಾಗಿ ಸಂವಿಧಾನ 371 ಮತ್ತು 244 ವಿಧಿ ಹಾಗೂ 6ನೇ ಮತ್ತು 8ನೇ ಶೆಡ್ಯೂಲ್, ಅಂತರರಾಷ್ಟ್ರೀಯ ಕಾನೂನಿನ ಅಡಿಯಲ್ಲಿ ಕೊಡವರಿಗೆ ವಿಶ್ವ ರಾಷ್ಟ್ರ ಸಂಸ್ಥೆಯ ಇಂಡಿಜಿನಸ್ ಹಕ್ಕುಗಳ ಮಾನ್ಯತೆ ಮತ್ತು ಸಂವಿಧಾನದ 340–342 ವಿಧಿಗಳ ಅಡಿಯಲ್ಲಿ ಕೊಡವರಿಗೆ ಬುಡಕಟ್ಟು ವರ್ಗೀಕರಣ ಹಾಗೂ ನಮ್ಮ ಭೂಮಿ, ಭಾಷೆ, ಸಾಂಸ್ಕೃತಿಕ ಪರಂಪರೆ, ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯಕ್ಕೆ ಸಂವಿಧಾನದ ವಿಶೇಷ ಖಾತರಿಗಾಗಿ ಒತ್ತಾಯಿಸಿದರು. ಬಳಿಕ ಜ್ಞಾಪನಾ ಪತ್ರವನ್ನು ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಅವರ ಮೂಲಕ ಸರಕಾರಕ್ಕೆ ಸಲ್ಲಿಸಿದರು.

ಕಲಿಯಂಡ ಮೀನಾ ಕಾರ್ಯಪ್ಪ ರೇಖಾ ನಾಚಪ್ಪ, ಪಟ್ಟಮಾಡ ಲಲಿತಾ ಗಣಪತಿ, ಚೋಳಪಂಡ ಜ್ಯೋತಿ ನಾಣಯ್ಯ, ಮುದ್ದಿಯಾಡ ಲೀಲಾವತಿ, ಕಲಿಯಂಡ ಪ್ರಕಾಶ್, ಅಳ್ಮಂಡ ಜೈ ಗಣಪತಿ, ಕಾಂಡೇರ ಸುರೇಶ್, ಅಜ್ಜಿಕುಟ್ಟೀರ ಲೋಕೇಶ್, ಅರೆಯಡ ಗಿರೀಶ್, ಬೊಟ್ಟಂಗಡ ಗಿರೀಶ್, ಸಾದೇರ ರಮೇಶ್ ಸೇರಿದಂತೆ ಮತ್ತಿತ್ತರರು ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ಮಹಿಳೆ ಬಲಿ ಪಡೆದಿದ್ದ ಕಾಡಾನೆ ಸೆರೆ

ಅರಣ್ಯ ಸಚಿವರ ಆದೇಶದ ಮೇರೆಗೆ ಕಾರ್ಯಾಚರಣೆ ನಡೆಸಿದ ಅರಣ್ಯ ಇಲಾಖೆ


ಮಹಿಳೆಯನ್ನು ಬಲಿ ಪಡೆದಿದ್ದ ಕಾಡಾನೆಯನ್ನು ಅರಣ್ಯ ಇಲಾಖೆಯಿಂದ ಸೆರೆ ಹಿಡಿಯಲಾಗಿದೆ.

ಮಡಿಕೇರಿ,ಫೆ.15– ಗೋಣಿಕೊಪ್ಪಲು–ಮೈಸೂರು ರಸ್ತೆ ಸಮೀಪದ ಕಾಫಿ ತೋಟವೊಂದರಲ್ಲಿ ಕೆಲಸ ಮುಗಿಸಿ ಮನೆಗೆ ಮರಳುತ್ತಿದ್ದ ಮಹಿಳೆಯನ್ನು ಬಲಿ ಪಡೆದಿದ್ದ ಕಾಡಾನೆಯನ್ನು ಸೆರೆ ಹಿಡಿಯಲಾಗಿದೆ.

ಶಾಸಕ ಎ.ಎಸ್. ಪೊನ್ನಣ್ಣ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರೊಂದಿಗೆ ಮಾತನಾಡಿ, ಕೂಡಲೇ ಕಾರ್ಯಾಚರಣೆ ಅನುಮತಿ ನೀಡಿ ಪುಂಡಾನೆಯನ್ನು ಸೆರೆ ಹಿಡಿಯಲು ಮನವಿ ಮಾಡಿದ ಬೆನ್ನಲ್ಲೇ ಶನಿವಾರ ಬೆಳಗ್ಗೆಯಿಂದಲೇ ಪುಂಡಾನೆ ಸೆರೆ ಹಿಡಿಯುವ ಕಾರ್ಯಾಚರಣೆ ಆರಂಭಗೊಂಡಿತು.

ಹಾರಂಗಿ, ದುಬಾರೆ ಮತ್ತು ಮತ್ತಿಗೋಡು ಸಾಕಾನೆ ಶಿಬಿರಗಳಿಂದ 6 ಸಾಕಾನೆಗಳನ್ನು ಕಾರ್ಯಾಚರಣೆಗೆ ಬಳಸಿಕೊಳ್ಳಲಾಯಿತು. ರಾಜ್ಯ ವನ್ಯಜೀವಿ ಮಂಡಳಿಯ ಸದಸ್ಯ ಮೇರಿಯಂಡ ಸಂಕೇತ್ ಪೂವಯ್ಯ ಅವರ ನೇತೃತ್ವದಲ್ಲಿ ಪೊನ್ನಂಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೀದೇರಿರ ನವೀನ್, ಸ್ಥಳೀಯ ಮುಖಂಡರು, ಅರಣ್ಯಾಧಿಕಾರಿಗಳಾದ ಜಗನ್ನಾಥ್, ಭಾಸ್ಕರ್, ಸೀಮಾ, ಗೋಪಾಲ್ ಮತ್ತು ಸಿಬ್ಬಂದಿಗಳು ಅರವಳಿಕೆ ತಜ್ಞರೊಂದಿಗೆ ಕಾಡಾನೆ ಸೆರೆಗೆ ಕಾರ್ಯಾಚರಣೆ ನಡೆಸಿದರು. ಕಾಫಿ ತೋಟದಲ್ಲಿ ಕಂಡ ಪುಂಡಾನೆಯನ್ನು ಅರವಳಿಕೆ ಪ್ರಯೋಗಿಸಿ ಸಾಕಾನೆಗಳ ಸಹಾಯದಿಂದ ಸೆರೆ ಹಿಡಿಯಲಾಯಿತು. ಬಳಿಕ ಉಪಚರಿಸಿ ಸೆರೆ ಹಿಡಿದ ಕಾಡಾನೆಯನ್ನು ದುಬಾರೆ ಸಾಕಾನೆ ಶಿಬಿರಕ್ಕೆ ರವಾನಿಸಲಾಯಿತು.

ಬ್ಯಾರಿಕೇಡ್ ಅಳವಡಿಕೆಗೆ 22 ಕೋಟಿ: ಪುಂಡಾನೆ ಸೆರೆ ಕಾರ್ಯಾಚರಣೆ ಕುರಿತು ಮಾತನಾಡಿದ ಶಾಸಕ ಪೊನ್ನಣ್ಣ, ಪುಂಡಾನೆ ಸೆರೆ ಹಿಡಿಯಲು ಅರಣ್ಯ ಸಚಿವ ಈಶ್ವರ ಖಂಡ್ರೆ, ಅರಣ್ಯ ಇಲಾಖೆ ಮುಖ್ಯಸ್ಥರಾದ ಸುಭಾಷ್ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿ, ಪುಂಡಾನೆ ಸೆರೆಗೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಕಾಡಾನೆ ಸೆರೆಗೆ ಅರಣ್ಯ ಸಚಿವರು ಆದೇಶ ನೀಡಿದ ಬಳಿಕ ಶನಿವಾರ ಬೆಳಗ್ಗೆಯಿಂದ ಕಾರ್ಯಾಚರಣೆ ಕೈಗೊಂಡು ಕಾಡಾನೆಯನ್ನು ಸೆರೆಹಿಡಿದು ದುಬಾರೆ ಸಾಕಾನೆ ಶಿಬಿರಕ್ಕೆ ಸ್ಥಳಾಂತರಿಸಲಾಗಿದೆ ಎಂದರು.

ಕಾಡಾನೆಗಳ ಹಾವಳಿ ಹೆಚ್ಚಿರುವ ಪ್ರದೇಶಗಳಲ್ಲಿ ಸುಮಾರು 15 ಕಿ.ಮೀ ದೂರದವರೆಗೆ ರೈಲ್ವೆ ಬ್ಯಾರಿಕೇಡ್‌ಗಳನ್ನು ಅಳವಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅರಣ್ಯ ಸಚಿವ ಈಶ್ವರ ಖಂಡ್ರೆ ಸುಮಾರು 22 ಕೋಟಿ ರೂ.ಗಳ ಅನುದಾನವನ್ನು ಬಿಡುಗಡೆಗೊಳಿಸಿದ್ದು, ರೈಲ್ವೆ ಬ್ಯಾರಿಕೇಡ್ ಅಳವಡಿಸುವ ಕಾರ್ಯಕ್ಕೆ ಶೀಘ್ರವಾಗಿ ಚಾಲನೆ ನೀಡಲಾಗುವುದು. ಅರಣ್ಯ ಇಲಾಖಾಧಿಕಾರಿಗಳ ಜತೆ ವಿಶೇಷ ಪ್ರವಾಸ ಆಯೋಜಿಸಿ, ಬೆಳೆಗಾರರು, ಕೃಷಿಕರು, ಸ್ಥಳೀಯರೊಂದಿಗೆ ಚರ್ಚಿಸಿ, ಸೂಕ್ಷ್ಮ ಪ್ರದೇಶಗಳಲ್ಲಿ ರೈಲ್ವೆ ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗುವುದು ಎಂದರು.

ಟ್ರ್ಯಾಕ್ಟರ್ ಚಕ್ರಕ್ಕೆ ಸಿಲುಕಿ ಚಾಲಕ ಸಾವು

ಮಡಿಕೇರಿ,ಫೆ.15– ಟ್ರ್ಯಾಕ್ಟರ್ ಚಕ್ರದ ಅಡಿಗೆ ಸಿಲುಕಿ ಚಾಲಕ ಮೃತಪಟ್ಟ ಘಟನೆ ನಾಪೋಕ್ಲು ಕೈಕಾಡು ಮುಖ್ಯ ರಸ್ತೆಯ ಬೇತು ಗ್ರಾಮದ ತಿರುವಿನ ರಸ್ತೆಯಲ್ಲಿ ಸಂಭವಿಸಿದೆ.

ಟ್ರ್ಯಾಕ್ಟರ್ ಚಾಲಕ ಕೈಕಾಡು ನಿವಾಸಿ ನರೇಂದ್ರ(33) ಮೃತ ದುರ್ದೈವಿಯಾಗಿದ್ದಾರೆ. ನಾಪೋಕ್ಲು ಕಡೆಯಿಂದ ಟ್ರ್ಯಾಕ್ಟರ್ ಚಲಾಯಿಸಿಕೊಂಡು ಕೈಕಾಡು ಗ್ರಾಮದಲ್ಲಿರುವ ತನ್ನ ನಿವಾಸಕ್ಕೆ ತೆರಳುವ ಸಂದರ್ಭದಲ್ಲಿ ರಸ್ತೆ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಕಾಫಿ ತೋಟದೊಳಗೆ ಟ್ರ್ಯಾಕ್ಟರ್ ಉರುಳಿ ಬಿದ್ದಿದೆ. ಈ ಅಪಘಾತದಲ್ಲಿ ನರೇಂದ್ರ ಚಕ್ರಕ್ಕೆ ಸಿಲುಕಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಘಟನಾ ಸ್ಥಳಕ್ಕೆ ನಾಪೋಕ್ಲು ಠಾಣಾಧಿಕಾರಿ ಮಂಜುನಾಥ್ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.



ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಮೃತ ದೇಹ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಯಿತು. ಘಟನೆ ಕುರಿತು ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಳ್ಳಭಟ್ಟಿ ತಯಾರಿಕ ಕೇಂದ್ರದ ಮೇಲೆ ಅಬಕಾರಿ ಅಧಿಕಾರಿಗಳ ದಾಳಿ

ಮೂವರ ಬಂಧನ, ಕಳ್ಳಭಟ್ಟಿ, ಪುಳಗಂಜಿ ಪರಿಕರ ಸೇರಿ ಹಲವು ವಸ್ತುಗಳ ವಶ



ಮಡಿಕೇರಿ, ಫೆ.15– ಮಡಿಕೇರಿ ತಾಲೂಕಿನ ಕರಿಕೆ ಗ್ರಾಮದ ಕರಿಬಳಪು ಎಂಬಲ್ಲಿ 3 ಕಡೆ ದಾಳಿ ನಡೆಸಿರುವ ಅಬಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕಳ್ಳಭಟ್ಟಿ, ಪುಳಗಂಜಿ, ಭಟ್ಟಿ ಇಳಿಸುವ ಪರಿಕರ ಸೇರಿ 3 ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ.

ಬೆಳಗ್ಗೆ 7.30 ವೇಳೆಯಲ್ಲಿ ಕರಿಕೆ ಗ್ರಾಮದ ಕರಿಬಳಪು ನಿವಾಸಿ ರಾರು, ರಮೇಶ, ಕಾರ್ಯಪ್ಪ ಎಂಬವರ ಮನೆಗಳ ಮೇಲೆ ದಾಳಿ ನಡೆಸಿದ ಸಂದರ್ಭ ಒಟ್ಟು 100 ಲೀಟರ್ ಪುಳಗಂಜಿ, 5.5 ಲೀಟರ್ ಕಳ್ಳಭಟ್ಟಿ ಹಾಗೂ ಭಟ್ಟಿ ಇಳಿಸುವ ಪರಿಕರಗಳು ಕಂಡುಬಂದಿದೆ. ಸ್ಥಳ ಮಹಜರು ಮೂಲಕ ಸ್ವತ್ತುಗಳನ್ನು ಅಬಕಾರಿ ಇಲಾಖೆ ವಶಕ್ಕೆ ಪಡೆದು ಆರೋಪಿಗಳ ವಿರುದ್ಧ 3 ಘೋರ ಪ್ರಕರಣಗಳನ್ನು ದಾಖಲಿಸಲಾಗಿದೆ.

ಅಬಕಾರಿ ದಾಳಿಯಲ್ಲಿ ಮಡಿಕೇರಿ ವಲಯ ಅಬಕಾರಿ ನಿರೀಕ್ಷಕಿ ವಿ.ಸ್ವರ್ಣಶ್ರೀ, ಅಬಕಾರಿ ಉಪ ನಿರೀಕ್ಷಕ ಬಾಲಕೃಷ್ಣ ಬಿ.ಎಸ್, ಮುಖ್ಯ ಪೇದೆ ರಾಜೇಂದ್ರ ಕೆ.ಬಿ, ಪೇದೆಗಳಾದ ರಾಜು ಎಚ್.ಎ, ಮೋಹನ್ ಕುಮಾರ್ ಡಿ.ಎಸ್ ಹಾಗೂ ವಾಹನ ಚಾಲಕ ನಿತಿನ್ ವೈ ಪಾಲ್ಗೊಂಡಿದ್ದರು.

ಚಾಲಕನ ನಿಯಂತ್ರಣ ತಪ್ಪಿದ ಕಾರೊಂದು ವಿದ್ಯುತ್ ಕಂಬಕ್ಕೆ ಡಿಕ್ಕಿ: ಪ್ರಾಣಾಪಾಯದಿಂದ ಪಾರು

ನಾಪೋಕ್ಲು: ಚಾಲಕನ ನಿಯಂತ್ರಣ ತಪ್ಪಿದ ಕಾರೊಂದು ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಚಾಲಕ ಪ್ರಾಣಾಪಾಯದಿಂದ ಪಾರಾದ ಘಟನೆ ಶನಿವಾರ ಸಂಜೆ ಕೈಕಾಡು ಎಂಬಲ್ಲಿ ಸಂಭವಿಸಿದೆ.

ಪಾರಾಣೆ ಕಡೆಯಿಂದ ನಾಪೋಕ್ಲು ಕಡೆಗೆ ತೆರಳುತ್ತಿದ್ದ ಕಾರು ಇಲ್ಲಿಗೆ ಸಮೀಪದ ಕೈಕಾಡು ಸೇತುವೆಯ ಬಳಿ ರಸ್ತೆಯ ತಿರುವಿನಲ್ಲಿ ವಿದ್ಯುತ್ ಕಂಬಕ್ಕೆ ಡಿಕ್ಕಿಯಾಗಿ ಅಪಘಾತ ಸಂಭವಿಸಿ ಚಾಲಕ ಪಾರಾಗಿದ್ದಾರೆ.

ಅಪಘಾತದ ರಭಸಕ್ಕೆ ಕಾರಿನ ಮುಂಭಾಗ ಜಖಂಗೊಂಡಿದ್ದಲ್ಲದೆ ವಿದ್ಯುತ್ ಕಂಬ ಮುರಿದು ರಸ್ತೆಯ ಮೇಲೆ ಬಿದ್ದ ಕಾರಣ ಸ್ವಲ್ಪ ಸಮಯ ರಸ್ತೆ ಸಂಚಾರಕ್ಕೆ ಅಡಚಣೆ ಉಂಟಾಯಿತು. ಸ್ಥಳದಲ್ಲಿದ್ದವರು ಬೆಸ್ಕಾಂಗೆ ವಿಷಯ ತಿಳಿಸಿ ವಿದ್ಯುತ್ ಸಂಪರ್ಕವನ್ನು ಸ್ಥಗಿತಗೊಳಿಸಿ ಮುನ್ನೆಚ್ಚರಿಕೆ ಕೈಗೊಂಡ ಕಾರಣ ಹೆಚ್ಚಿನ ಅಪಘಾತಗಳು ಸಂಭವಿಸಿಲ್ಲ.


ಚಾಲಕನ ನಿಯಂತ್ರಣ ತಪ್ಪಿದ ಕಾರೊಂದು ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಘಟನೆ ಕೈಕಾಡು ಎಂಬಲ್ಲಿ ಸಂಭವಿಸಿದೆ.

ಚಾ.ನಗರದಲ್ಲಿ ಸವಿತಾ ಮಹರ್ಷಿ ಜಯಂತಿ ಆಚರಣೆ

ಚಾಮರಾಜನಗರ, ಫೆ.15–ಚಾಮರಾಜನಗರ ಟೌನ್‌ನಲ್ಲಿರುವ ಸವಿತಾ ಸಮಾಜದ ಜನರಿಗೆ ನೀಡಿರುವ ಸ್ಮಶಾನ ಭೂಮಿ ಅಭಿವೃದ್ಧಿಪಡಿಸಬೇಕು ಎಂದು ಸಮುದಾಯದ ಜಿಲ್ಲಾ ಅಧ್ಯಕ್ಷರಾದ ಪಣ್ಯದಹುಂಡಿ ವೆಂಕಟೇಶ್ ಒತ್ತಾಯಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಡೆದ ಸವಿತಾ ಮಹರ್ಷಿ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.


ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸವಿತಾ ಮಹರ್ಷಿ ಜಯಂತಿಯನ್ನು ಆಚರಿಸಲಾಯಿತು.

ಸವಿತಾ ಸಮಾಜದ ಜನರಿಗೆ ಕಾಳನಹುಂಡಿ ರಸ್ತೆಯಲ್ಲಿ 10 ಗುಂಟೆ ಸ್ಮಶಾನ ಭೂಮಿ ನೀಡಿದ್ದಾರೆ. ಆದರೆ, ಸೂಕ್ತ ರಸ್ತೆ ವ್ಯವಸ್ಥೆ ಇಲ್ಲದೇ ಸಮುದಾಯದವರು ಪರದಾಡುವಂತಾಗಿದೆ ಈ ಬಗ್ಗೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ದೂರಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದಾ ಅವರು, ಸವಿತಾ ಸಮಾಜ ಸ್ಮಶಾನ ಭೂಮಿಗೆ ಖಂಡಿತವಾಗಿಯೂ ರಸ್ತೆ ಸೌಲಭ್ಯವನ್ನು ಕಲ್ಪಿಸುತ್ತೇನೆ. ಈ ಸಂಬಂಧ ಆ ಜಾಗದ ಸರ್ವೇ ನಂಬರ್ ಸೇರಿದಂತೆ ಇನ್ನಿತರ ಮಾಹಿತಿಯನ್ನು ಇಂದೇ ಅಧಿಕಾರಿಗಳಿಂದ ಪಡೆದು ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದರು.

ಸವಿತಾ ಮಹರ್ಷಿಗಳು ಸಂಗೀತ, ವೇದಗಳಲ್ಲಿ ಅಪಾರ ಜ್ಞಾನ ಹೊಂದಿದ್ದರು. ಸಂಗೀತಾ ಶಾಸ್ತ್ರಕ್ಕೆ ಸಂಬಂಧಿಸಿದ ಸಾಮವೇದವನ್ನು ಸವಿತಾ ಮಹರ್ಷಿಗಳು ರಚನೆ ಮಾಡಿದ್ದಾರೆ ಎಂದರು. ಸವಿತಾ ಮಹರ್ಷಿಗಳು ಆರಂಭದಲ್ಲಿ ವೈದ್ಯ ವೃತ್ತಿ ಮಾಡುತ್ತಿದ್ದರು ಎಂಬುದಾಗಿ ತಿಳಿದು ಬರುತ್ತದೆ. ಪ್ರತಿಯೊಂದು ವೃತ್ತಿಗೂ ತನ್ನದೇ ಆದ ಗೌರವವಿದೆ ವೃತ್ತಿ ಧರ್ಮವನ್ನು ಗೌರವಿಸುವುದು ಮುಖ್ಯವಾಗಿದೆ. ಯಾವುದೇ ವೃತ್ತಿ ಮೇಲು ಅಲ್ಲ ಕೀಳು ಅಲ್ಲ ಎಂಬುದನ್ನು ಅರಿಯಬೇಕು ಎಂದು ತಿಳಿಸಿದರು.

ಸಮಾಜದ ಅಭಿವೃದ್ಧಿಗೆ ಡಾ.ಬಿ.ಆರ್. ಅಂಬೇಡ್ಕರ್ ಅವರು ಹೇಳಿರುವಂತೆ ಶಿಕ್ಷಣವೇ ಅಸ್ತ್ರವಾಗಿದೆ. ಶಿಕ್ಷಣದಿಂದ ಹಲವು ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ. ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಸಮಾಜದ ಸತ್ಪ್ರಜೆಗಳನ್ನಾಗಿ ಮಾಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಡಿವೈಎಸ್‌ಪಿ ಲಕ್ಷ್ಮಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಉದಯ್‌ಕುಮಾರ್, ಸಮಾಜದ ಮುಖಂಡರಾದ ಬದನಗುಪ್ಪೆ ಬಸವಣ್ಣ, ಪುರುಷೋತ್ತಮ್, ರಂಗಸ್ವಾಮಿ, ವೆಂಕಟೇಶ್, ನಾಗು, ಮಹದೇವ, ನಿಂಗರಾಜು ಸೇರಿದಂತೆ ವಿವಿಧ ಸಂಘಟನೆಗಳ ಅಧ್ಯಕ್ಷರು, ಪದಾಧಿಕಾರಿಗಳು, ಅಧಿಕಾರಿಗಳು, ಇತರರು ಉಪಸ್ಥಿತರಿದ್ದರು.

ರಸ್ತೆ ಸುರಕ್ಷತಾ ಸಪ್ತಾಹದ ಅರಿವು ಜಾಥಾಗೆ ಚಾಲನೆ

ಚಾಮರಾಜನಗರ, ಫೆ.15– ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ಸಾರಿಗೆ ಇಲಾಖೆ ವತಿಯಿಂದ ನಗರದ ಶ್ರೀ ಚಾಮರಾಜೇಶ್ವರ ದೇವಾಲಯದ ಮುಂಭಾಗದಲ್ಲಿ ರಸ್ತೆ ಸುರಕ್ಷತೆ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವ ಜಾಥಾಗೆ ಚಾಲನೆ ದೊರೆಯಿತು.

ಜಾಥಾಗೆ ಹಸಿರು ನಿಶಾನೆ ತೋರಿ ಬಳಿಕ ಮಾತನಾಡಿದ ಪ್ರಾದೇಶಿಕ ಸಾರಿಗೆ ಅಧಿಕಾರಿ ಗಾಯತ್ರಿ ಅವರು, ಜನಸಾಮಾನ್ಯರಿಗೆ ರಸ್ತೆ ಸುರಕ್ಷತೆಯ ಅರಿವು ಮೂಡಿಸಲು ಪ್ರತಿವರ್ಷದಂತೆ ಈ ಬಾರಿಯೂ ರಸ್ತೆ ಸುರಕ್ಷತಾ ಸಪ್ತಾಹವನ್ನು ಆಯೋಜಿಸಲಾಗಿದೆ. ದಿನೇ ದಿನೇ ಹೆಚ್ಚಾಗುತ್ತಿರುವ ಅಪಘಾತ ಪ್ರಮಾಣವನ್ನು ತಗ್ಗಿಸುವುದೇ ಸಪ್ತಾಹದ ಉದ್ದೇಶವಾಗಿದೆ. ರಸ್ತೆ ಸುರಕ್ಷತೆಯ ಬಗ್ಗೆ ನಾಗರಿಕರು, ವಿದ್ಯಾರ್ಥಿಗಳು ಸೇರಿದಂತೆ ಪ್ರತಿಯೊಬ್ಬರಿಗೂ ಜಾಗೃತಿ ಅಗತ್ಯವಾಗಿದೆ ಎಂದರು.



ರಸ್ತೆ ಸುರಕ್ಷತೆ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವ ಜಾಥಾಗೆ ಪ್ರಾದೇಶಿಕ ಸಾರಿಗೆ ಅಧಿಕಾರಿ ಗಾಯತ್ರಿ ಚಾಲನೆ ನೀಡಿದರು.

ಸಪ್ತಾಹದ ಅಂಗವಾಗಿ ಸಾರ್ವಜನಿಕರಿಗೆ ಅರಿವು ಮೂಡಿಸಲು ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಜಿಲ್ಲೆಯಲ್ಲಿ ಅಪಘಾತ ಪ್ರಮಾಣ ಕಳೆದ ಬಾರಿಗಿಂತ ಪ್ರಸ್ತುತ ಸಾಲಿನಲ್ಲಿ ಹೆಚ್ಚಾಗಿದೆ. ಅಪಘಾತಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಜನರು ರಸ್ತೆ ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಈ ಮೂಲಕ ಚಾಮರಾಜನಗರವನ್ನು ಅಪಘಾತ ಮುಕ್ತ ಜಿಲ್ಲೆಯನ್ನಾಗಿಸಲು ಎಲ್ಲರು ಸಹಕರಿಸಬೇಕು ಎಂದು ಅವರು ಮನವಿ ಮಾಡಿದರು.

ಪ್ರಾದೇಶಿಕ ಸಾರಿಗೆ ನಿರೀಕ್ಷಕ ದಿನೇಶ್ ಕುಮಾರ್ ಮಾತನಾಡಿ, ಸಾರ್ವಜನಿಕರು, ವಿದ್ಯಾರ್ಥಿಗಳು ರಸ್ತೆ ಸುರಕ್ಷತೆಯ ಮಹತ್ವವನ್ನು ಅರಿಯಬೇಕು. ಅಪಘಾತ ಪ್ರಮಾಣಗಳನ್ನು ಕಡಿಮೆ ಮಾಡಲು ವಾಹನ ಚಲಾಯಿಸುವ ಪ್ರತಿಯೊಬ್ಬರು ಚಾಲನಾ ಪರವಾನಗಿ ಪಡೆದಿರಬೇಕು. 18 ವರ್ಷ ಮೇಲ್ಪಟ್ಟವರು ಮಾತ್ರ ವಾಹನ ಚಾಲನೆ ಮಾಡಬೇಕು. ಅಪ್ರಾಪ್ತರು ವಾಹನ ಚಾಲಿಸಿದರೆ ಅವರ ಪೋಷಕರಿಗೆ 25 ಸಾವಿರ ರೂ. ದಂಡ ವಿಧಿಸಲಾಗುವುದು. ಅಪಘಾತದಲ್ಲಿ ಸಿಲುಕಿದ ವ್ಯಕ್ತಿ ಮರಣ ಹೊಂದಿದರೆ ಅಪ್ರಾಪ್ತರನ್ನು ಬಾಲಮಂದಿರಕ್ಕೆ ಕಳುಹಿಸಲಾಗುವುದು. ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ಯುವಕರು ಬೈಕ್ ವ್ಹೀಲಿಂಗ್ ಮಾಡಬಾರದು. ಕುಡಿದು ವಾಹನ ಚಾಲಿಸಬಾರದು ಎಂದರು.

ಶಾಲಾ ಶಿಕ್ಷಣ (ಪದವಿ ಪೂರ್ವ) ಇಲಾಖೆಯ ಉಪನಿರ್ದೇಶಕ ಮಂಜುನಾಥ ಪ್ರಸನ್ನ, ಸಂಚಾರಿ ನಿರೀಕ್ಷಕರಾದ ಮಹದೇವಸ್ವಾಮಿ, ಇತರರಿದ್ದರು.

ಬಿ.ರಾಚಯ್ಯನವರ 25ನೇ ಪುಣ್ಯಸ್ಮರಣೆ


ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮಾಜಿ ರಾಜ್ಯಪಾಲ ಬಿ.ರಾಚಯ್ಯನವರ 25ನೇ ಪುಣ್ಯಸ್ಮರಣೆ.

ಚಾಮರಾಜನಗರ: ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ರಾಜಕೀಯ ಮುತ್ಸದ್ದಿ, ಮಾಜಿ ರಾಜ್ಯಪಾಲರಾದ ಬಿ.ರಾಚಯ್ಯನವರ 25ನೇ ಪುಣ್ಯಸ್ಮರಣೆ ಹಾಗೂ ಅವರ ಕೊಡುಗೆಗಳ ಕುರಿತು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ತಾಲೂಕು ಕಸಾಪ ಅಧ್ಯಕ್ಷ ಸುರೇಶ್ ಎನ್ ಋಗ್ವೇದಿ ಅವರು, ರಾಚಯ್ಯನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡುತ್ತಾ, ರಾಜಯ್ಯನವರು ರಾಜ್ಯ ಕಂಡ ಶ್ರೇಷ್ಠ ರಾಜಕಾರಣಿ. ಮಾನವೀಯ ಮೌಲ್ಯವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಶ್ರೇಷ್ಠ ಮಾರ್ಗದಲ್ಲಿ ನಡೆದು ಸರಳತೆ ಮತ್ತು ಸಜ್ಜನ ವ್ಯಕ್ತಿತ್ವದಿಂದ ರಾಷ್ಟ್ರಕ್ಕೆ ಮಾದರಿಯಾಗಿದ್ದಾರೆ. ವಿವಿಧ ಇಲಾಖೆಗಳ ಸಚಿವರಾಗಿ, ರಾಜ್ಯಪಾಲರಾಗಿ ಚಾಮರಾಜನಗರ ಜಿಲ್ಲೆಯ ಸಾವಿರಾರು ಜನರಿಗೆ ಉದ್ಯೋಗದಾತರಾಗಿ, ನೀರಾವರಿ ಶಿಕ್ಷಣ, ಕೃಷಿ, ಕೈಗಾರಿಕೆ, ಅರಣ್ಯ, ವಸತಿ ಮುಂತಾದ ಕ್ಷೇತ್ರಗಳಲ್ಲಿ ಅಪಾರ ಕೊಡುಗೆಯನ್ನು ನೀಡಿದ ಮಹಾನ್ ವ್ಯಕ್ತಿ ಎಂದರು.

ತಮಿಳು ಸಂಘದ ಅಧ್ಯಕ್ಷ ಜಗದೀಶನ್ ಮಾತನಾಡಿ, ರಾಚಯ್ಯನವರ ಸರಳತೆಯನ್ನು ನಾವು ಮರೆಯಲಾಗದು. ಜಿಲ್ಲೆ ಹಾಗೂ ರಾಜ್ಯದ ಬಗ್ಗೆ ಅಭಿವೃದ್ಧಿಯ ಚಿಂತನೆ ದೂರದೃಷ್ಟಿ ನೀರಾವರಿಗೆ ನೀಡಿದ ಕೊಡುಗೆ ಕರ್ನಾಟಕ ಎಂದು ಮರೆಯಲಾಗದು. ಈ ರಾಚಯ್ಯನವರು ಅರಣ್ಯದ ಅಭಿವೃದ್ಧಿ ಮತ್ತು ಶಿಕ್ಷಣಕ್ಕೆ ಅಪಾರ ಕೊಡುಗೆಯನ್ನು ವಿಶೇಷವಾಗಿ ನೀಡಿದ್ದಾರೆ ಎಂದರು.

ಬರಹಗಾರ ಲಕ್ಷ್ಮಿ ನರಸಿಂಹ ಮಾತನಾಡಿ, ಚಾಮರಾಜನಗರದ ಪಾಲಿಟೆಕ್ನಿಕ್ ಇವರ ಕೊಡುಗೆ ಇಂದು ಚಾಮರಾಜನಗರ ಜಿಲ್ಲೆಯ ಸ್ವರೂಪವನ್ನು ಹೊಂದಲು ಎಲ್ಲಾ ಕ್ಷೇತ್ರಗಳಲ್ಲೂ ಅಭಿವೃದ್ಧಿಯನ್ನು ಸಾಧಿಸುವ ದಿಕ್ಕಿನಲ್ಲಿ ಅವರ ದೂರದೃಷ್ಟಿ ಬಹಳ ಪರಿಣಾಮಕಾರಿಯಾಗಿದೆ ಎಂದರು.

ಕನ್ನಡ ಹೋರಾಟಗಾರ ಶ್ರೀನಿವಾಸ ಗೌಡ ಮಾತನಾಡಿದರು. ಕಸಾಪ ಸದಸ್ಯರಾದ ರವಿಚಂದ್ರ ಪ್ರಸಾದ್, ಪದ್ಮ ಪುರುಷೋತ್ತಮ್, ಸರಸ್ವತಿ, ಬಿಕೆ ಆರಾಧ್ಯ, ಶಿವಲಿಂಗಮೂರ್ತಿ, ಪ್ರಕಾಶ್, ಕಿರಣ್, ಸೂರ್ಯ, ಮಹದೇವಯ್ಯ ಮುಂತಾದವರು ಉಪಸ್ಥಿತರಿದ್ದರು

ಮನೆ ಮನೆ ಕಸ ಸಂಗ್ರಹಿಸುವ ನೂತನ ಆಟೋ ಟಿಪ್ಪರ್‌ಗಳಿಗೆ ಚಾಲನೆ

ಚಾಮರಾಜನಗರ: ನಗರದ ಸ್ವಚ್ಛತೆ ಹಾಗೂ ಘನತ್ಯಾಜ್ಯ ವಸ್ತುಗಳ ಸಂಗ್ರಹಣೆ, ವಿಲೇವಾರಿ ಮಾಡುವ ನೂತನ ಐದು ಆಟೋ ಟಿಪ್ಪರ್‌ಗಳಿಗೆ ಶಾಸಕ ಸಿ. ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ನಗರದ ನಗರಸಭೆ ಕಾರ್ಯಾಲಯದ ಮುಂಭಾಗದಲ್ಲಿ ಸ್ವಚ್ಛಭಾರತ ಅಭಿಯಾನ 1.0 ಯೋಜನೆಯಡಿ ಚಾಮರಾಜನಗರ ನಗರಸಭೆ ವತಿಯಿಂದ 46.50 ಲಕ್ಷ ರೂ.ಗಳ ವೆಚ್ಚದಲ್ಲಿ ಖರೀದಿಸಲಾಗಿರುವ 3.0 ಕ್ಯೂಬಿಕ್ ಸಾಮರ್ಥ್ಯದ ಐದು ಆಟೋ ಟಿಪ್ಪರ್‌ಗಳನ್ನು ಸೇವೆಗೆ ಸಮರ್ಪಿಸಿ, ಅವರು ಶುಭ ಹಾರೈಸಿದರು.

ಇದೇ ವೇಳೆ ಮಾತನಾಡಿದ ಶಾಸಕರು, ಸ್ವಚ್ಛ ಭಾರತ ಅಭಿಯಾನದಡಿ ನಗರಸಭಾ ವ್ಯಾಪ್ತಿಯ ಮನೆ ಮನೆ ಕಸ ಸಂಗ್ರಹಣೆಗಾಗಿ ನೂತನ ಐದು ಆಟೋ ಟಿಪ್ಪರ್‌ಗಳನ್ನು ನಗರಸಭೆಗೆ ನೀಡಲಾಗಿದೆ. ನಗರದ ಸ್ವಚ್ಛತೆಗಾಗಿ ನಾಗರಿಕರು ತಮ್ಮ ಮನೆಗಳಲ್ಲಿ ಸಂಗ್ರಹವಾಗುವ ಕಸವನ್ನು ಹಸಿಕಸ ಹಾಗೂ ಒಣಕಸವಾಗಿ ವಿಂಗಡಿಸಿ ಕಸ ಸಂಗ್ರಹಣೆಗಾಗಿ ಬರುವ ನಗರಸಭೆಯ ಸ್ವಚ್ಛತಾ ಸಿಬ್ಬಂದಿಗೆ ನೀಡಬೇಕು. ನಗರದ ನೈರ್ಮಲ್ಯಕ್ಕಾಗಿ ಎಲ್ಲರು ಸಹಕರಿಸಬೇಕು ಎಂದರು.

ನಗರಸಭೆ ಅಧ್ಯಕ್ಷ ಎಸ್.ಸುರೇಶ್ ಮಾತನಾಡಿ, ನಗರದ ಸ್ವಚ್ಛತೆಯನ್ನು ಕಾಪಾಡುವ ಸಲುವಾಗಿ ಕಸ ಸಂಗ್ರಹಣೆ ವಾಹನಗಳಿಗೆ ಇಂದು ಚಾಲನೆ ಸಿಕ್ಕಿದೆ. ಜನರು ಕಸವನ್ನು ಎಲ್ಲೆಂದರಲ್ಲಿ ಬಿಸಾಡದೇ ನಗರಸಭೆ ಸಿಬ್ಬಂದಿಗೆ ನೀಡಬೇಕು. ಕಸವನ್ನು ಹಸಿಕಸ ಹಾಗೂ ಒಣಕಸವಾಗಿ ಬೇರ್ಪಡಿಸುವುದರಿಂದ ಘನತ್ಯಾಜ್ಯ ವಿಂಗಡಣೆ ಸುಲಭವಾಗಲಿದೆ. ಈ ನಿಟ್ಟಿನಲ್ಲಿ ಜನರು ನಗರಸಭೆಗೆ ಸಹಕಾರ ನೀಡಬೇಕು ಎಂದು ತಿಳಿಸಿದರು.

ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ನಗರಸಭೆ ಉಪಾಧ್ಯಕ್ಷೆ ಮಮತ, ಸದಸ್ಯರಾದ ಮಹೇಶ್, ಕುಮುದ, ಖಲೀಲ್ ಉಲ್ಲಾ, ತೌಸಿಯಾ ಬಾನು, ಶಿವರಾಜು, ನಗರಸಭಾ ಆಯುಕ್ತ ಎಸ್.ವಿ.ರಾಮದಾಸ್, ಪರಿಸರ ಅಭಿಯಂತರರಾದ ರೂಪ ಇದ್ದರು.


ಘನತ್ಯಾಜ್ಯ ವಸ್ತುಗಳ ಸಂಗ್ರಹಣೆ, ವಿಲೇವಾರಿ ಮಾಡುವ ನೂತನ ಐದು ಆಟೋ ಟಿಪ್ಪರ್‌ಗಳಿಗೆ ಶಾಸಕ ಸಿ. ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ಕಾವೇರಿ ನದಿಯಲ್ಲಿ ಮುಳುಗಿ ಯೋಗಪಟು ನಾಗರಾಜನ್ ಸಾವು

ಕೊಳ್ಳೇಗಾಲ, ಫೆ.15– ಕಾವೇರಿ



ನದಿಯಲ್ಲಿ ತೀರ್ಥಸ್ನಾನ ಮಾಡಲು ತೆರಳಿದ್ದ ಯೋಗಪಟು ನೀರಿನಲ್ಲಿ ಮುಳುಗಿ ಸಾವಿಗೀಡಾಗಿರುವ ಘಟನೆ ಜರುಗಿದೆ.

ನಗರದ ಹಳೇ ಅಗ್ರಹಾರದ ವಿನಾಯಕ ಗುಡಿ ಬೀದಿಯ ವಾಸಿ ಎನ್.ನಾಗರಾಜನ್(78) ಅವರು ನಾರಾಯಣ ಸ್ವಾಮಿ ರಥೋತ್ಸವವಾದ ಮೂರನೇ ದಿನವಾದ ಶನಿವಾರ ದಾಸನಪುರ ಗ್ರಾಮದ ಕಾವೇರಿ ನದಿಯಲ್ಲಿ ತೀರ್ಥ ಸ್ನಾನಕ್ಕೆ ತೆರಳಿದ್ದಾರೆ. ಅವರು ನದಿಯಲ್ಲಿ ಒಂದು ಕಡೆಯಿಂದ ಇನ್ನೊಂದು ದಡದವರೆಗೆ ಈಜುತ್ತಾ ತೆರಳುತ್ತಿದ್ದಂತೆ ನಿತ್ರಾಣಗೊಂಡು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಈ ಸಂಬಂಧ ಕೊಳ್ಳೇಗಾಲ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು ಕೆಲವೆಡೆ ವಿದ್ಯುತ್ ವ್ಯತ್ಯಯ



ಚಾಮರಾಜನಗರ, ಫೆ.15– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ದೊಡ್ಡರಾಯಪೇಟೆ ವಿದ್ಯುತ್ ಉಪ ಕೇಂದ್ರದ 11 ಕೆವಿ ಫೀಡರ್‌ನಲ್ಲಿ ತುರ್ತು ಕಾಮಗಾರಿಯನ್ನು ಫೆಬ್ರವರಿ 16ರಂದು ಹಮ್ಮಿಕೊಂಡಿರುವುದರಿಂದ ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಚಾಮರಾಜನಗರದ ಜಾಲಹಳ್ಳಿ ಹುಂಡಿ ಗ್ರಾಮ, ಸಂತೇಮರಹಳ್ಳಿ ರಸ್ತೆ ಮತ್ತು ಚಾಮರಾಜನಗರದ ಆಯ್ದ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ನಿಗಮದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಸಿದ್ದಪ್ಪಾಜಿ ನೂತನ ಹೆಬ್ಬಾಗಿಲು ಉದ್ಘಾಟನೆ

ಬೇಗೂರು, ಫೆ.15– ಸಮೀಪದ ಮರಳಾಪುರ ಗ್ರಾಮದ ಸಿದ್ಧಪ್ಪಾಜಿ ನೂತನ ಹೆಬ್ಬಾಗಿಲು ಉದ್ಘಾಟನೆ ಹಾಗೂ ಕಳಶರೋಹಣ ಫೆ.16 ಮತ್ತು 17 ರಂದು ನಡೆಯಲಿದೆ. ಸೋಮಹಳ್ಳಿ ಮಠಾಧೀಶ ಸಿದ್ದಮಲ್ಲಸ್ವಾಮೀಜಿ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಶಾಸಕ ಎಚ್.ಎಂ.ಗಣೇಶ್ ಪ್ರಸಾದ್, ಮಾಜಿ ಶಾಸಕ ಸಿ.ಎಸ್.ನಿರಂಜನ್ ಕುಮಾರ್ ಇನ್ನಿತರರು ಭಾಗವಹಿಸಲಿದ್ದಾರೆ.

ಫೆ.18ರಂದು ವೀರಭದ್ರಸ್ವಾಮಿ ದೇವಸ್ಥಾನದ ವಾರ್ಷಿಕೋತ್ಸವ

ಬೇಗೂರು, ಫೆ.15– ಸಮೀಪದ ಹೊರೆಯಾಲ ಗ್ರಾಮದ ವೀರಭದ್ರ ಸ್ವಾಮಿ ದೇವಸ್ಥಾನದ 11 ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮ ಫೆ.18 ರಂದು ನಡೆಯಲಿದೆ.

ಅಂದು ಬೆಳಗ್ಗೆ 5.30 ಗಂಟೆಗೆ ಬ್ರಾಹ್ಮಿ ಮುಹೂರ್ತದಲ್ಲಿ ರುದ್ರಾಭಿಷೇಕ, ಬಿಲ್ವಾರ್ಚನೆ, ವೀರಭದ್ರಾಷ್ಟೋತ್ತರ ಶತನಾಮಾವಳಿ, ವಿಶೇಷ ಪೂಜೆ ನಡೆಯಲಿದ್ದು, ಬೆಳಗ್ಗೆ 9.30 ಗಂಟೆಗೆ ಮಹಾ ಮಂಗಳಾರತಿ ಹಾಗೂ ವೀರಭದ್ರೇಶ್ವರ ಸ್ವಾಮಿ ಭಾವಚಿತ್ರದ ಮೆರವಣಿಗೆ ಗ್ರಾಮದಲ್ಲಿ ಬೀದಿಗಳಲ್ಲಿ ನಡೆಯಲಿದೆ.

ವಾರ್ಷಿಕೋತ್ಸವಕ್ಕೆ ಭಕ್ತಾದಿಗಳು ಹಾಗು ಸುತ್ತ ಮುತ್ತಲಿನ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಎಂದು ವೀರಭದ್ರೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ ಹಾಗೂ ಗ್ರಾಮಸ್ಥರು ಮನವಿ ಮಾಡಿದ್ದಾರೆ.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ

ಭಾನುವಾರ 16-2-2025



ಸಾಂಸ್ಕೃತಿಕವಾಗಿ ಭಾರತ ಶ್ರೀಮಂತ ರಾಷ್ಟ್ರ ಹೇಗೋ ಹಾಗೆ ಹಳ್ಳಿಗಳಿಂದ ಕೂಡಿದ ರಾಷ್ಟ್ರವೂ ಆಗಿದೆ. ಹಳ್ಳಿಯಿಂದ ದಿಲ್ಲಿ ಎನ್ನುವ ಮಾತಿನಂತೆ ಹಳ್ಳಿಗಳು ಯಾವುದೇ ರಾಷ್ಟ್ರದ ಬೆನ್ನೆಲುಬು. ಆದರೆ, ಆಧುನಿಕತೆಯಿಂದಾಗಿ ಹಳ್ಳಿಗಳ ಕೆಲವು ಸಂಸ್ಕೃತಿ, ಆಚಾರ-ವಿಚಾರ, ಸಂಪ್ರದಾಯ, ನಂಬಿಕೆ ಮುಂತಾದವುಗಳು ಮೂಲ ಸ್ವರೂಪವನ್ನು ಕಳೆದುಕೊಳ್ಳುತ್ತಿರುವುದು ವಿಷಾದನೀಯ ಸಂಗತಿ.

ಆದರೂ ಹಳ್ಳಿಯ ಸೊಗಡು ಸಂಪೂರ್ಣ ನಶಿಸಿಲ್ಲ. ಅಂತಹ ಹಳ್ಳಿಯಲ್ಲಿ ಮೈಸೂರಿನ ಸೆರಗಲ್ಲಿ ಬರುವ ಉತ್ತನಹಳ್ಳಿ ಗ್ರಾಮವು ಒಂದು. ಪಟ್ಟಣದ ನಡೆ-ನುಡಿ ಕಲಿತರು, ತನ್ನ ತಲೆತಲಾಂತರದ, ಸಂಪ್ರದಾಯ, ಪರಂಪರೆಯನ್ನು ಚಾಚೂ ತಪ್ಪದೆ ಪಾಲಿಸಿಕೊಂಡು ಬರುತ್ತಿದೆ. ಇಂತಹ ಆಚರಣೆಗಳಲ್ಲಿ ಗ್ರಾಮದೇವತೆ 'ಉತ್ತನಹಳ್ಳಿ ಮಾರಮ್ಮನ ಜಾತ್ರೆ' ಪ್ರಖ್ಯಾತಗೊಂಡಿದೆ. ಮೈಸೂರು ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಉತ್ತನಹಳ್ಳಿಯು ಮೈಸೂರು ನಗರದಿಂದ ಸುಮಾರು 13 ಕಿ.ಮೀ. ಅಂತರದಲ್ಲಿದ್ದು, ಐತಿಹಾಸಿಕ, ಚಾರಿತ್ರಿಕ ಹಿನ್ನೆಲೆಯುಳ್ಳ ನೆಲೆ ಬೀಡಾಗಿದೆ. ಪೌರಾಣಿಕ ಹಿನ್ನೆಲೆಗೆ ನಾಡಿನ ಅರಸರ ಕುಲದೇವತೆ, ಜಗನ್ಮಾತೆ ಚಾಮುಂಡೇಶ್ವರಿಯ ಸಹೋದರಿಯಾದ ಜ್ವಾಲಾಮುಖಿ ತ್ರಿಪುರ ಸುಂದರಿ, ಗ್ರಾಮದ ಜನತೆಯನ್ನು, ಸರ್ವ ಸದ್ಭಕ್ತರನ್ನು ಪೊರೆಯುತ್ತಿದ್ದಾಳೆ. "ದುಷ್ಟ ಶಿಕ್ಷಕಿ ಶಿಷ್ಟ ರಕ್ಷಕಿ" ಯಾದ ತಾಯಿಯ ಜಾತ್ರಾ ಮಹೋತ್ಸವವು ಪ್ರತಿ ವರ್ಷದಂತೆ ಈ ವರ್ಷವು ಫೆಬ್ರವರಿಯ 16, 17, 18ರಂದು ಬಹಳ ವಿಜೃಂಭಣೆಯಿಂದ ಆಚರಣೆಗೊಳ್ಳುತ್ತಿರುವುದು, ದೈವ ಭಕ್ತಿ ಮತ್ತು ಗ್ರಾಮೀಣ ಭಾಗದ ಜನತೆಯ ನಂಬಿಕೆಯು ಆಗಿದೆ.

ಉತ್ತನಹಳ್ಳಿ ಅಮ್ಮನವರ ಜಾತ್ರಾ ಮಹೋತ್ಸವ



ಪರಮೇಶ ಕೆ.ಉತ್ತನಹಳ್ಳಿ
ಮೊ.7795862281

ಐತಿಹ್ಯದ ಪ್ರಕಾರ 'ಮಹಿಷ ಮಂಡಲ' ಎಂಬ ರಾಜ್ಯದಲ್ಲಿ (ಪ್ರಕೃತ ಮೈಸೂರು) 'ಮಹಿಷಾಸುರ'ನೆಂಬ ರಾಕ್ಷಸ ನೆಲೆಸಿದ್ದನು. ಆತ ದಾನವ, ಋಷಿಮುನಿಗಳಿಗೆ ಕಂಟಕಪ್ರಾಯವಾಗಿ, ಋಷಿಗಳು ಯಜ್ಞ ಕಾರ್ಯಗಳಲ್ಲಿ ನಿರತರಾಗಿದ್ದಾಗ ವಿಘ್ನಪಡಿಸುತ್ತಿದ್ದನು. ಇಂತಹ ಪರಿಸ್ಥಿತಿಯಲ್ಲಿ ಆತಂಕಗೊಂಡ ಋಷಿವರರು ಇವನನ್ನು ಸಂಹಾರ ಮಾಡಲು ದೇವತೆಗಳ ಮೊರೆ ಹೊಕ್ಕಿ, 'ತ್ರಿಮೂರ್ತಿ'ಗಳೆಂದು ಕರೆಯಲ್ಪಡುವ ಬ್ರಹ್ಮ, ವಿಷ್ಣು, ಮಹೇಶ್ವರರಲ್ಲಿ ತಮ್ಮ ದುಗುಡವನ್ನು ತೋಡಿಕೊಂಡರು.

ಆಗ ಆ ತ್ರಿಮೂರ್ತಿಗಳು ತಮ್ಮ ಸಾಮರ್ಥ್ಯದ ಕೊರತೆಯನ್ನು ಬಿಚ್ಚಿಡುತ್ತಾರೆ. ಆದರೆ ಈ ಮಹಿಷಾಸುರನನ್ನು ಸಂಹಾರ ಮಾಡಲೇಬೇಕೆಂದರೆ ಅದು ಒಂದು ಹೆಣ್ಣಿನಿಂದ ಸಾಧ್ಯವಾಗುತ್ತದೆ ಎಂದು ತಿಳಿದಾಗ ಬ್ರಹ್ಮ, ವಿಷ್ಣು, ಇವರ ಪತ್ನಿಯರು ನಮ್ಮಿಂದ ಈ ಕಾರ್ಯ ಅಸಾಧ್ಯವೆಂದು ಹೇಳಿದಾಗ, ಶಿವನ ಅರ್ಧಾಂಗಿಯಾದ ಪಾರ್ವತಿಯು ಭೂಲೋಕದ ಕಲ್ಯಾಣಕ್ಕಾಗಿ ತಾನು ಕಂಕಣ ಬದ್ಧನಾಗಿದ್ದೇನೆ, ಮಹಿಷಾಸುರನನ್ನು ಸಂಹಾರ ಮಾಡುತ್ತೇನೆಂದು ಪಣ ತೊಡಲು, ದೇವಾನುದೇವತೆಗಳೆಲ್ಲಾ ಪಾರ್ವತಿಯ ಧೈರ್ಯ, ಸಾಹಸವನ್ನು ಮೆಚ್ಚಿ ಭೂಲೋಕಕ್ಕೆ 'ಚಾಮುಂಡಿ' ಅಂಕಿತವನ್ನಿಟ್ಟು ತಮ್ಮ ಶಕ್ತಿಯನ್ನು ಧಾರೆ ಎರೆದು ಪ್ರಮುಖವಾದ ಆಯುಧಗಳನ್ನು ನೀಡುತ್ತಾರೆ.

ಅವುಗಳೆಂದರೆ ರುದ್ರನು-ತ್ರಿಶೂಲ, ಇಂದ್ರ -ವಜ್ರಾಯುಧ, ವಿಷ್ಣು-ಚಕ್ರ, ಬ್ರಹ್ಮ-ಕಮಂಡಲ ಮತ್ತು ಹಿಮಾಲಯದಲ್ಲಿ ವಿಹರಿಸಲು 'ಉಗ್ರ ಸಿಂಹ'ವನ್ನು ನೀಡುತ್ತಾರೆ. ಹೀಗೆ ಸಾಮೂಹಿಕ ಶಕ್ತಿಯ ಪ್ರತೀಕವಾಗಿ ತಾಯಿ ಚಾಮುಂಡಿ ಅವತಾರವೆತ್ತಿದ್ದಳು. ಅಸಾಮಾನ್ಯ ಶಕ್ತಿಯನ್ನು ಪಡೆದು ಮಹಾಕಾಳಿಯಂತೆ ದುಷ್ಟ ರಾಕ್ಷಸನನ್ನು ಸಂಹಾರ ಮಾಡಲು ಕೋಪಾಗ್ನಿಯನ್ನು ಮೊಗದಲ್ಲಿ ಬೀರುತ್ತಾ ನಿಂತಿರಲು ಅಷ್ಟು ಸುಲಭವಾಗಿ ಮಹಿಷಾಸುರನನ್ನು ಸಂಹಾರ ಮಾಡಲು ಸಾಧ್ಯವಿಲ್ಲದಂತಾಗುತ್ತದೆ. ಏಕೆಂದರೆ ಮಹಿಷಾಸುರನ ಒಂದು ಹನಿ ರಕ್ತ ಮಣ್ಣಲ್ಲಿ ಬಿದ್ದರೂ ಆ ಒಂದು ಹನಿ ರಕ್ತದಿಂದ ಸಾವಿರಾರು ರಾಕ್ಷಸರು ಉದ್ಭವಿಸುತ್ತಾರೆ ಎಂಬ ಚಿಂತೆ ತಾಯಿಯನ್ನು ಕಾಡಿತು.

ಕೊನೆಗೂ ಸಂಹರಿಸಲು ನಿಶ್ಚಯಿಸಿ ಮಹಿಷ ಮಂಡಲಕ್ಕೆ ಬರುತ್ತಾಳೆ. ರಾಕ್ಷಸನನ್ನು ಸಂಹರಿಸಲು ಮುಂದಾದಾಗ ಪ್ರತಿ ರಕ್ತದ ಕಣ ಕಣದಿಂದಲೂ ರಾಕ್ಷಸರು ಜನ್ಮ ಪಡೆಯುತ್ತಿದ್ದುದನು ಕಂಡು ಆತಂಕ ಮತ್ತು ಆಯಾಸದಿಂದ ತನ್ನ ಮುಖದಿಂದ ಬರುತ್ತಿದ್ದ ಬೆವರನ್ನು ತೆಗೆದು ಬಿಸಾಡಲು ಈ ಬೆವರಿನಿಂದಲೇ ಮಾತೆ ಉತ್ತನಹಳ್ಳಿ ಹುರುಕಾತಿ ಅಥವಾ ಉತ್ತನಹಳ್ಳಿ ಮಾರಮ್ಮ ಅವತರಿಸುತ್ತಾಳೆ. ಆಶ್ಚರ್ಯಚಕಿತಗೊಂಡ ತಾಯಿ ಚಾಮುಂಡಿಯು 'ನೀನು ಯಾರು' ಎಂದು ಕೇಳಿದಾಗ, ಅದಕ್ಕೆ ಮಾತೆ 'ನಾನು ನಿನ್ನ ಸಹೋದರಿ ಜ್ವಾಲಾಮುಖಿ ತ್ರಿಪುರ ಸುಂದರಿ. ಅಕ್ಕ, ನಿನಗೆ ಒದಗಿ ಬಂದ ದುಗುಡವನ್ನು ಪರಿಹರಿಸಲು ಉದ್ಭವಿಸಿದ್ದೇನೆ. ಮಹಿಷಾಸುರನನ್ನು ನೀನು ಈಗ ಕೊಲ್ಲು, ನಾನು ಈ ರಾಕ್ಷಸನ ರಕ್ತ ನೆಲಕ್ಕೆ ಬೀಳದಂತೆ ನನ್ನ ಕೆನ್ನಾಲಿಗೆಯನ್ನು ಚಾಚುತ್ತೇನೆಂದು ಹೇಳುತ್ತಾಳೆ'. ಸಹೋದರಿಯ ಆಣತಿಯಂತೆ ಜಗನ್ಮಾತೆ, ಮಹಿಷಾಸುರನನ್ನು ಹುರುಕಾತಿಯ ನಾಲಿಗೆ ಮೇಲೆ ಕೊಲ್ಲುತ್ತಾಳೆ. ಹೀಗೆ ತನಗೆ ಸಹಾಯ ಮಾಡಿದ ಸಹೋದರಿಯನ್ನು ಚಾಮುಂಡಿಯು ಕೊಂಡಾಡುತ್ತಾಳೆ. ಉತ್ತನಹಳ್ಳಿ ಗ್ರಾಮದ ಜವರಪ್ಪನವರು ಹೇಳಿದ ಪ್ರಕಾರವಾಗಿ ಮಹಿಷನ ಸಂಹಾರವಾದ ತದನಂತರ ಚಾಮುಂಡೇಶ್ವರಿಯು ಬೆಟ್ಟದಲ್ಲಿ ನೆಲೆಸಿ 'ಬೆಟ್ಟದ ತಾಯಿ' ಎಂದು ಪ್ರಸಿದ್ಧಿಯಾದರೆ, ಸಹೋದರಿ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನನ್ನು ತನ್ನ ಪಕ್ಕದಲ್ಲೆ ನೆಲೆಸು ಎಂದು ಎಷ್ಟೆ ಹೇಳಿದರು ಕೇಳದೆ ಬೆಟ್ಟದಿಂದ 5 ಬಳಪದ ಕಲ್ಲುಗಳನ್ನು ಎತ್ತಿಕೊಂಡು ಬರುತ್ತಿರಬೇಕಾದರೆ ಕಾಲಿಗೆ ಕಲ್ಲು ತಾಗಿ ಬೀಳುತ್ತಾಳೆ. ಇದನ್ನು ಇಂದು 'ಬಿದ್ ಬೆಟ್ಟ' ಎಂದು ಕರೆಯುತ್ತಾರೆ. ಹೇಗೋ ಎದ್ದು ನಡೆದು ಬಂದು ಬೆಟ್ಟದ ತಪ್ಪಲಿನಲ್ಲಿರುವ ಗ್ರಾಮದಲ್ಲಿ ಬಂದು ನೆಲೆಸುತ್ತಾಳೆ. ಅಂದಿನಿಂದ ಈ ಉತ್ನಳ್ಳಮ್ಮನ ಹೆಸರಿನೊಂದಿಗೆ ಈ ಗ್ರಾಮ 'ಉತ್ತನಹಳ್ಳಿ' ಎಂದು ರೂಢನಾಮವಾಗಿ ಕರೆಸಿಕೊಳ್ಳುತ್ತಿದೆ ಎಂದು ಅವರು ತಿಳಿಸುತ್ತಾರೆ.

ದೇವಾಲಯದ ಆಕರ್ಷಣೆ: ಉತ್ತನಹಳ್ಳಿ ಮಾರಮ್ಮನ ದೇವಾಲಯ ತುಂಬಾ ಪ್ರಸಿದ್ಧಿಯನ್ನು ಪಡೆದಿದ್ದು, ದೇವಾಲಯವು ಗ್ರಾಮದ ಸಮೀಪ, ಬೆಟ್ಟದ ತಪ್ಪಲಿನಲ್ಲಿ ಬೆಟ್ಟದ ಸ್ವರೂಪದಂತೆಯೇ ಇದೆ. ದೇವಾಲಯದ ಎರಡು ಕಡೆ ಪ್ರವೇಶ ದ್ವಾರಗಳಿವೆ. ಒಂದು ಕಡೆಯ ಪ್ರವೇಶ ದ್ವಾರವು ನೂರೊಂದು ಮೆಟ್ಟಿಲುಗಳನ್ನು ಒಳಗೊಂಡಿದೆ. ಮೂರ್ತಿಯ ಮಂಟಪದ ಸುತ್ತಲು ಸುತ್ತಣ ಗೋಡೆಯಿಂದ ಆವೃತಗೊಂಡಿದ್ದು, ಗೋಪುರವನ್ನು ಒಳಗೊಂಡಿದೆ. ಒಳಾಂಗಣದಲ್ಲಿ ಮಾರಮ್ಮನ ಬಲಗಡೆ ಶಿವನ ದೇವಾಲಯ, ಮಾರಮ್ಮನ ದೇವಾಲಯವನ್ನು ಹೊಂದಿಕೊಂಡಂತೆ ಭೈರವೇಶ್ವರ, ಸಿದ್ದೇಶ್ವರ ದೇವಾಲಯಗಳಿವೆ. ಇದೇ ದೇವಾಲಯದಲ್ಲಿ ಸಿಂಹಾದ್ರಿ ಸಿಂಹ, ಸೇವಂತಿಗೆ ಸೇವಂತಿಗೆಯಂತಹ ಶ್ರೇಷ್ಠ ಸಿನಿಮಾಗಳಲ್ಲಿ ಗ್ರಾಮದ ಜೀವಾಳವನ್ನು ಸೆರೆ ಹಿಡಿದು ಜಗದ ಮನಸ್ಸುಗಳಿಗೆ ಹತ್ತಿರವಾಗಿಸುವ ಪ್ರಯತ್ನ ಸಾಗಿದೆ.

ಜಾತ್ರಾ ಮಹೋತ್ಸವದ ಅಂಗವಾಗಿ ಹೊಸ ನೀರು, ಕಣ್ಣ ಕನ್ನಡಿ, ಬಾಯಿ ಬೀಗ, ಮಡೆ ಹುಯ್ಯುವುದು ಮುಂತಾದ ಧಾರ್ಮಿಕ ಕಾರ್ಯಗಳು ನೆರವೇರಲಿವೆ. ಈ ಜಾತ್ರೆಯಲ್ಲಿ ಹೊರ ಜಿಲ್ಲೆಯ ಸಾವಿರಾರು ಮಂದಿ ಪಾಲ್ಗೊಳ್ಳಲಿದ್ದಾರೆ.

ಮಕ್ಕಳ ಚಿತ್ರಕಥೆ

'ಸ್ವಲ್ಪ ನೀರು ಕೊಡು...!'


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199



ಒಬ್ಬ ಯುವಕನು ಮಾತೃ ಋಣವನ್ನು ತೀರಿಸಲೆಂದು ಒಂದು ಲಕ್ಷ ಬಂಗಾರದ ನಾಣ್ಯಗಳನ್ನು ಸೇರಿಸಿ ತಾಯಿಗೆ ಕೊಟ್ಟು "ಅಮ್ಮ ಈ ಬಂಗಾರದ ನಾಣ್ಯಗಳಿಂದ ನಿನಗೆ ಇಷ್ಟವಾದುದನ್ನು ಮಾಡಿಸಿಕೊ... ಇದರಿಂದ ನನಗೆ ತಾಯಿಯ ಋಣದಿಂದ ಮುಕ್ತಿ ಸಿಗುತ್ತದೆ.!" ಎನ್ನುತ್ತಾನೆ.



ತಾಯಿ ಮುಗುಳ್ನಗುತ್ತಾ "ಮಗೂ....ನನ್ನ ಋಣ ತೀರಿಸಲು ಈ ಹಣ ನನಗೆ ಬೇಡ... ನೀನು ಒಂದು ದಿನ ರಾತ್ರಿ ನನ್ನ ಬಳಿ ಮಲಗಿಕೋ ಸಾಕು...! ಎನ್ನುತ್ತಾಳೆ. ಅದಕ್ಕೊಪ್ಪಿ ಮಗನು ತಾಯಿಯ ಮಂಚದ ಬಳಿ ಮಲಗುತ್ತಾನೆ. ಮಗನು ನಿದ್ರೆಗೆ ಜಾರುತ್ತಾನೆ. ಸ್ವಲ್ಪ ಸಮಯದ ನಂತರ ತಾಯಿಯು "ಮಗನೇ ನನಗೆ ದಾಹ ಆಗುತ್ತಿದೆ ಸ್ವಲ್ಪ ನೀರು ಕೊಡು...!" ಎಂದು ಕೇಳುತ್ತಾಳೆ.



ಮಗನು ಸಂತೋಷದಿಂದ ಎದ್ದು ನೀರು ಕೊಡುತ್ತಾನೆ. ತಾಯಿ ಎರಡು ಗುಟುಕು ನೀರನ್ನು ಕುಡಿದು ಇಡುವಾಗ ಲೋಟ ಪಕ್ಕಕ್ಕೆ ಜಾರಿ ಬೀಳುತ್ತದೆ. ಮಗನು ಮೌನದಿಂದ ಮಲಗುತ್ತಾನೆ. ಮತ್ತೆ ಮಗನು ನಿದ್ರೆಗೆ ಜಾರಲು ತಾಯಿ ಮತ್ತೆ ಎದ್ದು, "ಸ್ವಲ್ಪ ನೀರು ಕೊಡು...!" ಎಂದು ಕೇಳುತ್ತಾಳೆ. ಮಗನು ಮತ್ತೆ ಎದ್ದು ನೀರು ಕೊಡಲು ತಾಯಿ ಮತ್ತೆ ನೀರು ಚೆಲ್ಲಿ ಹಾಸಿಗೆಯೆಲ್ಲಾ ಒದ್ದೆಯಾಗುತ್ತದೆ. ಮಗ, ತಾಯಿಯನ್ನು "ಏನು ಮಾಡಿದೆಯಮ್ಮಾ......?" ಎಂದು ಪ್ರಶ್ನಿಸಿದ. ಅದಕ್ಕೆ ತಾಯಿಯು "ಅಕಸ್ಮಾತ್ ಆಗಿ ಆಯಿತು ಮಗೂ...!" ಎಂದಳು.




ಮತ್ತೆ ಸ್ವಲ್ಪ ಸಮಯದ ನಂತರ ತಾಯಿಯು ನೀರು ಕೇಳಿದಳು. ಅದಕ್ಕೆ ಮಗ ಕೋಪಿತನಾಗಿ "ಈಗ ತಾನೆ ನೀರು ಕುಡಿದೆಯಲ್ಲಾ....? ಮತ್ತೆ ಎಷ್ಟು ನೀರು ಕುಡಿಯುವೆ...? ನೀನೇನಾದರು ಹತ್ತಿ ಬೀಜವನ್ನು ತಿಂದೆಯಾ...?" ಎಂದು ಗದರಿಸುತ್ತಾ ನೀರನ್ನು ಕೊಟ್ಟ. ಮತ್ತೆ ತಾಯಿಯು ನೀರು ಕುಡಿಯುವಾಗ ಹಾಸಿಗೆ ಮೇಲೆಲ್ಲಾ ಚೆಲ್ಲಿ ಹೋಗುತ್ತದೆ. ಮಗನಿಗೆ ಕೋಪ ಬಂದು "ಏನಮ್ಮ... ಹಾಸಿಗೆಯೆಲ್ಲಾ ಒದ್ದೆ ಮಾಡಿಕೊಂಡೆಯಲ್ಲಾ... ಕಣ್ಣು ಕಾಣಿಸುವುದಿಲ್ಲವೇ...?" ಎಂದು ರೇಗಿದನು. ಸ್ವಲ್ಪ ಸಮಯದ ನಂತರ ತಾಯಿಯು ಮತ್ತೆ ನೀರನ್ನು ಕೇಳಿದಳು. ಅದಕ್ಕೆ ಮಗನು ನೀರನ್ನು ತಂದುಕೊಟ್ಟು "ಕುಡಿದು ಸಾಯಿ....!" ಎಂದು ಶಪಿಸುತ್ತಾ ಕೂಗಾಡಿದ.



ಆಗ ತಾಯಿಯು "ಮಗೂ.... ಸಾಕು...! ಅರಚಬೇಡ... ನೀನು ತಾಯಿಯ ಋಣ ತೀರಿಸಬೇಕೆಂದು ಹೇಳಿದೆ... ನಿನ್ನ ತಲೆಯ ಮೇಲೆ ಎಷ್ಟು ಕೂದಲು ಇದೆಯೋ ಅಷ್ಟು ಜನ್ಮ ಎತ್ತಿದರೂ ತಾಯಿ ಋಣ ತೀರಿಸಲು ಆಗುವುದಿಲ್ಲಾ...! ನೀನು ಚಿಕ್ಕವನಾಗಿದ್ದಾಗ ಮತ್ತೆ ಮತ್ತೆ ಮೂತ್ರ ಮಾಡುತ್ತಿದ್ದೆ. ಆಗ ನಿನ್ನ ಒದ್ದೆ ಬಟ್ಟೆಯನ್ನು ತೆಗೆದು ನನ್ನ ಸೀರೆಯಿಂದ ಒರೆಸಿ ನಿನ್ನನ್ನು ನನ್ನ ಜಾಗದಲ್ಲಿ ಮಲಗಿಸಿ, ನಾನು ನಿನ್ನ ಜಾಗದಲ್ಲಿ ಮಲಗುತ್ತಿದ್ದೆ.



ಒಂದು ದಿನವಲ್ಲ... ಒಂದು ವಾರವಲ್ಲ....ಒಂದು ತಿಂಗಳಲ್ಲ... ಕೆಲವು ವರ್ಷಗಳೇ ನಿನ್ನನ್ನು ಹೀಗೆ ಒಬ್ಬಂಟಿಯಾಗಿ ಮಲಗುವವರೆಗೂ ಬೆಳೆಸಿರುವೆ....ಆದರೆ ನಾನು ಒಂದೆರಡು ಸಲ ಹಾಸಿಗೆ ಒದ್ದೆ ಮಾಡಿದ್ದಕ್ಕೆ ಬೇಸರವಾಗಿ ಬಿಟ್ಟೆಯಲ್ಲಾ...?" ಎಂದು ತಾಯಿ ಕೇಳಿದಳು. ಆಗ ಮಗನಿಗೆ ಮುಜುಗರವಾಗಿ ತಾಯಿಯ ಪಾದಗಳಿಗೆ ನಮಸ್ಕರಿಸಿ "ಅಮ್ಮಾ...ನನ್ನ ಕಣ್ಣು ತೆರೆಸಿದೆ... ನನ್ನನ್ನು ಕ್ಷಮಿಸು...!" ಎಂದನು. ತಾಯಿ ತನ್ನ ಮಕ್ಕಳನ್ನು ಬೆಳೆಸಲು ಎಷ್ಟು ಕಷ್ಟಪಡುವಳೆಂದು ಅರಿವಾಯಿತು. ಈ ಲೋಕದಲ್ಲಿ ಯಾರೇ ಆದರೂ ತಾಯಿಯ ಋಣ ತೀರಿಸಲು ಸಾಧ್ಯವಿಲ್ಲ. "ಮಾತೃದೇವೋಭವ".



ವಾರಭವಿಷ್ಯ

16.02.2025 ರಿಂದ 22.02.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಕುಂಭ, ಚಂದ್ರ-ಕನ್ಯಾ, ತುಲಾ, ವೃಶ್ಚಿಕ, ಕುಜ-ಮಿಥುನ, ಬುಧ-ಕುಂಭ, ಗುರು-ವೃಷಭ, ಶುಕ್ರ-ಮೀನ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದ ಆದಿಗೆ ವ್ಯಾಪಾರ-ವ್ಯವಹಾರಗಳು ಚುರುಕಾಗಿ ಸಾಗುವುದು. ಹೋಟೆಲ್, ಬೇಕರಿ ಉದ್ಯಮದವರಿಗೆ ಉತ್ತಮ ಲಾಭವಾಗುವುದು. ಪತ್ರ ಬರಹಗಾರರಿಗೆ ಹೆಚ್ಚಿನ ಕಕ್ಷಿಗಾರರಿಂದ ಉತ್ತಮ ಗಳಿಕೆಯಾಗುವುದು. ಮಹಿಳಾ ಮಣಿಯರು ವಸ್ತ್ರಾಲಂಕಾರಗಳಿಗೆ ಹೆಚ್ಚಿನ ಹಣ ವ್ಯಯಿಸುವರು. 'ಮಾತೇ ಮುತ್ತು' ತೂಕವಾಗಿ ಮಾತನಾಡಿ. ವಿವಾಹದ ಮಾತುಕತೆಗಳು ಮುನ್ನುಡಿ ಬರೆಯಲಿದೆ.

ಶ್ರೀ ಕಾರ್ತಿಕೇಯ ಸ್ತುತಿ. ಶುಭ ಸಂಖ್ಯೆ-4

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಪೂರ್ವ ಯೋಜಿತ ಕೆಲಸಗಳಿಗೆ ವಿಘ್ನಗಳು ಉಂಟಾದೀತು. ಕುಟುಂಬ ಸದಸ್ಯರಲ್ಲಿ ಸಾಮರಸ್ಯದ ಕೊರತೆ. ಭೋಜನದಲ್ಲಿ ವ್ಯತ್ಯಯದಿಂದ ಆರೋಗ್ಯ ಕೆಡುವುದು. ವಾರ ಮಧ್ಯಾನಂತರ ಉಚ್ಛ ಶುಕ್ರನಿಂದ ವಾಣಿಜ್ಯದ ಮೂಲಕ ಧನಲಾಭ. ಸ್ವಬುದ್ಧಿಯಿಂದ ನಡೆದರೆ ಧನಾಗಮ. ಸ್ತ್ರೀಯರ ಜೊತೆ ಸಂಭ್ರಮದ ಮಾತು. ಹಲವು ವಿದ್ಯೆಗಳನ್ನು ಕಲಿಯಲು ಪ್ರೇರಣೆ. ಬಂಧು-ಮಿತ್ರರ ಜೊತೆ ಉತ್ತಮ ಬಾಂಧವ್ಯ ವೃದ್ಧಿ.

ಶ್ರೀ ರಾಜರಾಜೇಶ್ವರಿ ಅಷ್ಟಕಪಠಿಸಿ. ಶುಭ ಸಂಖ್ಯೆ-2

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದಾರಂಭಕ್ಕೆ ನಿಮಗಾಗದವರು ಹಿಂದೆ ಸರಿಯುವರು. ಕ್ಷೀರಜನಿತ ವಸ್ತು ವ್ಯಾಪಾರಗಳಲ್ಲಿ ಹೆಚ್ಚಿನ ಧನಾದಾಯವಾಗಲಿದೆ. ಇಷ್ಟ ಮಿತ್ರರ ಮಿಲನ ಹಾಗೂ ವಿನೋದ ಗೋಷ್ಠಿ, ಕೂಟಗಳು 'ಲಕ್ಷ್ಮಣಗೆರೆ' ದಾಟದಿರಲಿ. ವಾರದ ಉತ್ತರಾರ್ಧದಲ್ಲಿ ಬುದ್ಧಿಗೆ ಜಡತ್ವ, ಹೊಸ ಉದ್ಯೋಗ ಪ್ರಾರಂಭಿಸುವಲ್ಲಿ ಹಿನ್ನಡೆ. ಕಳ್ಳ-ಕಾಕರ ಭಯ. ಅಕಾಲ ಭೋಜನದಿಂದ ಅನಾರೋಗ್ಯ ಕಾಡಿಸುವುದು, ಸದಾ ಭೀತಿ.

ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ-9

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಸಪ್ತಾಹದ ಪೂರ್ವಾರ್ಧದಲ್ಲಿ ದ್ರವ್ಯ ಲಾಭ, ಹಳೆಯ ಗೆಳೆಯರ ಮಿಲನದಿಂದ ಸಂತಸ. ಹಿಂದೆ ಮಾಡಿದ್ದ ಪುಣ್ಯ ಕೆಲಸಗಳು ಈಗ ಫಲಿಸಲಿದೆ. ಸತ್ಸಂಗದಲ್ಲಿ ಸಮಯ ಕಳೆಯುವುದರಿಂದ ಮನಸ್ಸಿಗೆ ನೆಮ್ಮದಿ-ಶಾಂತಿ ಐಷಾರಾಮಿ ವಸ್ತುಗಳು ಮನೆಗೆ ಬರುವುದು. ಉತ್ತರಾರ್ಧದಲ್ಲಿ ಪರಸ್ಥಳ ವಾಸ, ದೇಹಾಲಸ್ಯ. ಸತ್ವವಿರದ ಭೋಜನ ಸೇವನೆ. ದೇಹವು ಸೊರಗುವುದು. ರಾತ್ರಿ ಪ್ರಯಾಣಗಳನ್ನು ಸಂಪೂರ್ಣ ತ್ಯಜಿಸಿ.

ಶ್ರೀ ದೇವೀ ಮಹಾತ್ಮೆ ಪಠಿಸಿ. ಶುಭ ಸಂಖ್ಯೆ-3

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ನಿಮ್ಮ ಪರಿಸರದಲ್ಲಿರುವವರ ಜೊತೆ ಸಂಬಂಧಗಳು ಕೆಡಬಹುದು. ಆಕ್ಷನ್‌ಗೆ ರಿಯಾಕ್ಷನ್ ವಿಕೋಪಕ್ಕೆ ಹೋದೀತು. ನಿಮ್ಮದಲ್ಲದ ತಪ್ಪಿನಿಂದ ನಿಂದನೆಗೆ ಗುರಿಯಾಗುವಿರಿ. ಉತ್ತಮರ ಸಹವಾಸದಿಂದ ಜೀವನದಲ್ಲಿ ಉನ್ನತಿ ಸಾಧಿಸಲು ಅವಕಾಶವಾಗುವುದು. 'ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ' ಎಂಬ ಗಾದೆಯೇ ಇದೆ. ಈ ವಾರದಲ್ಲಿ ಗುರುಭಕ್ತಿ ಹಾಗೂ ಸ್ವಧರ್ಮಾಚರಣೆಯಲ್ಲಿ ನಿಮಗೂ, ನಿಮ್ಮ ಕುಟುಂಬಕ್ಕೂ ಶ್ರೀರಕ್ಷೆ.

ಶ್ರೀ ಗುರು ಚರಿತ್ರೆ ಓದಿ. ಶುಭ ಸಂಖ್ಯೆ-1

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಈ ವಾರ ಹಲವು ಗ್ರಹಗಳು ನಿಮಗೆ ಅನುಕೂಲ ಪ್ರಸಂಗಗಳನ್ನು ನೀಡುತ್ತಲಿವೆ. ಆಚಾರ-ವಿಚಾರಗಳನ್ನು ಪಾಲಿಸುವುದರಿಂದ ಹಾಗೂ ಸದಾಚಾರ ಸಂಪನ್ನತೆಯಿಂದ ನಿಮ್ಮ ಜೀವನ ಸ್ಥರ ಉತ್ತಮವಾಗಲಿದೆ. ಗೃಹ ನಿರ್ಮಾಣದಲ್ಲಿ ದೈವಾನುಕೂಲ ಒದಗಿ ಬರುವುದು. ಉತ್ತಮ ಸ್ತ್ರೀಯರ ಸಮಾಗಮ-ಸಂಪರ್ಕಗಳು ಉಂಟಾಗುವುದು. ಗುರುಗಳ ಭೇಟಿಯಿಂದ ಮಂತ್ರೋಪದೇಶವನ್ನು ಪಡೆಯುವಿರಿ.

ಶ್ರೀ ರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-7

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ದೇಹ ಸೌಖ್ಯ. ಮೈಮನಗಳು ಪ್ರಫುಲ್ಲವಾಗಿರುತ್ತವೆ. ಗೃಹ ಕೃತ್ಯಕ್ಕೆ ಮಿತ್ರ ಜನರ ಸಹಾಯ ಒದಗುವುದು. ದ್ರವ್ಯಲಾಭ ಹಾಗೂ ರಜತ ಪದಾರ್ಥ ಮನೆಗೆ ಬರುವುದು. ವಾರ ಮಧ್ಯಾ ನಂತರ ಶಾರೀರಿಕವಾಗಿ ಸೋಮಾರಿಗಳಾಗುವಿರಿ. ಅಪರಿಚಿತರಿಂದ ಮೋಸ ಹೋಗುವ ಸಾಧ್ಯತೆ ಇರುತ್ತದೆ. ನಿಮ್ಮ ಬ್ಯಾಂಕ್ ಖಾತಾ ವಿವರಗಳನ್ನು ಯಾರಿಗೂ ನೀಡಬೇಡಿ.

ಶ್ರೀ ನವಗ್ರಹ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-5

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ

ನಿಮ್ಮ ಸ್ವಬುದ್ಧಿಯಿಂದ ಆಸ್ತಿಪಾಸ್ತಿ ಗಳಿಸುವಿರಿ. ಧೈರ್ಯ, ಪರಾಕ್ರಮಗಳು ವೃದ್ಧಿಸುವುದು. ಶರೀರ ಪೋಷಣೆ, ಅಲಂಕಾರ ಬುದ್ಧಿ. ವಿದ್ಯಾರ್ಥಿಗಳಿಗೆ ಗುರುಜನರ ಪ್ರೀತಿ ದೊರಕುವುದು. ಎಲ್ಲರಿಂದಲೂ ಪ್ರಶಂಸಿಸಲ್ಪಡುವಿರಿ. ಕುಲಧರ್ಮ ಆಚಾರಗಳನ್ನು ಪಾಲಿಸುವುದರಿಂದ ಮನಸ್ಸಿಗೆ ಸಂತೋಷ. ಕ್ಷೀರಾನ್ನಾದಿ ಸುಖ ಭೋಜನ ಪುತ್ರರು ಎದುರಾಡುವರು. ವಾತ ಸಂಬಂಧಿರೋಗ ಕಾಡುವುದು.

ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ-8

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದ ಆದಿಗೆ ಇಷ್ಟಾರ್ಥ ಸಿದ್ಧಿ. ಹೊಸ ಉದ್ಯೋಗ ಆರಂಭಿಸಲು ಸಮಯ ಶುಭವಿದೆ. ಸ್ವಂತ ಕೆಲಸಗಳು ಅನುಕೂಲವಾಗುವುದರಿಂದ ಸಂತೋಷ. ಮಿತ್ರ ಜನರ ಭೇಟಿ, ಸಂತೋಷ ಕೂಟಗಳು ನಡೆಯುವುದು. ವಾರದ ಉತ್ತರಾರ್ಧಕ್ಕೆ ಪತ್ನಿ-ಪುತ್ರರ ವಿರೋಧ ಎದುರಿಸಬೇಕಾಗುವುದು. ನೃಪ ಚೋರಾಗ್ನಿ ಭಯ. ಸರ್ಕಾರಕ್ಕೆ ದಂಡ ಪಾವತಿ. ಪ್ರಯಾಣ ಸಮಯದಲ್ಲಿ ಅವಘಡಗಳು ಉಂಟಾಗುವುದು.

ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-6

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದಾರಂಭಕ್ಕೆ ಉದ್ಯೋಗ, ವ್ಯವಹಾರಗಳು ಚೆನ್ನಾಗಿ ನಡೆದು ಹೇರಳ ಧನ ಲಾಭವಾಗುವುದು. ಧರ್ಮ ಕಾರ್ಯಗಳಿಗೆ ಧನವ್ಯಯ. ಇದರಿಂದ ಮನಃತೃಪ್ತಿ. ಬಂಧುಗಳು ಮನೆಗೆ ಸಂತೋಷ ಸುದ್ದಿ ತರುವರು. ಚಿಂತಿಸಿದ ಕಾರ್ಯ ಸಫಲವಾಗುವುದು. ಆರೋಗ್ಯ ಮರುಕಳಿಸಿ ಆಸ್ಪತ್ರೆಯಿಂದ ಬಿಡುಗಡೆ. ರಾಹು-ಕೇತು ಶುಭರಿಲ್ಲ. ಮಾನಹಾನಿ ಮನಃಕ್ಲೇಶ. ಸಹೋದರರ ದ್ವೇಷದಿಂದ ಮಹಾಕಷ್ಟ.

ಶ್ರೀ ರಾಹು-ಕೇತು ಮಂತ್ರ ಜಪಿಸಿ. ಶುಭ ಸಂಖ್ಯೆ-3

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಆರೋಗ್ಯದಲ್ಲಿ ಸುಧಾರಣೆ. ಪುತ್ರರಿಂದ ಸುಖ ವೃದ್ಧಿ. ಮನಸ್ಸು ನಿರ್ಮಲವಾಗಿರುವುದು. ಇತರರ ನಿಂದನೆಗೆ ಕಿವಿಕೊಡುವ ಅವಶ್ಯಕತೆ ಇಲ್ಲ. ಗೋವು, ಅಶ್ವ, ಗಜಲಾಭವಾಗುವುದು. ಕೃಷಿಯಲ್ಲಿ ಅಲ್ಪ ಫಲ ದೊರೆತರೂ ಸಂತೃಪ್ತಿ. ಮನೆ-ಸೈಟು ವ್ಯವಹಾರಗಳಲ್ಲಿ ಆಶಾದಾಯಕ ಫಲವನ್ನು ಪಡೆಯುವಿರಿ. ವಾರದ ಕಡೆಗೆ ಶತ್ರು ಜನರಿಂದಲೇ ಐಶ್ವರ್ಯ ಲಾಭ. ನರದೌರ್ಬಲ್ಯ ಕಾಡುವುದು.

ಶ್ರೀ ಶನಿಚಾಲೀಸ ಪಠಿಸಿ. ಶುಭ ಸಂಖ್ಯೆ-4

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದ ಆದಿಗೆ ದೇಹ ಸೌಖ್ಯ, ಮನೋ ಹರ್ಷ, ಉತ್ತಮ ಸ್ತ್ರೀ ಸಂಗ, ಯುವಜನರಿಗೆ ಪ್ರೇಮಾಂಕುರವಾಗುವ ಸಾಧ್ಯತೆ. ಜಲಜನ್ಯ ವಸ್ತು ವ್ಯಾಪಾರದಿಂದ ಧನಲಾಭ. ಹೋಟೆಲ್, ಐಸ್ ಕ್ರೀಂ ಉದ್ಯಮದವರಿಗೆ ನಿರೀಕ್ಷೆ ಮೀರಿ ವ್ಯಾಪಾರ ಹಾಗೂ ಧನ ಸಂಚಯ. ಜನ್ಮ ರಾಹು ಕಾರಣ ಭಾರ್ಯಾಪುತ್ರರಲ್ಲಿ ಕಲಹ. ಪರಸ್ಥಳ ವಾಸ. ರೋಗಬಾಧೆ ವೈದ್ಯಕೀಯ ಖರ್ಚುಗಳು. ಅಪರಾಧವಿರದೆ ನಿಂದನೆ.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-2

ಕಾಡಂಚಿನ ಗ್ರಾಮಗಳಲ್ಲಿ ವನ್ಯಜೀವಿ-ಮಾನವ ಸಂಘರ್ಷ ತಡೆಯಲು

11.70 ಕೋಟಿ ವೆಚ್ಚದ ರೈಲ್ವೆ ಬ್ಯಾರಿಕೇಡ್ ಅಳವಡಿಕೆ

ಶಾಸಕ ದರ್ಶನ್ ಭರವಸೆ



ಓಂಕಾರ ಅರಣ್ಯ ಪ್ರದೇಶಕ್ಕೆ ಶಾಸಕ ದರ್ಶನ್ ಭೇಟಿ ನೀಡಿ ಸ್ಥಳ ಪರಿಶೀಲಿಸಿದರು.

ನಂಜನಗೂಡು, ಫೆ.15– ತಾಲೂಕಿನ ಹೆಡಿಯಾಲ ಓಂಕಾರ ವಲಯದ ಕಾಡಂಚಿನ ಗ್ರಾಮಗಳಲ್ಲಿ ವನ್ಯಜೀವಿ–ಮಾನವ ಸಂಘರ್ಷ ತಪ್ಪಿಸುವ ಸಲುವಾಗಿ 11.70 ಕೋಟಿ ವೆಚ್ಚದಲ್ಲಿ 8 ಕಿಮೀವರೆಗೆ ರೈಲ್ವೆ ಕಂಬಿ ಬ್ಯಾರಿಕೇಡ್ ಅಳವಡಿಸಲಾಗುವುದು ಎಂದು ಶಾಸಕ ದರ್ಶನ್ ತಿಳಿಸಿದರು.

ತಾಲೂಕಿನ ಓಂಕಾರ ಅರಣ್ಯ ಪ್ರದೇಶಕ್ಕೆ ಅರಣ್ಯಾಧಿಕಾರಿಗಳೊಂದಿಗೆ ಶನಿವಾರ ಭೇಟಿ ನೀಡಿ ಸ್ಥಳ ಪರಿಶೀಲಿಸಿ ನಂತರ ರೈತರೊಂದಿಗೆ ಚರ್ಚೆ ನಡೆಸಿ ಸಮಸ್ಯೆ ಆಲಿಸಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಓಂಕಾರ ಅರಣ್ಯ ವ್ಯಾಪ್ತಿಯ ಕಾಡಂಚಿನ ಗ್ರಾಮಗಳಾದ ಕೆಲ್ಲೂಪುರ, ಸಿದ್ದಯ್ಯನಹುಂಡಿ, ಮಲ್ಲಹಳ್ಳಿ, ಲಕ್ಷ್ಮಣಾಪುರ, ಹೊಸಪುರ, ದ್ಯಾಪೇಗೌಡನಪುರ ಗ್ರಾಮಗಳಲ್ಲಿ ಕಾಡಾನೆಗಳು ರೈತರ ಜಮೀನುಗಳಿಗೆ ನುಗ್ಗಿ ಫಸಲನ್ನು ನಾಶಪಡಿಸುತ್ತಿರುವ ಬಗ್ಗೆ ಹಲವು ಬಾರಿ ದೂರು ನೀಡಲಾಗಿತ್ತು. ಈ ಸಂಬಂಧ ಕಾಡಂಚಿನ ಗ್ರಾಮಗಳ ರೈತರ ಬವಣೆ ನಿವಾರಿಸುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೆ ಮನವಿ ಸಲ್ಲಿಸಲಾಗಿತ್ತು. ಕೆಲ ತಿಂಗಳ ಹಿಂದೆ ಸ್ವತಃ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಹೆಡಿಯಾಲ ಹಾಗೂ ಓಂಕಾರ ಅರಣ್ಯ ಪ್ರದೇಶಕ್ಕೆ ಭೇಟಿ ನೀಡಿ ಸಮಸ್ಯೆ ಬಗೆಹರಿಸಲು ಅನುದಾನ ನೀಡುವ ಭರವಸೆ ನೀಡಿದ್ದರು. ಸಿಎಂ ಸಿದ್ದರಾಮಯ್ಯನವರು ಈ ಭಾಗದಲ್ಲಿ ಉಳಿದಿರುವ 8 ಕಿಮೀ ವ್ಯಾಪ್ತಿಯಲ್ಲಿ ರೈಲ್ವೆ ಕಂಬಿಗಳ ಬ್ಯಾರಿಕೇಡ್ ನಿರ್ಮಿಸಲು ಅನುದಾನ ಬಿಡುಗಡೆ ಮಾಡಿದ್ದು, ಕಾಮಗಾರಿ ತ್ವರಿತವಾಗಿ ನಡೆಯಲಿದೆ. ಇದರಿಂದ ತಾಲೂಕಿನ ಮಡುವಿನಹಳ್ಳಿ, ಹಂಚೀಪುರ, ಕೆಲ್ಲೂಪುರ, ಕೊತ್ತನಹಳ್ಳಿ, ದೇಪೇಗೌಡನಪುರ, ಸಿದ್ದೇಗೌಡನ ಹುಂಡಿ, ಚನ್ನಪಟ್ಟಣ, ಕಸುವಿನಹಳ್ಳಿ ಸೇರಿದಂತೆ ಕಾಡಂಚಿನ ಗ್ರಾಮಗಳ ರೈತರಿಗೆ ಅನುಕೂಲವಾಗುವ ಜೊತೆಗೆ ಕಾಡು ಪ್ರಾಣಿ ಮತ್ತು ಮಾನವ ಸಂಘರ್ಷ ತಪ್ಪಲಿದ್ದು, ರೈತರ ಬೆಳೆ ಸಂರಕ್ಷಣೆ ಆಗಲಿದೆ ಎಂದರು.

ಹೆಡಿಯಾಲ ಅರಣ್ಯ ವ್ಯಾಪ್ತಿಯಲ್ಲಿ ಬ್ಯಾರಿಕೇಡ್ ಅಳವಡಿಸಿದ್ದರೂ, ಕಂಬಿ ಮಧ್ಯದಿಂದ ಕಾಡು ಪ್ರಾಣಿಗಳು ನುಗ್ಗಿ ರೈತರ ಫಸಲು ನಾಶಪಡಿಸುತ್ತಿರುವ ಬಗ್ಗೆ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಶಾಶ್ವತ ಪರಿಹಾರ ಕಲ್ಪಿಸಲು ಈಗಾಗಲೇ ರೈಲ್ವೆ ಕಂಬಿ ಮಧ್ಯದಲ್ಲಿ ಕಂಬಿ ಅಳವಡಿಸುವ ಕಾರ್ಯ ನಡೆಸಲಾಗಿದೆ. ಕಾಡು ಪ್ರಾಣಿಗಳ ತಡೆಗಟ್ಟಲು ನಾವು ಹೊಸ ತಾಂತ್ರಿಕತೆ ಪ್ರಯೋಗಿಸಿದರೂ ಕಾಡು ಪ್ರಾಣಿಗಳು ಅದಕ್ಕೆ ಹೊಂದಿಕೊಳ್ಳುವುದರಿಂದ ಪರೀಕ್ಷಾರ್ಥವಾಗಿ ಸುಮಾರು 1.5 ಕಿಮೀ ವ್ಯಾಪ್ತಿಯಲ್ಲಿ ರೈಲ್ವೆ ಬ್ಯಾರಿಕೇಡ್, ಮಧ್ಯದಲ್ಲೂ ಕಂಬಿ ಅಳವಡಿಸಿ ಮೆಸ್ ಅಳವಡಿಸುವ ಕಾರ್ಯ ನಡೆಸಲಾಗಿತ್ತು. ಈ ಕಾರ್ಯ ಯಶಸ್ವಿಯಾಗಿದ್ದು, ಕಾಡು ಪ್ರಾಣಿಗಳ ಹಾವಳಿ ತಪ್ಪಿದೆ. ಆದ್ದರಿಂದ ಹೊಸ ತಾಂತ್ರಿಕತೆ ಉಪಯೋಗಿಸಿ ಮಿಕ್ಕಿರುವ 8 ಕಿಮೀ ವ್ಯಾಪ್ತಿಯಲ್ಲಿ ಬ್ಯಾರಿಕೇಡ್ ಅಳವಡಿಕೆ ಕಾಮಗಾರಿ ಮುಗಿದರೆ ನಮ್ಮ ವ್ಯಾಪ್ತಿಯಲ್ಲಿ ಬ್ಯಾರಿಕೇಡ್ ಅಳವಡಿಸುವ ಕಾರ್ಯ ಪೂರ್ಣಗೊಳ್ಳಲಿದೆ. ಈ ಯೋಜನೆ ಸಕಾರಗೊಳಿಸಿದ ಸಿಎಂ ಸಿದ್ದರಾಮಯ್ಯ, ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೆ ತಾಲೂಕಿನ ರೈತರ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸುರೇಶ್ ಮಾತನಾಡಿ, ಅರಣ್ಯ ಭೂಮಿ ಸಾಕಷ್ಟು ಒತ್ತುವರಿಯಾಗಿದ್ದು ತೆರವುಗೊಳಿಸಿದ ನಂತರ ಕಾಮಗಾರಿ ಕೈಗೊಳ್ಳಲಾಗುವುದು ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು ಅರಣ್ಯ ಭೂಮಿ ಒತ್ತುವರಿ ತೆರವುಗೊಳಿಸಲು ಕಂದಾಯ ಮತ್ತು ಅರಣ್ಯ ಇಲಾಖೆ ಜಂಟಿ ಸರ್ವೇ ಕಾರ್ಯ ನಡೆಸಬೇಕಾಗುತ್ತದೆ. ಅದು ಸಾಕಷ್ಟು ವಿಳಂಬವಾಗುವುದರಿಂದ ರೈತರಿಗೆ ತೊಂದರೆಯಾಗುತ್ತದೆ. ಈಗ ರೈತರ ಬೆಳೆ ಸಂರಕ್ಷಿಸಲು ಮತ್ತು ಕಾಡು ಪ್ರಾಣಿಗಳ ಹಾವಳಿ ತಪ್ಪಿಸಲು ತ್ವರಿತಗತಿಯಲ್ಲಿ ರೈಲ್ವೆ ಬ್ಯಾರಿಕೇಡ್ ಅಳವಡಿಸುವ ಕಾಮಗಾರಿ ಆರಂಭಿಸಿ ಎಂದು ಸೂಚಿಸಿದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಮಾರುತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಮುಖಂಡರಾದ ಜೈಶಂಕರ್, ವಲಯ ಅರಣ್ಯಾಧಿಕಾರಿಗಳಾದ ಸತೀಶ್ ಕುಮಾರ್, ನಿತಿನ್ ಕುಮಾರ್, ಉಪಸ್ಥಿತರಿದ್ದರು.

ಜೀತ ವಿಮುಕ್ತರಿಗೆ ಅನುದಾನ ನೀಡುತ್ತಿಲ್ಲ: ಆರೋಪ



ಸುದ್ದಿಗೋಷ್ಠಿಯಲ್ಲಿ ಮಹಾದೇವ ಮಾತನಾಡಿದರು.

ಹೆಚ್.ಡಿ.ಕೋಟೆ, ಫೆ.15– ರಾಜ್ಯದಲ್ಲಿ 7 ಸಾವಿರ ಮಂದಿ ಜೀತ ವಿಮುಕ್ತರಿದ್ದು, ಅವರಿಗೆ ಯಾವುದೇ ಅನುದಾನ ನೀಡುತ್ತಿಲ್ಲ ಎಂದು ಕರ್ನಾಟಕ ಜೀತದಾಳು ಮತ್ತು ಕೃಷಿ ಕಾರ್ಮಿಕರ ಒಕ್ಕೂಟದ ರಾಜ್ಯಾಧ್ಯಕ್ಷ ಮಹಾದೇವ ಆರೋಪಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಓಪಿ ನಿಯಮದಡಿ ಜೀತವಿಮುಕ್ತರಿಗೆ 7200 ರೂ.ಗಳಂತೆ ಮಾಸಾಶನ ನೀಡಬೇಕು. ಪುನರ್ವಸತಿ ಕಲ್ಪಿಸಬೇಕು ಎಂಬ ನಿಯಮವಿದ್ದರೂ ಸಹ ಅದನ್ನು ಸರ್ಕಾರಗಾಳಿಗೆ ತೂರಿದೆ ಎಂದು ದೂರಿದರು.

ತಾಲೂಕಿನಲ್ಲಿ 2001 ರಿಂದ 2012 ರವರೆಗೆ 753 ಜೀತದಾಳುಗಳನ್ನು ಬಿಡುಗಡೆ ಮಾಡಿ ತಲಾ 20 ಸಾವಿರ ಪರಿಹಾರ ಮತ್ತು 7200 ರೂ. ಮಾಸಾಶನ ನೀಡಿರುತ್ತಾರೆ. 2014ರಿಂದ 2024ರವರೆಗೆ 258 ಜೀತದಾಳುಗಳನ್ನು ಬಿಡುಗಡೆ ಮಾಡಿ 163 ಜನರಿಗೆ ತಲಾ ಒಂದು ಸಾವಿರ ರೂ. ತಾತ್ಕಾಲಿಕ ಪರಿಹಾರ ಹಾಗೂ 95 ಜನರಿಗೆ 5 ಸಾವಿರ ರೂ.ಗಳ ತಾತ್ಕಾಲಿಕ ಪರಿಹಾರ ನೀಡಿದ್ದಾರೆ. ಆದರೆ 35 ಮಂದಿಗೆ ತಾತ್ಕಾಲಿಕ ಪರಿಹಾರ ನೀಡಿಲ್ಲ. 49 ಮಂದಿಗೆ ಮಾಸಾಶನ ನೀಡಿಲ್ಲ. ಸಂಪೂರ್ಣವಾಗಿ 258 ಮಂದಿಗೆ ಪರಿಹಾರ ಕಲ್ಪಿಸಿಲ್ಲ. 550 ಮಂದಿಗೆ ಮನೆ ಮಂಜೂರು ಮಾಡಿಲ್ಲ. ಇದನ್ನೆಲ್ಲ ಪ್ರಶ್ನಿಸಿದರೆ ಹಣ ಇಲ್ಲ ಎಂಬ ಉತ್ತರ ಕೇಳಿ ಬರುತ್ತಿದೆ ಇನ್ನಾದರೂ 2025–26ನೇ ಸಾಲಿನ ಬಜೆಟ್‌ನಲ್ಲಿ ಸರ್ಕಾರ ಇವರಿಗಾಗಿ 500 ಕೋಟಿ ಹಣ ಮೀಸಲಿಡಬೇಕು ಎಂದು ಒತ್ತಾಯಿಸಿದರು.

ಮೇಲಿನ ಎಲ್ಲಾ ಒತ್ತಾಯಗಳನ್ನು ಈಡೇರಿಸುವಂತೆ ಫೆ.18 ರಂದು ಪಟ್ಟಣದ ಅಂಬೇಡ್ಕರ್ ಭವನದಿಂದ ತಾಲೂಕು ಕಚೇರಿಯವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಗೋಷ್ಠಿಯಲ್ಲಿ ಒಕ್ಕೂಟದ ಮಾಜಿ ಅಧ್ಯಕ್ಷ ಶಿವಣ್ಣ, ಒಕ್ಕೂಟದ ಪದಾಧಿಕಾರಿಗಳಾದ ಮಂಜುನಾಥ್, ಮಲ್ಲಿಗಮ್ಮ, ಪುಟ್ಟರಾಜಯ್ಯ, ಗೋಪಾಲ್, ಜೀವಿಕಾ ಉಮೇಶ್, ಜೀವಿಕಾ ಬಸವರಾಜು, ಚಂದ್ರಶೇಖರ ಮೂರ್ತಿ ಇದ್ದರು.

ಸುಸಜ್ಜಿತ ಕ್ರೀಡಾಂಗಣ ನಿರ್ಮಾಣಕ್ಕೆ ಆಗ್ರಹಿಸಿ

ಇಂದು ಬೃಹತ್ ಮ್ಯಾರಥಾನ್ ಮೂಲಕ ಹೋರಾಟ



ತಿ.ನರಸೀಪುರದಲ್ಲಿ ಕ್ರೀಡಾಂಗಣ ಹೋರಾಟ ಸಮಿತಿ ಪದಾಧಿಕಾರಿಗಳ ಸಭೆ ನಡೆಯಿತು.

ತಿ.ನರಸೀಪುರ, ಫೆ.15– ತಾಲೂಕು ಕೇಂದ್ರದಲ್ಲಿ ಸುಸಜ್ಜಿತ ಕ್ರೀಡಾಂಗಣ ನಿರ್ಮಾಣಕ್ಕೆ ಆಗ್ರಹಿಸಿ ಪ್ರಗತಿಪರ ಸಂಘಟನೆಗಳು ಸೇರಿದಂತೆ ನಾಗರಿಕರು, ಶಾಲಾ ಕಾಲೇಜು ವಿದ್ಯಾರ್ಥಿಗಳು, ಕ್ರೀಡಾಪಟುಗಳು ಹಾಗೂ ಕ್ರೀಡಾ ಪ್ರೇಮಿಗಳ ಕ್ರೀಡಾಂಗಣ ಹೋರಾಟ ಸಮಿತಿಯಿಂದ ಪಟ್ಟಣದಲ್ಲಿ ಫೆ.16ರಂದು ಬೃಹತ್ ಮ್ಯಾರಥಾನ್ ಮೂಲಕ ಹೋರಾಟ ಹಮ್ಮಿಕೊಳ್ಳಲಾಗಿದೆ.

ಹೋರಾಟದ ರೂಪುರೇಷೆ ಅಂತಿಮಗೊಳಿಸಲು ಪಟ್ಟಣದ ಕಬಿನಿ ಅತಿಥಿ ಗೃಹದ ಆವರಣದಲ್ಲಿ 2ನೇ ಹಂತದ ಪೂರ್ವ ಸಿದ್ಧತಾ ಸಭೆ ನಡೆಸಿದ ಕ್ರೀಡಾಂಗಣ ಹೋರಾಟ ಸಮಿತಿ ಪದಾಧಿಕಾರಿಗಳು ಭಾನುವಾರ ಬೆಳಗ್ಗೆ 10.30ಕ್ಕೆ ವಿದ್ಯೋದಯ ಕಾಲೇಜು ವೃತ್ತದಿಂದ ಬೃಹತ್ ಮ್ಯಾರಥಾನ್ ನಡಿಗೆ ಹೋರಾಟ ಆರಂಭಗೊಳ್ಳಲಿದ್ದು, ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ತಾಲೂಕು ಆಡಳಿತಸೌಧ ಆವರಣ ತಲುಪಲಿದೆ. ಸರ್ಕಾರ ಹಾಗೂ ಜನಪ್ರತಿನಿಧಿಗಳ ಗಮನ ಸೆಳೆದು ಕ್ರೀಡಾಂಗಣ ನಿರ್ಮಾಣ ಜರುರಾಗಿ ಆಗಲೇಬೇಕೆಂದು ಪಟ್ಟು ಹಿಡಿದಿರುವ ಹೋರಾಟ ಸಮಿತಿ ಪದಾಧಿಕಾರಿಗಳು ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ಹೋರಾಟದ ಯಶಸ್ಸಿಗೆ ಎಲ್ಲರ ಬೆಂಬಲ ಕೋರಿದ್ದಾರೆ.

ಹೋರಾಟ ಸಮಿತಿ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ಕ್ರೀಡಾಂಗಣ ನಿರ್ಮಾಣಕ್ಕೆ ಮಂಜೂರಾಗಿರುವ ಸ್ಥಳದಲ್ಲಿನ ಕಾನೂನಾತ್ಮಕ ಸಮಸ್ಯೆ ಬಗೆಹರಿಸಿ ಕ್ರೀಡಾಂಗಣ ನಿರ್ಮಿಸಬೇಕು. ಮುಖ್ಯಮಂತ್ರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿ ಮಾಡಿ ಕಳೆದ ಒಂದು ದಶಕದಿಂದ ಕ್ರೀಡಾಂಗಣಕ್ಕಾಗಿ ಹೋರಾಟ ಮಾಡಿದ ಫಲವಾಗಿ ಈಗಾಗಲೇ ಸ್ಥಳ ಮಂಜೂರಾಗಿದೆ. ಆದರೆ ಅದು ಕಾರ್ಯರೂಪಕ್ಕೆ ಬಾರದಿರುವುದು ಅತ್ಯಂತ ನೋವಿನ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ಕ್ರೀಡಾಂಗಣ ಕಾಮಗಾರಿ ಆರಂಭವಾಗದಿರುವುದು ಕ್ರೀಡಾಪಟು ಮತ್ತು ಕ್ರೀಡಾ ಪ್ರೇಮಿಗಳನ್ನು ಆತಂಕಕ್ಕೀಡು ಮಾಡಿದೆ. ಹಾಗಾಗಿ ತಾಲೂಕಿನ ಜನತೆಯ ಬೆಂಬಲದೊಂದಿಗೆ ಸರ್ಕಾರದ ಗಮನ ಸೆಳೆಯಲು ಫೆ16 ರಂದು ಮ್ಯಾರಥಾನ್ ನಡಿಗೆಯ ಮೂಲಕ ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸಲು ತೀರ್ಮಾನಿಸಲಾಗಿದೆ. ಪಟ್ಟಣ ಸೇರಿದಂತೆ ತಾಲೂಕಿನ ಎಲ್ಲಾ ಕ್ರೀಡಾಪಟುಗಳು, ಕ್ರೀಡಾಭಿಮಾನಿಗಳು ಮ್ಯಾರಥಾನ್‌ನಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಸೇವಾಶ್ರಯ ಫೌಂಡೇಶನ್ ಟ್ರಸ್ಟ್ ಅಧ್ಯಕ್ಷ ಆರ್.ಮಣಿಕಂಠ ರಾಜ್‌ಗೌಡ ಮಾತನಾಡಿದರು. ಸಭೆಯಲ್ಲಿ ಹೋರಾಟ ಸಮಿತಿ ಅಧ್ಯಕ್ಷ ಎಂ.ರಮೇಶ್, ನಾಗರಿಕ ಸೇವಾ ವೇದಿಕೆ ಅಧ್ಯಕ್ಷ ಹೆಚ್.ಆರೀಫ್, ದೈಹಿಕ ಶಿಕ್ಷಕರಾದ ಆರ್.ಎಸ್.ಬಸವರಾಜು, ಜಯಪ್ಪ ಬನ್ನೂರು ಸಿದ್ದೇಶ್, ಪುಟ್ಟರಾಜು, ಉಪನ್ಯಾಸಕ ಕುಮಾರಸ್ವಾಮಿ, ಪುರಸಭಾ ಸದಸ್ಯ ಮಂಜುನಾಥ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಎನ್. ಲಿಂಗಪ್ಪಾಜಿ, ಮುಖಂಡರಾದ ರಘು, ಬಾಲು, ಚೇತನ್ ರಂಗನಾಥ್, ಕಿರಗಸೂರು ಮಹದೇವ ಸ್ವಾಮಿ, ಕಬ್ಬು ಬೆಳೆಗಾರರ ಸಂಘದ ಕುರುಬೂರು ಸಿದ್ದೇಶ್, ವೆಂಕಟೇಶ್, ಶಿವು, ನಾಗರಾಜ್ ಮೂರ್ತಿ ಹಾಗೂ ಇತರರಿದ್ದರು.

ಅಲೆಮಾರಿ ಕುಟುಂಬಗಳು ಸಮಾಜದ ಮುಖ್ಯ ವಾಹಿನಿಗೆ ಬರಲಿ

ತಹಸೀಲ್ದಾರ್ ಮಂಜುನಾಥ್



ನಿರ್ಗತಿಕ ಅಲೆಮಾರಿಗಳ ಕುಂದು ಕೊರತೆ ಸಭೆಯನ್ನು ತಹಸೀಲ್ದಾರ್ ಮಂಜುನಾಥ್ ಉದ್ಘಾಟಿಸಿದರು. ಚಿತ್ರದಲ್ಲಿ ನಿಂಗರಾಜ್ ಮಲ್ಲಾಡಿ ಇತರರು ಇದ್ದಾರೆ.

ಹುಣಸೂರು, ಫೆ.15– ಹುಟ್ಟು–ಸಾವುಗಳಿಗೆ ಸರಿಯಾದ ದಾಖಲೆಗಳಿಲ್ಲದೆ ಪಾಳು ಮಂಟಪಗಳಲ್ಲಿ ಸಂಕಷ್ಟದ ಜೀವನ ಸಾಗಿಸುತ್ತಿರುವ ನಿರ್ಗತಿಕ ಅಲೆಮಾರಿ ಕುಟುಂಬಗಳು ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ತಹಸೀಲ್ದಾರ್ ಮಂಜುನಾಥ್ ತಿಳಿಸಿದರು.

ತಾಲೂಕು ಗೋವಿಂದನಹಳ್ಳಿ ಗ್ರಾಪಂ ವ್ಯಾಪ್ತಿಯ ಬಾಚಳ್ಳಿ ರಸ್ತೆಯ ಅಂಬೇಡ್ಕರ್ ನಗರದಲ್ಲಿ ದಸಂಸ ವತಿಯಿಂದ ಆಯೋಜಿಸಿದ್ದ ನಿರ್ಗತಿಕ ಅಲೆಮಾರಿಗಳ ಕುಂದು ಕೊರತೆ ಸಭೆಯಲ್ಲಿ ಮಾತನಾಡಿದ ಅವರು, ಹಲವು ವರ್ಷಗಳಿಂದ ಪ.ಜಾತಿ, ಪಂಗಡ, ಹಿಂದುಳಿದ ವರ್ಗಕ್ಕೆ ಸೇರಿದ ನಿರ್ಗತಿಕ ಅಲೆಮಾರಿ ಕುಟುಂಬಗಳು ವಾಸಿಸಲು ಸರಿಯಾದ ನೆಲೆ ಇಲ್ಲದೆ ಬದುಕನ್ನು ಸಾಗಿಸುತ್ತಿದ್ದಾರೆ. ಇಂತಹ ಸೌಲಭ್ಯ ವಂಚಿತ ಅಲೆಮಾರಿ ಕುಟುಂಬಗಳ ಪುನರ್ವಸತಿಗೆ ಅಧಿಕಾರಿಗಳು ಇಚ್ಛಾಶಕ್ತಿಯಿಂದ ಕೆಲಸ ಮಾಡಬೇಕಾಗಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯದಂತೆ ಅಲೆಮಾರಿ ನಿರ್ಗತಿಕ ಕುಟುಂಬಗಳು ಎಷ್ಟೇ ಕಷ್ಟವಿದ್ದರೂ, ಮಕ್ಕಳನ್ನು ಶಾಲೆಗೆ ಸೇರಿಸಿ ವಿದ್ಯಾವಂತರನ್ನಾಗಿ ಮಾಡಿ ಅವರು ಸರ್ಕಾರಿ ಉದ್ಯೋಗ ಪಡೆದು ಸಮಾಜದ ಮುಖ್ಯವಾಹಿನಿಗೆ ಬರುವಂತಹ ಕೆಲಸ ಮಾಡಬೇಕು ಎಂದರು.

ದಸಂಸ ಮುಖಂಡ ನಿಂಗರಾಜ್ ಮಲ್ಲಾಡಿ ಮತ್ತು ಸ್ನೇಹಿತರು ನಿರ್ಗತಿಕ ಅಲೆಮಾರಿ ಸಮುದಾಯಗಳನ್ನು ಗುರುತಿಸಿ ಅವರಿಗೆ ನೆಲೆಗಳನ್ನು ಕಲ್ಪಿಸಿ ಬದುಕು ಕಟ್ಟಿಕೊಡುವ ಕೆಲಸ ಮಾಡುತ್ತಿದ್ದಾರೆ. ಅದರಂತೆ ಅಂಬೇಡ್ಕರ್ ನಗರದ ಪ.ಜಾತಿಗೆ ಸೇರಿದ 33 ದೊಂಬರ ಕುಟುಂಬ, 34 ಆದಿವಾಸಿ ಕುಟುಂಬಗಳಿಗೆ ನೆಲೆ ಕಲ್ಪಿಸಿ 94ಸಿ ಯೋಜನೆಯಡಿ ಹಕ್ಕುಪತ್ರಗಳನ್ನು ಕೊಡಿಸಿ ಹಂತ ಹಂತವಾಗಿ ಮೂಲ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಶ್ರಮಿಸುತ್ತಿರುವುದು ಶ್ಲಾಘನೀಯ ಎಂದರು.

ದಸಂಸ ಮನವಿ ಮೇರೆಗೆ ಗ್ರಾಮಕ್ಕೆ 1 ಎಕರೆ ಸ್ಮಶಾನ ಜಾಗ ಮಂಜೂರು ಮಾಡುವಂತೆ ಕಂದಾಯ ಇಲಾಖೆಗೆ ವಹಿಸಲಾಗಿದೆ. 94ಸಿ ಯೋಜನೆಯಡಿ ಇನ್ನು ಕೆಲವು ಕುಟುಂಬಗಳಿಗೆ ಹಕ್ಕು ಪತ್ರ ಕೊಡಲು ಸರ್ಕಾರದಿಂದ ಸೂಚನೆ ಬಂದ ತಕ್ಷಣ ಹಕ್ಕು ಪತ್ರ ಕೊಡಲು ಕ್ರಮ ವಹಿಸಲಾಗುವುದು ಎಂದರು.

ದಸಂಸ ಜಿಲ್ಲಾ ಸಂಚಾಲಕ ನಿಂಗರಾಜ್ ಮಲ್ಲಾಡಿ ಮಾತನಾಡಿ, ದಸಂಸ ನೊಂದವರು, ಹಸಿದವರು, ಬೀದಿಯಲ್ಲಿ ಬಿದ್ದ ಜನರ ಕಷ್ಟಗಳಿಗೆ ಸ್ಪಂದಿಸುತ್ತಾ ಯಾವುದೇ ಜಾತಿ, ಧರ್ಮದ ಭೇದವಿಲ್ಲದೆ ಹಲವು ವರ್ಷಗಳಿಂದ ಹೋರಾಟ ಮಾಡುತ್ತಿದೆ. ಅದರಂತೆ ಅಂಬೇಡ್ಕರ್ ನಗರದ ನಿರ್ಗತಿಕ ಬಡ ಕುಟುಂಬಗಳ ಸಮಸ್ಯೆಗಳನ್ನು ಅಧಿಕಾರಿಗಳ ಗಮನಕ್ಕೆ ತಂದು ಪರಿಹರಿಸಿ ಬಡ ಕುಟುಂಬಗಳು ನೆಮ್ಮದಿಯಿಂದ ಬದುಕುವಂತೆ ಮಾಡಲು ಶ್ರಮಿಸುತ್ತಿದೆ. ಇಲ್ಲಿನ 23 ಆದಿವಾಸಿ ಕುಟುಂಬಗಳಿಗೆ ಗಿರಿಜನ ಕಲ್ಯಾಣ ಇಲಾಖೆಯಿಂದ ಪೌಷ್ಠಿಕ ಆಹಾರ ಮಂಜೂರು ಮಾಡಬೇಕು. 33 ನಿರ್ಗತಿಕ ಅಲೆಮಾರಿ ಕುಟುಂಬಗಳಿಗೆ ಅಲೆಮಾರಿ ಅಭಿವೃದ್ಧಿ ನಿಗಮದಿಂದ ವಾಸಿಸಲು ಮನೆಗಳನ್ನು ಕಲ್ಪಿಸಬೇಕು ಎಂಬುದು ಸೇರಿದಂತೆ ಇನ್ನಿತರ ಬೇಡಿಕೆಗಳನ್ನು ಸಲ್ಲಿಸಿದರು.

ತಾಪಂ ಇಓ ಹೊಂಗಯ್ಯ ಮಾತನಾಡಿದರು. ಈ ವೇಳೆ ಗಿರಿಜನ ಕಲ್ಯಾಣಾಧಿಕಾರಿ ಗಂಗಾಧರ್, ಸಮಾಜ ಕಲ್ಯಾಣ ಇಲಾಖೆ ವ್ಯವಸ್ಥಾಪಕ ದಿಲೀಪ್, ಪ್ರಸಾದ್, ಸಬ್‌ಇನ್‌ಸ್ಪೆಕ್ಟರ್ ನಾಗಯ್ಯ, ಪಿಡಿಓ ರಾಜ್‌ಕುಮಾರ್, ಗ್ರಾಪಂ ಅಧ್ಯಕ್ಷೆ ರಾಣಿ, ಕಾರ್ಯದರ್ಶಿ ಮಹೇಶ, ಬಿಲ್ ಕಲೆಕ್ಟರ್ ಲೋಕೇಶ, ಸದಸ್ಯರಾದ ಕಮಲಮ್ಮ, ನಂದೀಶ, ಕೆಇಬಿ ಅಧಿಕಾರಿಗಳು, ದೇವೇಂದ್ರ, ಗಜೇಂದ್ರ, ರಾಜು, ಅಂಬೇಡ್ಕರ್ ನಗರದ ಮುಖಂಡರಾದ ಶೇಖರ, ಹರೀಶ, ವಸಂತ, ವೇಣುಗೋಪಾಲ, ಮುರುಗೇಶ, ಶೋಭಾ, ಗಾಯಿತ್ರಿ ಇನ್ನಿತರರಿದ್ದರು.

ಶ್ರೀಮಹಾ ಗಣಪತಿ ದೇವಾಲಯದ ವಾರ್ಷಿಕೋತ್ಸವ



ಸರಗೂರಲ್ಲಿ ಶ್ರೀಮಹಾ ಗಣಪತಿ ದೇವಾಲಯದ ವಾರ್ಷಿಕೋತ್ಸವ ನಡೆಯಿತು.

ಸರಗೂರು, ಫೆ.15– ಪಟ್ಟಣದ ಮಹಾವೀರ ಸರ್ಕಲ್‌ನಲ್ಲಿರುವ ಶ್ರೀಮಹಾ ಗಣಪತಿ ದೇವಾಲಯದ 4ನೇ ವರ್ಷದ ವಾರ್ಷಿಕೋತ್ಸವ ಶನಿವಾರ ವಿಜೃಂಭಣೆಯಿಂದ ನೆರವೇರಿತು.

ವಾರ್ಷಿಕೋತ್ಸವ ಅಂಗವಾಗಿ ದೇವಾಲಯವನ್ನು ತಳಿರು ತೋರಣ, ಬಣ್ಣ ಬಣ್ಣದ ರಂಗೋಲಿ, ವಿದ್ಯುತ್ ದೀಪಗಳಿಂದ ಸಿಂಗರಿಸಲಾಗಿತ್ತು. ಮುಂಜಾನೆಯಿಂದಲೇ ದೇವಾಲಯದಲ್ಲಿ ಗಣಪತಿ ಹೋಮ ಪುಣ್ಯಾಹ, ಕಳಸ ಪ್ರತಿಷ್ಠಾಪನೆ, ನವಗ್ರಹ ಹೋಮ, ದುರ್ಗಾ ಹೋಮ, ಕುಂಕುಮಾರ್ಚನೆ ಸೇರಿದಂತೆ ವಿಶೇಷ ಧಾರ್ಮಿಕ ಪೂಜಾ ಕೈಂಕರ್ಯಗಳು ನೆರವೇರಿದವು. ಬಳಿಕ ದೇವರನ್ನು ವಿವಿಧ ಪುಷ್ಪಗಳಿಂದ ಅಲಂಕರಿಸಿ ಮಂಗಳವಾದ್ಯ, ಸತ್ತಿಗೆ, ವೀರಗಾಸೆಯೊಂದಿಗೆ ಮೆರವಣಿಗೆ ನಡೆಸಿ ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಈ ವೇಳೆ ಪ್ರಧಾನ ಅರ್ಚಕರಾದ ಸೋಮಶೇಖರ್, ಶಿವಕುಮಾರ್, ಸತೀಶ್ ಕುಮಾರ್, ಗಾಣಿಗ ಸಮುದಾಯ ಸೇವಾಭಿವೃದ್ಧಿ ಟ್ರಸ್ಟ್‌ನ ಪದಾಧಿಕಾರಿಗಳು ಸೇರಿದಂತೆ ಇತರರಿದ್ದರು. ಭಕ್ತರಿಗೆ ಅನ್ನದಾನ ಏರ್ಪಡಿಸಲಾಗಿತ್ತು

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ



ಬೆಟ್ಟದಪುರ, ಫೆ.15– ಪಿರಿಯಾಪಟ್ಟಣ ತಾಲೂಕಿನ ಗಂಗನಕುಪ್ಪೆ, ಕೆ.ಬಸವನಹಳ್ಳಿ, ಸೂಳೆಕೋಟೆ, ಶಾನುಭೋಗನಹಳ್ಳಿ, ಲಕ್ಷ್ಮಿಪುರ, ಆವರ್ತಿ, ಅಂಬ್ಲಾರೆ, ಹಾರನಹಳ್ಳಿ ಗ್ರಾಮಗಳಲ್ಲಿ ರಸ್ತೆ, ಚರಂಡಿ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸಚಿವ ಕೆ.ವೆಂಕಟೇಶ್ ಗುದ್ದಲಿ ಪೂಜೆ ನೆರವೇರಿಸಿದರು.

ಸಚಿವ ಕೆ.ವೆಂಕಟೇಶ್ ಮಾತನಾಡಿ, ಈ ಬಾರಿ ಬೇಸಿಗೆಯಲ್ಲಿ ವಿದ್ಯುತ್ ಅಭಾವ ಇರುವುದಿಲ್ಲ. ಹೀಗಾಗಿ ವಿದ್ಯುತ್ ಇಲಾಖೆ ನಿಗದಿಪಡಿಸಿರುವ ವೇಳೆಯಲ್ಲಿ 7 ಗಂಟೆಗಳ ಕಾಲ ನಿರಂತರ ವಿದ್ಯುತ್ ನೀಡಬೇಕು. ಅಕ್ರಮವಾಗಿ ವಿದ್ಯುತ್ ಪಡೆದಿರುವ ರೈತರು ಹೆಚ್ಚುವರಿ ಟ್ರಾನ್ಸ್‌ಫಾರ್ಮರ್‌ಗೆ ಸರ್ಕಾರಕ್ಕೆ ಹಣ ಕಟ್ಟಿ ನೋಂದಣಿ ಮಾಡಿಸಿಕೊಳ್ಳಬೇಕು ಎಂದರು.

ಅಭಿವೃದ್ಧಿ ಕಾರ್ಯಗಳಿಗೆ ಸಾಕಷ್ಟು ಹಣವಿದ್ದು ಸರ್ಕಾರ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ನಿಲ್ಲಿಸುವುದಿಲ್ಲ. ತಾಲೂಕನ್ನು ಮಾದರಿ ತಾಲೂಕನ್ನಾಗಿ ಮಾಡುವುದು ನಮ್ಮ ಅಭಿಲಾಷೆ ಎಂದರು.

ಈ ವೇಳೆ ತಾಲೂಕು ಆಶ್ರಯ ಸಮಿತಿ ಹಾಗೂ ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ನಿತಿನ್ ವೆಂಕಟೇಶ್, ಮುಖಂಡರಾದ ರಹಮತ್ ಜಾನ್ ಬಾಬು, ಆವರ್ತಿ ಗ್ರಾಪಂ ಸದಸ್ಯ ಎಂ.ಬಿ.ಶಿವಕುಮಾರ್, ಮಾಜಿ ಉಪಾಧ್ಯಕ್ಷ ಧನರಾಜ್, ಜಿಪಂ ಮಾಜಿ ಸದಸ್ಯ ಶೇಖರ್, ದೊಡ್ಡಕಮರಹಳ್ಳಿ ಗ್ರಾಪಂ ಅಧ್ಯಕ್ಷ ಪುಟ್ಟಸ್ವಾಮಿ, ಮಾಜಿ ಉಪಾಧ್ಯಕ್ಷ ದೇವೇಂದ್ರಪ್ಪ, ತಾಪಂ ಮೇಲ್ವಿಚಾರಣಾ ಸಮಿತಿ ನಾಮ ನಿರ್ದೇಶನ ಸದಸ್ಯ ಲಕ್ಷ್ಮೀನಾರಾಯಣ, ಯಶೋಧರ್, ತಾಪಂ ಇಓ ಸುನಿಲ್ ಕುಮಾರ್, ಕೃಷಿ ಇಲಾಖೆಯ ಪ್ರಸಾದ್, ಜಿಪಂ ಎಇಇ ಮಲ್ಲಿಕಾರ್ಜುನ್, ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಕೃಷ್ಣೇಗೌಡ, ಲೋಕೋಪಯೋಗಿ ಇಲಾಖೆಯ ದಿನೇಶ್, ಕುಮಾರ್, ತೋಟಗಾರಿಕೆ ಇಲಾಖೆಯ ಪ್ರಸಾದ್, ಮಮತಾ, ಶಾಸಕರ ಆಪ್ತ ಕಾರ್ಯದರ್ಶಿ ಮಹೇಂದ್ರ, ಪುರಸಭಾ ಸದಸ್ಯರಾದ ಮಹದೇವ್, ಎಪಿಎಂಸಿ ಅಧ್ಯಕ್ಷ ಶಂಕ್ರಪ್ಪ ಸುರೇಶ್, ಹರೀಶ್, ಭೀಮಣ್ಣ ಎಪಿಎಂಸಿ ಮಾಜಿ ಅಧ್ಯಕ್ಷ ಜಯಚಂದ್ರ ಸುಮಿತ್, ಬೆಟ್ಟದಪುರ, ಬೈಲುಕುಪ್ಪೆ ಪೊಲೀಸರು ಹಾಜರಿದ್ದರು.

ಲೋಕಾಯುಕ್ತ ಬಲೆಗೆ ಬೆಟ್ಟದಪುರ ಎಸ್‌ಐ



ಶಿವಶಂಕರ್

ಬೆಟ್ಟದಪುರ, ಫೆ.15– ಪ್ರಕರಣದ ಇತ್ಯರ್ಥಕ್ಕಾಗಿ ಹಣಕ್ಕೆ ಬೇಡಿಕೆ ಇಟ್ಟಿದ್ದ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಠಾಣೆ ಸಬ್ ಇನ್‌ಸ್ಪೆಕ್ಟರ್ ಶಿವಶಂಕರ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಜಪ್ತಿ ಮಾಡಿದ್ದ ಮೊಬೈಲ್ ವಾಪಸ್ ಕೊಡುವ ಹಾಗೂ ಕೊಲೆ ಯತ್ನ ಪ್ರಕರಣವೊಂದರಲ್ಲಿ ಒಬ್ಬರ ಪರ ಅನುಕೂಲ ಮಾಡಿಕೊಡುವ ಸಂಬಂಧ ಶಿವಶಂಕರ್ 80 ಸಾವಿರ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಸಂಬಂಧ ವಕೀಲರೊಬ್ಬರ ದೂರಿನ ಮೇರೆಗೆ ಲೋಕಾಯುಕ್ತ ಇನ್‌ಸ್ಪೆಕ್ಟರ್‌ಗಳಾದ ಅಶೋಕ್ ಕುಮಾರ್, ರವಿ ಕುಮಾರ್ ನೇತೃತ್ವದ ತಂಡ ಶುಕ್ರವಾರ ರಾತ್ರಿ ಠಾಣೆಗೆ ದಾಳಿ ನಡೆಸಿ ಲಂಚದ ಹಣ ಪಡೆಯುವಾಗ ಎಸ್‌ಐಯನ್ನು ಬಂಧಿಸಿ ಹಣ ವಶಪಡಿಸಿಕೊಂಡು ನ್ಯಾಯಾಲಯಕ್ಕೆ ಹಾಜರು ಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಹಬ್ಬನಕುಪ್ಪೆಯಲ್ಲಿ ಅಗ್ನಿ ಆಕಸ್ಮಿಕಗಳ ಕುರಿತು ಜಾಗೃತಿ



ಅಗ್ನಿಶಾಮಕ ಇಲಾಖೆ ಸಹಯೋಗದೊಂದಿಗೆ ಅಗ್ನಿ ಆಕಸ್ಮಿಕಗಳ ಬಗ್ಗೆ ಜಾಗೃತಿ ಮತ್ತು ಪ್ರಾತ್ಯಕ್ಷಿಕೆ ನಡೆಯಿತು.

ಹುಣಸೂರು ಫೆ.15– ಪಟ್ಟಣದ ಜ್ಞಾನಧಾರ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ಹೆಬ್ಬನಕುಪ್ಪೆಯಲ್ಲಿ ನಡೆದ ಎನ್‌ಎಸ್‌ಎಸ್ ವಿಶೇಷ ವಾರ್ಷಿಕ ಶಿಬಿರದಲ್ಲಿ ಅಗ್ನಿಶಾಮಕ ಇಲಾಖೆ ಸಹಯೋಗದೊಂದಿಗೆ ಅಗ್ನಿ ಆಕಸ್ಮಿಕಗಳ ಬಗ್ಗೆ ಜಾಗೃತಿ ಮತ್ತು ಪ್ರಾತ್ಯಕ್ಷಿಕೆ ನಡೆಯಿತು.

ಅಗ್ನಿಶಾಮಕ ಸಿಬ್ಬಂದಿ ವಿನಯ್ ಕುಮಾರ್ ಬೆಂಕಿಯ ವಿಧ ಹಾಗೂ ಅವುಗಳನ್ನು ನಂದಿಸುವ ಕ್ರಮಗಳು ಮತ್ತು ಅಗ್ನಿ ದುರಂತವಾದಾಗ ನಾವು ಮಾಡಬೇಕಾದ ಮೊದಲ ಕಾರ್ಯವೇನು ಎಂಬುದನ್ನು ಸವಿವರವಾಗಿ ವಿವರಿಸಿದರು.

ಅಗ್ನಿಶಾಮಕ ಠಾಣಾಧಿಕಾರಿ ಎಂ.ಮಹದೇವ್ ಹಾಗೂ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ಕೆ.ಸಿ.ಸತೀಶ್ ವಿದ್ಯಾರ್ಥಿಗಳಿಗೆ ಸಿಬ್ಬಂದಿಗಳಗೂಡಿ ಅಗ್ನಿ ನಂದಿಸುವ ಪ್ರಾತ್ಯಕ್ಷಿಕೆ ತಿಳಿಸಿಕೊಟ್ಟರು. ಈ ವೇಳೆ ಮಹೇಶ್, ಸ್ವಾಮಿಗೌಡ, ಗಣೇಶ್, ರಾಮಣ್ಣ, ಸತೀಶ್, ಶಿವರುದ್ರಣ್ಣ, ಗ್ರಾಮಸ್ಥರು, ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

ವಚನಗಳು ಮನುಷ್ಯನ ಆದರ್ಶ ಬದುಕಿಗೆ ದಾರಿದೀಪ

ನಿವೃತ್ತ ನ್ಯಾಯಾಧೀಶ ಅರಳಿ ನಾಗರಾಜ್



ಕಾರ್ಯಕ್ರಮದಲ್ಲಿ ಖೋ ಖೋ ವಿಶ್ವಕಪ್ ಆಟಗಾರ್ತಿ ಬಿ.ಚೈತ್ರಾ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಫೆ.15– ವಚನಗಳು ಮನುಷ್ಯನ ಆದರ್ಶ ಬದುಕಿಗೆ ದಾರಿದೀಪ ಎಂದು ನಿವೃತ್ತ ನ್ಯಾಯಾಧೀಶ ಅರಳಿ ನಾಗರಾಜ್ ತಿಳಿಸಿದರು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಮೈಸೂರು, ತಾಲೂಕು ಶರಣ ಸಾಹಿತ್ಯ ಪರಿಷತ್ತು, ತಿ.ನ.ಪುರ ಹಾಗೂ ಗ್ರಾಮ ವಿದ್ಯೋದಯ ಸಂಘ ಇವರ ಸಹಯೋಗದಲ್ಲಿ ಶನಿವಾರ ವಿದ್ಯೋದಯ ಕಾಲೇಜು ಸಭಾಂಗಣದಲ್ಲಿ ನಡೆದ ದತ್ತಿ ಉಪನ್ಯಾಸ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಹೆತ್ತ ತಂದೆ–ತಾಯಿ, ವಿದ್ಯೆ ಕಲಿಸಿದ ಗುರುಗಳು ಸರಿಯಾದ ಮಾರ್ಗದರ್ಶನ ನೀಡುತ್ತಾರೋ ಗೊತ್ತಿಲ್ಲ ಆದರೆ ಉತ್ತಮ, ಆದರ್ಶ ಬದುಕಿಗೆ ದಾರಿ ಮಾಡಿಕೊಡುವುದರಿಂದ ವಚನಗಳನ್ನು ಪ್ರತಿಯೊಬ್ಬರು ಕಲಿತು ಸಂದರ್ಭ ಬಂದಾಗ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಮಕ್ಕಳು ಸಂಸ್ಕಾರವಂತರಾಗಬೇಕು. ತಂದೆ–ತಾಯಿ, ಗುರು ಹಿರಿಯರನ್ನು ಗೌರವಿಸಬೇಕು. ಬಸವಣ್ಣ ತಮ್ಮ ವಚನಗಳಲ್ಲಿ ಬಹಿರಂಗ ಶುದ್ಧಿಗೆ ನೀಡಿದಷ್ಟೇ ಪ್ರಾಧಾನ್ಯತೆಯನ್ನು ಅಂತರಂಗ ಶುದ್ಧಿಗೂ ನೀಡಿದ್ದರು. ವಚನಗಳ ಆದರ್ಶಗಳನ್ನು ಜನರು ಮೈಗೂಡಿಸಿಕೊಳ್ಳುವ ಮೂಲಕ ಸಾತ್ವಿಕ ಬದುಕು ಕಟ್ಟಿಕೊಳ್ಳಬಹುದಾಗಿದೆ ಎಂದು ಸಲಹೆ ನೀಡಿದರು.

ಖೋಖೋ ವಿಶ್ವಕಪ್ ಆಟಗಾರ್ತಿ ಚೈತ್ರಾ ಅವರನ್ನು ಸನ್ಮಾನಿಸಿ ಮಾತನಾಡಿದ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ಬಸವಾದಿ ಶರಣರು ತಮ್ಮ ವಚನ ಸಾಹಿತ್ಯದಲ್ಲಿ ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆ ಕೊಟ್ಟು ಕನ್ನಡ ಭಾಷೆಯ ಹಿರಿಮೆ ಗರಿಮೆ ಹೆಚ್ಚಿಸಿದರು. ಶರಣರು ತಮ್ಮ ವಚನಗಳ ಮೂಲಕ ಸರಳ ಜೀವನ ಮೌಲ್ಯ, ವೈಚಾರಿಕ ಬದುಕು, ಮೌಢ್ಯಗಳ ಧಿಕ್ಕಾರ ಹರಡಿದರು ಎಂದರು.

ಅರ್ಜುನ, ಏಕಲವ್ಯ ಪ್ರಶಸ್ತಿ ನೀಡಲಿ: ಖೋಖೋ ವಿಶ್ವಕಪ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ನಮ್ಮ ತಾಲೂಕಿನ ಹೆಮ್ಮೆಯ ಕುವರಿ ಚೈತ್ರಾ ಅವರಿಗೆ ರಾಜ್ಯ ಸರ್ಕಾರ 5 ಲಕ್ಷ ರೂ. ನೀಡಿರುವುದು ಸರಿಯಲ್ಲ. ಮಹಾರಾಷ್ಟ್ರ ಸರ್ಕಾರವು ಅಲ್ಲಿನ ಕ್ರೀಡಾಪಟುಗಳಿಗೆ 2.25 ಕೋಟಿ ರೂ. ಹಾಗೂ ಮಧ್ಯ ಪ್ರದೇಶ ಸರ್ಕಾರ 1.50 ಕೋಟಿ ರೂ.ಗಳನ್ನು ಕೊಟ್ಟು ಸಾಧನೆಗೆ ಪ್ರೋತ್ಸಾಹ ನೀಡಿದೆ. ಆದರೆ ರಾಜ್ಯ ಸರ್ಕಾರ ಮಾತ್ರ ಕ್ರೀಡಾಪಟುಗಳಿಗೆ ಉತ್ತೇಜನ ನೀಡುತ್ತಿಲ್ಲ. ಇಂತಹ ವ್ಯವಸ್ಥೆಯಲ್ಲಿ ಕ್ರೀಡಾಪಟುಗಳು ಸಾಧನೆ ಮಾಡುವುದಾದರು ಹೇಗೆ ಎಂದು ಪ್ರಶ್ನಿಸಿದ ಅವರು ಕೇಂದ್ರ ಸರ್ಕಾರ ಅರ್ಜುನ ಹಾಗೂ ರಾಜ್ಯ ಸರ್ಕಾರ ಅಭಿಮನ್ಯು ಪ್ರಶಸ್ತಿಯನ್ನು ಚೈತ್ರಾ ಅವರಿಗೆ ನೀಡಿ ಗೌರವಿಸಬೇಕೆಂದು ಒತ್ತಾಯಿಸಿದರು.

ವಾಟಾಳು ಮಠದ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದರು. ಇದೇ ವೇಳೆ ಪಿಕಾರ್ಡ್ ಬ್ಯಾಂಕ್ ನಿರ್ದೇಶಕರಾಗಿ ಆಯ್ಕೆಯಾದ ಮಾಡ್ರಹಳ್ಳಿ ಎಂ.ಶಿವಮೂರ್ತಿ, ಎನ್.ಎನ್.ಮಹದೇವಸ್ವಾಮಿ ಹಾಗೂ ಮಹೇಶ್ ಅವರನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ವಿದ್ಯೋದಯ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ, ಶರಣ ಸಾಹಿತ್ಯ ಪರಿಷತ್ ನಿಕಟ ಪೂರ್ವ ಅಧ್ಯಕ್ಷ ಚಂದ್ರಶೇಖರ್, ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸೋಮಶೇಖರಪ್ಪ, ಉಪಾಧ್ಯಕ್ಷ ಮಹದೇವಸ್ವಾಮಿ, ವೀರಶೈವ ಮಹಾಸಭಾದ ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್, ಬಿಜೆಪಿ ಅಧ್ಯಕ್ಷ ಸತ್ಯಪ್ಪ, ಬೆನಕನಹಳ್ಳಿ ಪ್ರಭುಸ್ವಾಮಿ, ಕುಮಾರಸ್ವಾಮಿ, ರಾಜಶೇಖರ್, ಅಡಿಟರ್ ಮಂಜುನಾಥ್, ಬಸವ ಬಳಗದ ಅಧ್ಯಕ್ಷ ಪರಮೇಶ್ ಪಟೇಲ್, ಸೀಹಳ್ಳಿ ಗುರುಮೂರ್ತಿ, ಮೆಡಿಕಲ್ ಕುಮಾರ್, ಕೆಇಬಿ ನಿವೃತ್ತ ನೌಕರ ಸಿದ್ದಲಿಂಗಸ್ವಾಮಿ ಮತ್ತಿತರಿದ್ದರು.

> ಶಿಕ್ಷಣ ಊಟ ಇದ್ದಂತೆ, ಕ್ರೀಡೆ ಉಪ್ಪಿನ ಕಾಯಿ ಇದ್ದಂತೆ. ಹಾಗಾಗಿ ಶಿಕ್ಷಣದೊಂದಿಗೆ ಕ್ರೀಡೆಯಲ್ಲೂ ವಿದ್ಯಾರ್ಥಿಗಳು ತೊಡಗಿಕೊಂಡು ಯಶಸ್ಸು ಸಾಧಿಸಬೇಕು. ಬರೀ ಕ್ರೀಡೆ ಮಾತ್ರವೇ ಅಲ್ಲದೇ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಪ್ರತಿಭೆ ಅನಾವರಣ ಮಾಡಬೇಕಿದೆ. ಜೀವನದಲ್ಲಿ ಸೋಲು–ಗೆಲುವು ಎಂಬುದು ಆಟದ ತರಹ. ಗೆದ್ದವರಿಗೆ ಮತ್ತೆ ಸೋಲಬಾರದೆಂಬ ಛಲವಿದ್ದರೆ, ಸೋತವರಿಗೆ ಗೆಲ್ಲಲೇ ಬೇಕೆಂಬ ಛಲವಿರುತ್ತೆ. ನಾನೂ ಕೂಡ ಸೋತು ಸೋತು ನಂತರ ಗೆದ್ದು ವಿಶ್ವಕಪ್‌ನಲ್ಲಿ ಯಶಸ್ಸು ಗಳಿಸಿದ್ದೇನೆ. ಸತತ ಪ್ರಯತ್ನದಿಂದ ಗೆಲುವು ಸಾಧ್ಯ.
> – ಬಿ.ಚೈತ್ರಾ ಖೋಖೋ ವಿಶ್ವಕಪ್ ಆಟಗಾರ್ತಿ.

ನೀರಿನ ಹೊಂಡಕ್ಕೆ ಬಿದ್ದು ಮಗು ಸಾವು



ಹುಣಸೂರು, ಫೆ.15– ನೀರಿನ ಹೊಂಡಕ್ಕೆ ಬಿದ್ದು ಮಗು ಸಾವನ್ನಪ್ಪಿರುವ ಘಟನೆ ತಾಲೂಕಿನ ಮೂಡಲಕೊಪ್ಪಲು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಮಂಜೇಗೌಡ ಹಾಗೂ ಪ್ರೀತಿ ದಂಪತಿ ಪುತ್ರಿ ಪ್ರತೀಕ್ಷಾ(6) ಸಾವನ್ನಪ್ಪಿದ ಮಗು. ಶುಕ್ರವಾರ ಮಧ್ಯಾಹ್ನ ಸಸಿಗೆ ನೀರು ಹಾಕಲು ತೆಗೆದಿದ್ದ ಗುಂಡಿಗೆ ಬಿದ್ದು ಸಾವನ್ನಪ್ಪಿದೆ. ಹೀಗಾಗಿ ಮಕ್ಕಳನ್ನು ನೀರಿನ ಹೊಂಡ, ತೊಟ್ಟಿಗಳಿಂದ ದೂರ ಇರುವಂತೆ ಸುರಕ್ಷಿತವಾಗಿ ನೋಡಿಕೊಳ್ಳುವಂತೆ ಗ್ರಾಮದ ಚಂದ್ರೇಗೌಡ ಮನವಿ ಮಾಡಿದ್ದು, ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಡೆಯಿತು.

ಮೈಸೂರು ಮಿತ್ರ

ಸಂಸತ್‌ನಲ್ಲಿ ಕನ್ನಡ ಡಿಂಡಿಮ ಬಾರಿಸಬೇಕಿದೆ

●ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ್ ಬಿಳಿಮಲೆ ಅಭಿಮತ ●ರಾಜ್ಯದ ಎಲ್ಲಾ ವಿವಿಗಳು ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸುವ ಅವಶ್ಯಕತೆಯಿದೆ●ಮೈಸೂರು ವಿವಿ ಲೋಗೋ ಬಗ್ಗೆ ಆಕ್ಷೇಪ; ಕುಲಪತಿಗಳ ಸಮರ್ಥನೆ ●ಮೈಸೂರು ವಿವಿಯಲ್ಲಿ ಕನ್ನಡ ಸಂಘ ಪ್ರಸ್ತಾಪಕ್ಕೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯೇ ಉತ್ತರ!

ಮೈಸೂರು, ಫೆ.15(ಎಸ್‌ಪಿಎನ್)– ಸಂಸತ್‌ನಲ್ಲಿ ಕನ್ನಡಿಗರ ಪರ ಗಟ್ಟಿ ದನಿಯಲ್ಲಿ ಮಾತನಾಡುವ ಜನಪ್ರತಿನಿಧಿಗಳ ಸಂಖ್ಯೆ ಹೆಚ್ಚಾಗಬೇಕಿದೆ. ರಾಜಕೀಯವಾಗಿ ಮಾತೃಭಾಷೆ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಮೈಸೂರು ವಿವಿ ಸೇರಿದಂತೆ ರಾಜ್ಯದ ಎಲ್ಲಾ ವಿವಿಗಳು ಜಾಗೃತಿ ಮೂಡಿಸಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ್ ಬಿಳಿಮಲೆ ಮನವಿ ಮಾಡಿದರು.

ಮೈಸೂರು ವಿವಿ ಕ್ರಾಫರ್ಡ್ ಭವನದಲ್ಲಿ ಮೈಸೂರು ವಿವಿ ಆಡಳಿತದಲ್ಲಿ ಕನ್ನಡ ಭಾಷೆ ಅನುಷ್ಠಾನ ಕುರಿತು ಅಧಿಕಾರಿಗಳಿಂದ ವರದಿ ಸ್ವೀಕರಿಸುವ ಸಂದರ್ಭದಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ನೂತನ ಚುನಾವಣೆ ನೀತಿ ಜಾರಿಗೆ ತರಲು ಈಗಾಗಲೇ ಕೆಲಸ ಆರಂಭಿಸಿದ್ದು, ಪ್ರಸ್ತುತ ಹಿಂದಿ ಭಾಷೆ ಮಾತನಾಡುವವರ ಸಂಖ್ಯೆ ಸುಮಾರು 250ಕ್ಕೂ ಹೆಚ್ಚು ಕ್ಷೇತ್ರ ಇದ್ದು, ಈ ಸಂಖ್ಯೆ 600ಕ್ಕೆ ಏರಿಕೆಯಾಗಬಹುದು. ಏಕೆಂದರೆ, ದಿನದಿಂದ ದಿನಕ್ಕೆ ಹಿಂದಿ ಮಾತನಾಡುವವರ ಸಂಖ್ಯೆ ಉತ್ತರ ಭಾರತದಲ್ಲಿ ಅಧಿಕವಾಗುತ್ತಿದೆ ಎಂದು ಅಂಕಿ–ಸಂಖ್ಯೆಗಳ ಸಮೇತ ಸಭೆಗೆ ವಿವರಿಸಿದರು.

ಉತ್ತರಪ್ರದೇಶದ ಈಗಿನ 80 ಸಂಸತ್ ಸ್ಥಾನಕ್ಕೆ ಬದಲಾಗಿ ಕ್ಷೇತ್ರ ಮರುವಿಂಗಡಣೆ ನಂತರ 125ಕ್ಕೂ ಹೆಚ್ಚು ಸ್ಥಾನ ಏರಿಕೆಯಾಗಬಹುದು. ತಮಿಳುನಾಡಿನಲ್ಲಿ 10ಕ್ಕೂ ಹೆಚ್ಚು ಕ್ಷೇತ್ರಗಳು ಹೆಚ್ಚಾಗಬಹುದು. ಕರ್ನಾಟಕದಲ್ಲಿ ಈಗಿನ 28 ಸಂಸದರ ಸ್ಥಾನಕ್ಕೆ 6 ಸಂಸದರ ಕ್ಷೇತ್ರ ಸೇರ್ಪಡೆಯಾಗಬಹುದು(ಈಗಿನ ಜನಸಂಖ್ಯೆ ಪ್ರಕಾರ). ಹಾಗಾಗಿ ಕನ್ನಡಿಗರು ಇನ್ನಾದರು ಕನ್ನಡ ಮಾತನಾಡುವುದನ್ನು ಸ್ವಾಭಿಮಾನದ ಸಂಕೇತವಾಗಿ ಪರಿಗಣಿಸಬೇಕು ಎಂದರು.



ಮೈಸೂರು ವಿವಿ ಆಡಳಿತದಲ್ಲಿ ಕನ್ನಡ ಭಾಷೆ ಅನುಷ್ಠಾನ ಕುರಿತು ಮಾಹಿತಿ ಪಡೆಯುವ ಸಭೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ್ ಬಿಳಿಮಲೆ ಮಾತನಾಡಿದರು.

ಇದಕ್ಕೆ ವಿಶ್ವವಿದ್ಯಾನಿಲಯದ ಪ್ರತಿಯೊಬ್ಬ ಸಾಹಿತಿಗಳು, ಕನ್ನಡ ಪರ ಹೋರಾಟಗಾರರು, ಮಹಿಳೆಯರು ಸೇರಿದಂತೆ ಇತರರು ಜನರಲ್ಲಿ ಅರಿವು ಮೂಡಿಸುವಂತೆ ಮನವಿ ಮಾಡಿದರಲ್ಲದೆ, ಜನಸಂಖ್ಯೆ ಕಡಿಮೆ ಇರುವ ರಾಜ್ಯಗಳಲ್ಲಿ ಲೋಕಸಭಾ ಸ್ಥಾನ ಕಡಿಮೆಯಾಗಬಹುದು. ಇದು ಆಯಾಯ ಭಾಷೆ ಮೇಲೆ ಪರಿಣಾಮ ಬೀರಲಿದೆ ಎಂದರಲ್ಲದೆ, ಕುವೆಂಪು ಕನ್ನಡ ಪರ ಲೇಖನ, ಕವಿತೆಗಳನ್ನು ಬರೆದು ಜನರಲ್ಲಿ ಮಾತೃಭಾಷೆ ಕುರಿತು ಜಾಗೃತಿ ಮೂಡಿಸಿದ್ದರು. ಅವರ ನಂತರ ಬಂದ ಬೇರೇ ಯಾವ ಲೇಖಕರೂ ಮಾತೃಭಾಷೆಯಲ್ಲೇ ವಿದ್ಯಾರ್ಥಿಗಳಿಗೆ ಶಿಕ್ಷಣ ಸಿಗಬೇಕು ಎಂದು ಕುವೆಂಪು ಅವರಷ್ಟು ಗಟ್ಟಿ ದನಿಯಲ್ಲಿ ಮಾತನಾಡಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ರಾಜ್ಯ ಸರ್ಕಾರ ಇಲ್ಲಿಯವರೆಗೆ ರಾಜ್ಯದಲ್ಲಿ ಕನ್ನಡ ಅನುಷ್ಠಾನಬೇಕು ಎಂದು 3 ಸಾವಿರ ಆದೇಶಗಳನ್ನು ಹೊರಡಿಸಿದೆ ಎಂದು ಸಭೆಗೆ ತಿಳಿಸಿದರು.

ವಿವಿ ಲೋಗೋ ಬದಲಾವಣೆ ಕಷ್ಟ: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಹಾನಗಲ್ಲ ಸಂತೋಷ್ ಮಾತನಾಡಿ, ಮೈಸೂರು ವಿವಿ ಸ್ಥಾಪನೆಯಾಗಿ ನೂರು ವರ್ಷ ದಾಟಿದೆ. ಆದರೆ, 1916ರಲ್ಲಿ ವಿವಿ ಸ್ಥಾಪನೆಯಾದಾಗ ದೇವನಾಗರಿ, ಇಂಗ್ಲಿಷ್ ಭಾಷೆ ಉಲ್ಲೇಖಿಸಿ ತಯಾರಿಸಿರುವ ಲೋಗೋವನ್ನೇ ಇಂದಿಗೂ ಪ್ರದರ್ಶಿಸಲಾಗುತ್ತಿದೆ. ಇದು ಎಷ್ಟು ಸರಿ ಎಂದು ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅವರನ್ನು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಕುಲಪತಿಗಳು, ಈ ಲೋಗೋವನ್ನು ಪರಿಚಯಿಸಿದ್ದು ನಾವಲ್ಲ. ಈ ಲೋಗೋ ಅಡಿ 1916ರಿಂದ ಇಲ್ಲಿಯವರೆಗೆ ಕೋಟ್ಯಾಂತರ ವಿದ್ಯಾರ್ಥಿಗಳಿಗೆ ವಾರ್ಕ್ಸ್‌ಕಾರ್ಡ್ ವಿತರಿಸಲಾಗಿದೆ. ಸುತ್ತೋಲೆಗಳನ್ನು ಹೊರಡಿಸಿವೆ. ಇದೀಗ ದಿಢೀರ್ ಲೋಗೋ ಬದಲಾಯಿಸುವಂತೆ ಮನವಿ ಮಾಡಿದರೆ ಹೇಗೆ ಸಾಧ್ಯ. ಈ ರೀತಿ ಮಾಡಿದರೆ, ಸಾರ್ವಜನಿಕವಾಗಿ ಮೈಸೂರು ವಿವಿ ಇತಿಹಾಸಕ್ಕೆ ಕಪ್ಪುಚುಕ್ಕಿ ಬರಲಿದೆ ಎಂದು ಕೆಲ ವಿದ್ವಾಂಸರ ಹೇಳಿಕೆಗಳನ್ನು ಉಲ್ಲೇಖಿಸಿ ತಿಳಿಸಿದರು.

ಕರ್ನಾಟಕ ಉದಯವಾಗುವ ಮುನ್ನ ಮೈಸೂರು ವಿವಿ ಸ್ಥಾಪನೆಯಾಗಿದೆ. ಆಗಿನ ಕಾಲದ ರಾಜಕೀಯ ಸನ್ನಿವೇಶ, ಶೈಕ್ಷಣಿಕ ವಾತಾವರಣಕ್ಕೆ ಅನುಗುಣವಾಗಿ ಮೈಸೂರು ವಿವಿ ಲೋಗೋ ಪರಿಚಯಿಸಲಾಗಿದೆ. ಇದನ್ನು ಏಕಾಏಕಿ ಬದಲಾಯಿಸಿ ಎಂದರೆ ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು. ಲೋಗೋದಲ್ಲಿ ಕನ್ನಡ ಸೇರಿಸುವಂತೆ ಇಂದಿಗೂ 150ಕ್ಕೂ ಹೆಚ್ಚು ಮನವಿ ಪತ್ರಗಳು ಕನ್ನಡ ಪರ ಹೋರಾಟಗಾರರು, ಸಾಹಿತಿಗಳಿಂದ ಬಂದಿವೆ. ಲೋಗೋ ಬದಲಾಯಿಸುವುದರಿಂದ ಅಂತರರಾಷ್ಟ್ರೀಯ ಮಟ್ಟದಲ್ಲಾಗುವ ತಾಂತ್ರಿಕ ದೋಷಗಳನ್ನು ವಿವರಿಸಿ, ಪ್ರಾಧಿಕಾರದ ಸಲಹೆಯನ್ನು, ಕುಲಪತಿಗಳು ತಿರಸ್ಕರಿಸಿದರು.

ಕನ್ನಡ ಸಂಘ ಅನಗತ್ಯ: ಮುಂದುವರೆದು, ಮೈಸೂರು ವಿವಿಯಲ್ಲಿ ಕನ್ನಡ ವಿದ್ಯಾರ್ಥಿಗಳು, ಬೋಧಕ–ಬೋಧಕೇತರ ಸಿಬ್ಬಂದಿ ಅಭ್ಯುದ್ಯಯಕ್ಕಾಗಿ ಕನ್ನಡ ಸಂಘ ಸ್ಥಾಪಿಸುವಂತೆ ಮಾಡಿದ ಮನವಿಗೂ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಸಾಧ್ಯವಿಲ್ಲ ಎಂದು ಉತ್ತರಿಸಿದರು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಕನ್ನಡಿಗರ ಅಭ್ಯುದ್ಯಯಕ್ಕಾಗಿ ಕೆಲಸ ಮಾಡುತ್ತಿದೆ. ಇದಕ್ಕೆ ಪರ್ಯಾಯವಾಗಿದೆ. ಮತ್ತೊಂದು ಸಂಸ್ಥೆ ಸ್ಥಾಪನೆ ಬೇಡ ಎಂದು ಸಭೆಯಲ್ಲಿದ್ದ ಎಲ್ಲಾ ಪ್ರಾಧ್ಯಾಪಕರು, ಪ್ರಾಧಿಕಾರದ ಅಧ್ಯಕ್ಷರಿಗೆ ಮನವರಿಕೆ ಮಾಡಿಕೊಟ್ಟರಲ್ಲದೆ, ಮೈಸೂರು ವಿವಿಯಲ್ಲಿರುವ ಅಧ್ಯಯನ ಪೀಠಗಳಿಗೆ ಕನ್ನಡಕ್ಕಾಗಿ ದುಡಿದ ಧೀಮಂತ ಸಾಧಕರ ಹೆಸರಿಟ್ಟು ಗೌರವಿಸುವಂತೆ ಮನವಿ ಮಾಡಿದರಲ್ಲದೆ, ಮೈಸೂರು ವಿವಿ ನೀಡುವ ಜಾಹೀರಾತಿನಲ್ಲಿ ಶೇ.100ರಷ್ಟು ಕನ್ನಡಕ್ಕೆ ಪ್ರಥಮ ಆದ್ಯತೆ ಇರಬೇಕು. ಹೊರಗುತ್ತಿಗೆ ಕೆಲಸಕ್ಕೆ ಸೇರಿಸಿಕೊಳ್ಳುವಾಗ ಕನ್ನಡಿಗರಿಗೆ ಪ್ರಥಮ ಆದ್ಯತೆ ಇರಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಸಭೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಟಿ.ಎಸ್.ಫಣಿರಾಜ್, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಟಿ.ಗುರುರಾಜ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್, ಕುಲಸಚಿವೆ ಎಂ.ಕೆಸವಿತಾ, ಹಣಕಾಸು ಅಧಿಕಾರಿ ಕೆ.ಎಸ್.ರೇಖಾ, ಕುಲಸಚಿವ(ಪರೀಕ್ಷಾಂಗ)ರು ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

> 2001ರ ಜನಗಣತಿ ಪ್ರಕಾರ ಕೊಡಗಿನಲ್ಲಿ ಅಂದಾಜು 2.60 ಲಕ್ಷ ಮಂದಿ ಕೊಡವ ಭಾಷೆ ಮಾತನಾಡುತ್ತಿದ್ದರು. 2011ರ ಜನಗಣತಿ ಪ್ರಕಾರ ಈ ಸಂಖ್ಯೆ ಅಂದಾಜು 1.60 ಲಕ್ಷಕ್ಕೆ ಇಳಿಯಿತು. ಇದು ವರ್ಷದಿಂದ ವರ್ಷಕ್ಕೆ ಇಳಿಮುಖವಾಗುತ್ತಿದೆ. ಕೇವಲ ಕೊಡವ ಭಾಷೆಗೆ ಸೀಮಿತವಲ್ಲ. ಮುಂದೆ ಕನ್ನಡ ಭಾಷೆ ಸೇರಿದಂತೆ ಎಲ್ಲಾ ದ್ರಾವಿಡ ಭಾಷೆಗಳಿಗೂ ಇದೇ ಪರಿಸ್ಥಿತಿ ಬರಬಹುದು.
>
> - ಪುರುಷೋತ್ತಮ್ ಬಿಳಿಮಲೆ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಚಿಂಗಾರಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಜು ಜೇಮ್ಸ್ ಬಾಂಡ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸನಮ್ ತೇರಿ ಕಸಮ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರಾಜು ಜೇಮ್ಸ್ ಬಾಂಡ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಿದ್ಲಿಂಗು–2 (ಕ)	4 ಪ್ರದರ್ಶನಗಳು
ರಾಜಕಮಲ್	
ವಿದಾಮುಯರ್ಚಿ (ತ)	4 ಪ್ರದರ್ಶನಗಳು
ಸಂಗಂ	
ಛಾವಾ (ಹಿ)	4 ಪ್ರದರ್ಶನಗಳು
ಲಿಡೋ	
ಭುವನಂ ಗಗನಂ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮ್ಯಾಕ್ಸ್ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಿದ್ದಾಮುಯರ್ಚಿ (ತ): ಬೆ.6.55ಕ್ಕೆ, ಬೆ10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ಅಧಿಪತ್ರ (ಕ): ಬೆ.10.10ಕ್ಕೆ, ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ಬಡಾಸ್ ರವಿಕುಮಾರ್ (ಹಿಂ): ರಾ.7.10ಕ್ಕೆ, ನರೇ ಅನೀಂಟಿ ಮೂನನ್‌ಮಕ್ಕಲ್ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಮಿ.ರಾಣಿ (ಕ): ಬೆ.10.30ಕ್ಕೆ, ಲವಯಪಾ (ಹಿಂ): ಮ.1.15ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಭಗೀರಥ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಅನ್‌ಲಾಕ್ ರಾಘವ (ಕ): ಬೆ.10.25ಕ್ಕೆ, ಸ್ಕೈಫೋರ್ಸ್ (ಹಿಂ): ಮ.1.20ಕ್ಕೆ, ಥಂಡೆಲ್ (ತೆ): ಸಂ.4.15ಕ್ಕೆ, ರಾ.7.20ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಛೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸರ್ಕಾರಿ ಕಚೇರಿ ಬೀಗ ಮುರಿದು ನಗದು ಕಳವು

ಮೈಸೂರು, ಫೆ.15(ಎಸ್‌ಬಿಡಿ)– ಸರ್ಕಾರಿ ಕಚೇರಿಯ ಬೀಗ ಮುರಿದು ನಗದು ಕಳವು ಮಾಡಿರುವ ಘಟನೆ ಮೈಸೂರಿನಲ್ಲಿ ನಡೆದಿದೆ.

ಮೈಸೂರು–ಬೆಂಗಳೂರು ಹೆದ್ದಾರಿ, ಭರತ್‌ನಗರದಲ್ಲಿರುವ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕಚೇರಿಗೆ ಬೀಗ ಮುರಿದು ನುಗ್ಗಿರುವ ಕಳ್ಳರು, ಟೇಬಲ್ ಲಾಕರ್‌ನಲ್ಲಿದ್ದ 18,130 ರೂ. ಹಣವನ್ನು ದೋಚಿದ್ದಾರೆ.

ಅಧಿಕಾರಿಗಳು ಗುರುವಾರ ಸಂಜೆ 6.30ಕ್ಕೆ ಕಚೇರಿಗೆ ಬೀಗ ಹಾಕಿ ತೆರಳಿದ್ದರು. ಮರುದಿನ ಬೆಳಗ್ಗೆ 10 ಗಂಟೆಗೆ ಕಚೇರಿಗೆ ಬಂದಾಗ ಬಾಗಿಲಿನ ಬೀಗ ಮುರಿದಿತ್ತು. ಒಳಹೋಗಿ ಪರಿಶೀಲಿಸಿದಾಗ ಕಡತಗಳು ಸೇರಿದಂತೆ ಕಚೇರಿಯ ವಸ್ತುಗಳೆಲ್ಲಾ ಅಸ್ತವ್ಯಸ್ತವಾಗಿದ್ದವು. ಟೇಬಲ್ ಲಾಕರ್‌ನಲ್ಲಿ ಇಟ್ಟಿದ್ದ ಹಣ ಇರಲಿಲ್ಲ. ಅಲ್ಲಿ ಸಾಲ ವಸೂಲಿ ಮಾಡಿದ 18,130 ರೂ. ಇಟ್ಟಿದ್ದವು ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕ ಬಿ.ಎನ್.ನಾಗೇಂದ್ರ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಎನ್.ಆರ್. ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.


ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆ ಆರಂಭ



ಮೈಸೂರು, ಫೆ.15(ಆರ್‌ಕೆ)– 2025ನೇ ಸಾಲಿನ ಸಿಬಿಎಸ್‌ಸಿ 10ನೇ ತರಗತಿ ಪರೀಕ್ಷೆಗಳು ಇಂದಿನಿಂದ ಆರಂಭವಾಗಿವೆ. ಮೈಸೂರಿನ 11 ಕೇಂದ್ರಗಳಲ್ಲಿ ಬೆಳಗ್ಗೆ 10.30ರಿಂದ ಮಧ್ಯಾಹ್ನ 1.30 ಗಂಟೆವರೆಗೆ ಪರೀಕ್ಷೆಗಳು ನಡೆಯುತ್ತಿವೆ. ಮೊದಲ ದಿನವಾದ ಇಂದು ಇಂಗ್ಲಿಷ್, ಫೆಬ್ರವರಿ 20ರಂದು ವಿಜ್ಞಾನ, ಫೆ.25ರಂದು ಸಾಮಾಜಿಕ ವಿಜ್ಞಾನ, ಫೆ.28ರಂದು ಹಿಂದಿ, ಮಾ.10ರಂದು ಗಣಿತಶಾಸ್ತ್ರ ಮತ್ತು ಮ್ಯಾಥಮ್ಯಾಟಿಕ್ಸ್ ಬೇಸಿಕ್ ವಿಷಯಗಳು ಪರೀಕ್ಷೆ ನಡೆಯಲಿವೆ. ದೇಶದ 8000 ಶಾಲೆಗಳಲ್ಲಿ 44 ಲಕ್ಷ ವಿದ್ಯಾರ್ಥಿಗಳು ಸಿಬಿಎಸ್‌ಇ ಬೋರ್ಡ್ ಪರೀಕ್ಷೆಗೆ ನೋಂದಣಿಯಾಗಿದ್ದು, ಕೇಂದ್ರಗಳಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಪರೀಕ್ಷಾ ಅಕ್ರಮ ನಡೆಯದಂತೆ ಕಟ್ಟೆಚ್ಚರ ವಹಿಸಲಾಗಿದೆ.

ಡಾಲಿ ಧನಂಜಯ– ಡಾ.ಧನ್ಯತಾ ಆರತಕ್ಷತೆ

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಸೇರಿ ಗಣ್ಯರಿಂದ ಶುಭ ಹಾರೈಕೆ



ಧನಂಜಯ ಹಾಗೂ ಡಾ.ಧನ್ಯತಾ ಅವರಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಶುಭಹಾರೈಸಿದರು

ಮೈಸೂರು, ಫೆ.15(ಎಸ್‌ಬಿಡಿ)– ಮೈಸೂರು ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಭಾನುವಾರ ನಡೆದ ನಟ ಡಾಲಿ ಧನಂಜಯ ಹಾಗೂ ಡಾ.ಧನ್ಯತಾ ವಿವಾಹ ಆರತಕ್ಷತೆ ಸಮಾರಂಭದಲ್ಲಿ ವಿವಿಧ ಕ್ಷೇತ್ರದ ಗಣ್ಯರು ಭಾಗವಹಿಸಿದ್ದರು. ಭಾನುವಾರ ಬೆಳಗ್ಗೆ ಧಾರಾಮಹೂರ್ತ ನೆರವೇರಲಿದ್ದು ಧನಂಜಯ–ಧನ್ಯತಾ ಸತಿ–ಪತಿಗಳಾಗಲಿದ್ದಾರೆ.

ಅದ್ಧೂರಿ ಮದುವೆಗೆ ನಿರ್ಮಿಸಿರುವ ಭವ್ಯವಾದ ಸೆಟ್‌ನಲ್ಲಿ ನಡೆದ ಆರತಕ್ಷತೆಯಲ್ಲಿ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್, ಕೇಂದ್ರ ಸಚಿವ ವಿ.ಸೋಮಣ್ಣ, ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಜಮೀರ್ ಅಹಮದ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಯದುವೀರ್, ವಿಧಾನಪರಿಷತ್ ಮಾಜಿ ಸದಸ್ಯ ಹಾಗೂ ನಿರ್ಮಾಪಕ ಸಂದೇಶ್ ನಾಗರಾಜ್, ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ, ಮಾಜಿ ಸಚಿವರಾದ ಡಾ.ಅಶ್ವಥ್ ನಾರಾಯಣ್, ಶ್ರೀರಾಮುಲು, ವಿನಯ್ ಕುಲಕರ್ಣಿ, ಸಾ.ರಾ.ಮಹೇಶ್, ಶಾಸಕ ರಾದ ಶ್ರೀವತ್ಸ, ಶಿವಲಿಂಗೇಗೌಡ, ಪ್ರದೀಪ್ ಈಶ್ವರ್ ಮಾಜಿ ಶಾಸಕರಾದ ಎಲ್.ನಾಗೇಂದ್ರ, ನಿರಂಜನ್ ಕುಮಾರ್, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವ ಸ್ವಾಮಿ, ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಸೇರಿದಂತೆ ಅನೇಕ ರಾಜಕೀಯ ನಾಯಕರು ಭಾಗವಹಿಸಿ, ವಧು–ವರರಿಗೆ ಶುಭಾಶಯ ಕೋರಿದರು. ಉಪೇಂದ್ರ ಹಾಗೂ ಪ್ರಿಯಾಂಕ ದಂಪತಿ, ಅಶ್ವಿನಿ ಪುನೀತ್ ರಾಜ್‌ಕುಮಾರ್, ನಾಗತಿಹಳ್ಳಿ ಚಂದ್ರಶೇಖರ್, ಧ್ರುವ ಸರ್ಜಾ, ಶ್ರೀಮುರುಳಿ, ನೀನಾಸಂ ಸತೀಶ್, ಅಜಯ್ ರಾವ್, ಗಿರಿಜಾ ಲೋಕೇಶ್, ಶ್ರೀನಗರ ಕಿಟ್ಟಿ, ಸಾ.ರಾ. ಗೋವಿಂದು, ಅವಿನಾಶ್–ಮಾಳವಿಕ ದಂಪತಿ, ಅಮೂಲ್ಯ–ಜಗದೀಶ್ ದಂಪತಿ, ಸಪ್ತಮಿ ಗೌಡ, ಕವಿರಾಜ್, ಪುಷ್ಪ–2 ನಿರ್ದೇಶಕ ಸುಕುಮಾರ್, ಪ್ರಥಮ್, ಸೃಜನ್ ಲೋಕೇಶ್, ಕೆ.ಮಂಜು ಸೇರಿದಂತೆ ಸಿನಿಮಾ ನಟ–ನಟಿಯರು, ನಿರ್ಮಾಪಕರು, ನಿರ್ದೇಶಕರು, ತಂತ್ರಜ್ಞರು, ಕಿರುತೆರೆ ಕಲಾವಿದರು, ಡಾಲಿ ದನಂಜಯ್ ಅಭಿಮಾನಿಗಳು ಸೇರಿದಂತೆ ಸಾವಿರಾರು ಮಂದಿ ಭಾಗವಹಿಸಿದ್ದರು. ನಟ–ನಟಿಯರನ್ನು ಕಣ್ತುಂಬಿಕೊಳ್ಳಲು ಕಲಾಭಿಮಾನಿಗಳು ಮುಗಿಬಿದ್ದಿದ್ದರಿಂದ ನೂಕುನುಗ್ಗಲು ಉಂಟಾಗಿತ್ತು ಪೊಲೀಸರು ಜನರನ್ನು ನಿಯಂತ್ರಿಸಲು ಹರಸಾಹಸ ಪಟ್ಟರು.

ಬಾರ್‌ಗಳನ್ನು ಮುಚ್ಚಲ್ಲ, ವಿವಿಗಳನ್ನು ಮುಚ್ಚುತ್ತಾರೆ!

342 ಕೋಟಿ ರೂ. ನೀಡಲು ಸರ್ಕಾರಕ್ಕೆ ಶಕ್ತಿ ಇಲ್ಲ: ವಿಪಕ್ಷ ನಾಯಕ ಆರ್ ಅಶೋಕ್ ವಾಗ್ದಾಳಿ



ಬೆಂಗಳೂರು, ಫೆ.15– ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜ್ಯಕ್ಕೆ ವಿಶ್ವವಿದ್ಯಾಲಯಗಳನ್ನು ಮುಚ್ಚುವ ಭಾಗ್ಯ ನೀಡಿದ್ದಾರೆ. ಇದರಿಂದಾಗಿ ನಮ್ಮ ರಾಜ್ಯದ ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕಾಗಿ ಪಕ್ಕದ ರಾಜ್ಯಕ್ಕೆ ವಲಸೆ ಹೋಗಬೇಕಾಗುತ್ತದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆಕ್ರೋಶ ಹೊರಹಾಕಿದರು.

ವಿಧಾನಸೌಧದಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕದಲ್ಲಿ ವಿಶ್ವವಿದ್ಯಾಲಯಗಳನ್ನು ಮುಚ್ಚಿಸುವ ಭಾಗ್ಯವನ್ನು ಕಾಂಗ್ರೆಸ್ ನೀಡಿದೆ. ಕಿಸಾನ್ ಸಮ್ಮಾನ್, ವಿದ್ಯಾನಿಧಿ ಸೇರಿದಂತೆ ಅನೇಕ ಯೋಜನೆಗಳನ್ನು ಮುಚ್ಚಿ ಹಾಕಲಾಗಿದೆ. ಈಗ 'ಮಾರಿ ಕಣ್ಣು ಹೋರಿ ಮೇಲೆ' ಎಂಬಂತೆ, ಸಿಎಂ ಸಿದ್ದರಾಮಯ್ಯನವರ ಕಣ್ಣು ವಿಶ್ವವಿದ್ಯಾಲಯಗಳ ಮೇಲೆ ಬಿದ್ದಿದೆ. ಯುವಜನರು ಪದವೀಧರರಾಗುವುದನ್ನು ತಪ್ಪಿಸಲು ಈ ರೀತಿ ಮಾಡಲಾಗಿದೆ. ಯಾರೂ ಪದವೀಧರರಾಗದೇ ಇದ್ದಲ್ಲಿ ಯುವನಿಧಿ ಯೋಜನೆಯನ್ನು ನಿಲ್ಲಿಸಬಹುದು ಎಂಬುದು ಇವರ ಚಿಂತನೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೇರೆ ರಾಜ್ಯ, ದೇಶಗಳ ವಿದ್ಯಾರ್ಥಿಗಳು ನಮ್ಮ ರಾಜ್ಯದ ವಿಶ್ವವಿದ್ಯಾಲಯಗಳಿಗೆ ಬರುತ್ತಿದ್ದಾರೆ. ಮಂಡ್ಯದ ವಿಶ್ವವಿದ್ಯಾಲಯವನ್ನು ಮುಚ್ಚಿ, ಅಮ್ಯೂಸ್‌ಮೆಂಟ್ ಪಾರ್ಕ್ ಹಾಗೂ ಜಲಕ್ರೀಡೆಗೆ ವ್ಯವಸ್ಥೆ ಮಾಡಲಾಗುತ್ತಿದೆ. ಹೆಚ್ಚು ಕನ್ನಡಿಗರು ಇರುವ ಮಂಡ್ಯದಲ್ಲೇ ಶಿಕ್ಷಣಕ್ಕೆ ಕೊಡಲಿ ಪೆಟ್ಟು ಹಾಕಲಾಗಿದೆ. ಉಪನ್ಯಾಸಕರ ನೇಮಕವಿಲ್ಲ, ಅತಿಥಿ ಉಪನ್ಯಾಸರಿಗೆ ವೇತನ ಇಲ್ಲ, ಹೊಸ ಶಿಕ್ಷಣ ನೀತಿ ಜಾರಿಯಾಗಿಲ್ಲ, ಶಾಲಾ ಕೊಠಡಿಗಳ ದುರಸ್ಥಿಗೆ ಹಣವಿಲ್ಲ, ಪಠ್ಯಪುಸ್ತಕ–ಸಮವಸ್ತ್ರ ನೀಡಲು ಕಾಸಿಲ್ಲ. ಹೊಸ ಕಾಲೇಜುಗಳನ್ನು ಎಲ್ಲೂ ಆರಂಭಿಸಿಲ್ಲ. 4 ಲಕ್ಷ ಕೋಟಿ ರೂ. ಗಾತ್ರದ ಬಜೆಟ್ ಮಂಡಿಸುವಾಗ, ಅದರಲ್ಲಿ 342 ಕೋಟಿ ರೂ. ಕೊಟ್ಟರೆ ಸಾಕು. ಇಷ್ಟು ಹಣ ಕೊಡಲಾಗದೇ ಇದ್ದಲ್ಲಿ, ಮತ್ತೇಕೆ ಬಜೆಟ್ ಮಂಡಿಸಬೇಕು. 3 ಸಾವಿರ ಬಾರ್‌ಗಳನ್ನು ಮುಚ್ಚುವುದಿಲ್ಲ. ಆದರೆ ವಿವಿಗಳನ್ನು ಮಾತ್ರ ಮುಚ್ಚಲಾಗುತ್ತಿದೆ ಎಂದರು.

ಇದರಿಂದಾಗಿ ನಮ್ಮ ರಾಜ್ಯದ ವಿದ್ಯಾರ್ಥಿಗಳು ಬೇರೆ ರಾಜ್ಯಗಳ ವಿವಿಗಳಿಗೆ ವಲಸೆ ಹೋಗುತ್ತಾರೆ. ಇಲ್ಲಿ ಪ್ರತಿಭಾವಂತರು ಸಿಗುತ್ತಾರೆ ಎಂಬ ಕಾರಣಕ್ಕೆ ಇನ್‌ವೆಸ್ಟ್ ಕರ್ನಾಟಕಕ್ಕೆ ಎಲ್ಲರೂ ಬರುತ್ತಾರೆ. ವಿದ್ಯಾರ್ಥಿಗಳೇ ಇಲ್ಲವೆಂದ ಮೇಲೆ ಯಾವ ಉದ್ಯಮಿಗಳು ಇಲ್ಲಿ ಹೂಡಿಕೆ ಮಾಡಲು ಆಸಕ್ತಿ ತೋರುತ್ತಾರೆ ಎಂದು ಪ್ರಶ್ನೆ ಮಾಡಿದರು.

ಚಾಮರಾಜನಗರ, ಕೊಪ್ಪಳ, ಮಂಡ್ಯ ಸೇರಿದಂತೆ ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಗಳನ್ನು ಮುಂದೆ ತರಲು ವಿವಿಗಳನ್ನು ಸ್ಥಾಪಿಸಲಾಗಿದೆ. ಈಗ ಈ ಜಿಲ್ಲೆಗಳ ಬಡವರು ಮಕ್ಕಳನ್ನು ಎಲ್ಲಿಗೆ ಕಳುಹಿಸಬೇಕು. ಈಗಾಗಲೇ ಮೈಕ್ರೋ ಫೈನಾನ್ಸ್ ಸಾಲ ಮಾಡಿ ಜನರು ಬಳಲಿದ್ದಾರೆ. ಈಗ ಶಿಕ್ಷಣಕ್ಕಾಗಿ ಸಾಲ ಮಾಡಿ ಬೇರೆ ಜಿಲ್ಲೆಗಳಿಗೆ ಕಳುಹಿಸಬೇಕಿದೆ. ಇನ್ನು ಆಯಾ ಜಿಲ್ಲೆಗಳ ಜನರು ರೊಚ್ಚಿಗೆದ್ದು ಸರ್ಕಾರದ ವಿರುದ್ಧ ಪ್ರತಿಭಟಿಸಲಿದ್ದಾರೆ ಎಂದರು.

ಪ್ರಗತಿಗೆ ಹಿನ್ನಡೆ: ಮಾಜಿ ಸಚಿವ, ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಮಾತನಾಡಿ, 8 ವಿಶ್ವವಿದ್ಯಾಲಯಗಳನ್ನು ಮುಚ್ಚುವ ಸರ್ಕಾರ ನಿರ್ಧಾರದಿಂದ ಪ್ರಗತಿಗೆ ಹಿನ್ನಡೆಯಾಗಲಿದೆ. ಈ ತೀರ್ಮಾನದಿಂದ ಯುವಜನರ ಶೈಕ್ಷಣಿಕ ಪ್ರಗತಿಗೆ ತೊಂದರೆಯಾಗಲಿದೆ. ಸಿಎಂ ಸಿದ್ದರಾಮಯ್ಯನವರು ಬಜೆಟ್ ಮಂಡಿಸುವಾಗ ಡಾ.ಬಿ.ಆರ್. ಅಂಬೇಡ್ಕರ್‌ರ ಸಂವಿಧಾನದ ಆಶಯ, ವಚನಕಾರರ ಮಾತುಗಳನ್ನು ಹೇಳಿದ್ದರು. ಆದರೆ ಈಗ ವಿವಿಗಳನ್ನು ಮುಚ್ಚಲಾಗುತ್ತಿದೆ. ಯುವಜನರಿಗೆ ಸಮಾನ ಅವಕಾಶ ದೊರೆಯಲು ಗುಣಮಟ್ಟದ ಶಿಕ್ಷಣ ನೀಡಬೇಕು. ಜಿಲ್ಲೆಗಳು ರೂಪು ಗೊಂಡು ಹಲವಾರು ವರ್ಷಗಳಾದರೂ ಅಲ್ಲಿ ಪ್ರತ್ಯೇಕ ವಿವಿಗಳಿಲ್ಲ. ಹಣ ಇಲ್ಲ ಎಂಬ ನೆಪವೊಡ್ಡಿ ವಿವಿಗಳನ್ನು ಮುಚ್ಚಲಾಗುತ್ತಿದೆ. ಬಿಜೆಪಿ ಸರ್ಕಾರದಲ್ಲಿ ವಿವಿಗಳನ್ನು ರೂಪಿಸುವಾಗ, ಹೊಸ ಹುದ್ದೆಗಳನ್ನು ಸೃಷ್ಟಿಸಿಲ್ಲ. ಇರುವ ಹುದ್ದೆಗಳನ್ನೇ ವರ್ಗಾಯಿಸಲಾಗಿದೆ ಎಂದು ವಿವರಿಸಿದರು.

ಮೈಸೂರಿನ ಎಕ್ಸಲ್ ಪ್ಲಾಂಟ್‌ಗೆ ಸಂಸದ ಯದುವೀರ್ ಭೇಟಿ

ಬೆಂಕಿ ಬಿದ್ದ ಸ್ಥಳ ಪರಿಶೀಲಿಸಿ, ಮುಂಜಾಗ್ರತೆ ವಹಿಸಲು ಸೂಚನೆ

ಮೈಸೂರು, ಫೆ.15(ಜಿಎ)–ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಎಕ್ಸೆಲ್ ಪ್ಲಾಂಟ್(ತ್ಯಾಜ್ಯ ಸಂಸ್ಕರಣ ಘಟಕ)ಗೆ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಇತ್ತೀಚೆಗೆ ಕಸದ ರಾಶಿಗೆ ಬೆಂಕಿ ಹೊತ್ತಿಕೊಂಡಿದ್ದ ಹಿನ್ನೆಲೆಯಲ್ಲಿ ಭೇಟಿ ನೀಡಿದ ಅವರು, ಪಾಲಿಕೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಈ ವೇಳೆ ಮೈಸೂರು ಮಹಾನಗರ ಪಾಲಿಕೆ (ಎಂಸಿಸಿ) ಎಇಇ ಮೋಹನ್ ಕುಮಾರ್, ಪರಿಸರ ಇಂಜಿನಿಯರ್ ಶ್ರೀದೇವಿ ಅವರು ಬೆಂಕಿ ಅವಘಡ ಮತ್ತು ಕಸ ಸಂಸ್ಕರಣೆ ಬಗ್ಗೆ ಮಾಹಿತಿ ನೀಡಿದರು.

ಮಾಹಿತಿ ಪಡೆದುಕೊಂಡ ಸಂಸದರು, ಇತ್ತೀಚೆಗೆ ಬೆಂಕಿ ಹೊತ್ತಿಕೊಂಡ ಸ್ಥಳದಿಂದ ಅಪಾಯಕಾರಿ ದುರ್ನಾತ ಬೀರುತ್ತಿರುವುದರಿಂದ ಸುತ್ತಮುತ್ತಲಿನ ನಿವಾಸಿಗಳ ಆರೋಗ್ಯದ ಮೇಲೆ ಪರಿಣಾಮ ಬೀರುವ ಸಾಧ್ಯತೆಗಳಿದ್ದು, ಮತ್ತೊಮ್ಮೆ ಬೆಂಕಿ ಕಾಣಿಸಿಕೊಂಡರೆ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಇತ್ತೀಚೆಗೆ ಇಲ್ಲಿ ಬೆಂಕಿ ಕಾಣಿಸಿಕೊಂಡಾಗ ನಾನು ಬಜೆಟ್ ಅಧಿವೇಶನದ ಹಿನ್ನೆಲೆಯಲ್ಲಿ ನವದೆಹಲಿಯಲ್ಲಿ ಇದ್ದೆ. ಮಾಧ್ಯಮಗಳ ಮೂಲಕ ಬೆಂಕಿಯ ಬಗ್ಗೆ ಮಾಹಿತಿ ತಿಳಿದುಕೊಂಡು ತಕ್ಷಣ ಜಿಲ್ಲಾಧಿಕಾರಿಗಳು ಹಾಗೂ ಪಾಲಿಕೆ ಆಯುಕ್ತರಿಗೆ ಘಟನೆ ಬಗ್ಗೆ ವರದಿ ನೀಡುವಂತೆ ತಿಳಿಸಿದ್ದೇನೆ. ಬೆಂಕಿಯನ್ನು ಸಂಪೂರ್ಣವಾಗಿ ನಂದಿಸಲಾಗಿದೆ ಎಂದರು.

ಸ್ವಚ್ಛ ನಗರಿ ಮೈಸೂರಲ್ಲಿ ಈ ರೀತಿಯ ಘಟನೆಗಳು ನಡೆದಿರುವುದು ಬೇಸರದ ಸಂಗತಿ. ಬೆಂಕಿ ಹೇಗೆ ಹೊತ್ತಿಕೊಂಡಿದೆ ಎಂದು ಯಾರಿಗೂ ಗೊತ್ತಿಲ್ಲ. ಆದರೆ, ಅಧಿಕಾರಿಗಳು ಹೇಳುವಂತೆ ಚಾಮುಂಡಿಬೆಟ್ಟದಲ್ಲಿ ಹೊತ್ತಿಕೊಂಡಿದ್ದ ಬೆಂಕಿಯ ಕಿಡಿ ಗಾಳಿಯ ರಭಸಕ್ಕೆ ಇಲ್ಲಿಗೆ ಬಂದಿರಬಹುದು ಎಂದು ತಿಳಿಸಿದ್ದಾರೆ. ಆದರೆ ಅಂತಿಮವಾಗಿ ವರದಿ ಬಂದ ನಂತರ ಸೂಕ್ತ ಕಾರಣ ತಿಳಿಯುತ್ತದೆ ಎಂದು ಅವರು ಹೇಳಿದರು.



ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಎಕ್ಸೆಲ್ ಪ್ಲಾಂಟ್(ತ್ಯಾಜ್ಯ ಸಂಸ್ಕರಣ ಘಟಕ)ಗೆ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಮೈಸೂರಿನ ಜನತೆಗೆ ಕಸದಿಂದ ಶಾಶ್ವತ ಪರಿಹಾರ ನೀಡಲು ಗುಜರಾತ್ ಮೂಲದ ಕಂಪನಿಗೆ ಟೆಂಡರ್ ನೀಡಿದ್ದು ಅವರು ದಿನಕ್ಕೆ ಎರಡು ಸಾವಿರ ಟನ್ ಕಸವನ್ನು ಸಂಸ್ಕರಣೆ ಮಾಡುತ್ತಿದ್ದಾರೆ. ಪ್ರತ್ಯೇಕವಾಗಿ 6 ಬ್ಲಾಕ್ ಮಾಡಿಕೊಂಡಿದ್ದಾರೆ. ಈವರೆಗೂ 1.5ಲಕ್ಷ ಟನ್ ಕಸ ಸಂಸ್ಕರಣೆ ಮಾಡಿದ್ದಾರೆ. ಪಾರಂಪರಿಕ ತ್ಯಾಜ್ಯವನ್ನು ತೆರವುಗೊಳಿಸುವ ಪ್ರಕ್ರಿಯೆಯನ್ನು ತ್ವರಿತಗೊಳಿಸಬೇಕು. ಆ ಕುರಿತು ಸಂಸ್ಥೆಯೊಟ್ಟಿಗೆ ಚರ್ಚಿಸಲಾಗುವುದು ಎಂದು ತಿಳಿಸಿದರು.

ಮೈಸೂರು ಮಹಾನಗರ ಪಾಲಿಕೆಯಲ್ಲಿ ಸ್ಥಳೀಯ ಪ್ರತಿನಿಧಿಗಳು ಇಲ್ಲದಿರುವುದರಿಂದ ಕಸವನ್ನು ತಡವಾಗಿ ತೆರವು ಗೊಳಿಸಲಾಗುತ್ತಿದೆ. ಪ್ರತಿನಿಧಿಗಳು ಇದ್ದರೆ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ. ಈ ಬಗ್ಗೆ ಸರ್ಕಾರದ ಗಮನಕ್ಕೆ ತರಲಾಗುವುದು ಎಂದರು.

ಸಾರ್ವಜನಿಕರ ಗಮನಕ್ಕೆ

ನಮ್ಮ ಕಕ್ಷಿದಾರರಾದ ಶ್ರೀ ಹೈದರ್ ಬೇಗ್ ಬಿನ್ ಶ್ರೀ ಮಹಬೂಬ್ ಬೇಗ್, ವಯಸ್ಸು 55 ವರ್ಷ, ವಾಸ: # 26, ಹುಡ್ಕೋ ಮುಖ್ಯ ರಸ್ತೆ, ಬನ್ನಿಮಂಟಪ, ಮಂಡಿ ಮೊಹಲ್ಲಾ, ಮೈಸೂರು ರವರ ಇರಾದೆಯ ಮೇರೆಗೆ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರು ಷೆಡ್ಯೂಲ್‌ನಲ್ಲಿ ನಮೂದು ಮಾಡಿರುವ ಸ್ವತ್ತಿಗೆ ಸಂಪೂರ್ಣ ಮಾಲೀಕರಾಗಿದ್ದು, ಅದರ ಸ್ವಾಧೀನಾನುಭವದಲ್ಲಿ ಇರುತ್ತಾರೆ.

ನಮ್ಮ ಕಕ್ಷಿದಾರರ ತಂದೆಯವರ ಅನಾರೋಗ್ಯದ ಕಾರಣದಿಂದ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಅವರು ಓಡಾಡಲು ಆಗದೆ ಇದ್ದ ಕಾರಣದಿಂದ ದಿನಾಂಕ: 05–10–2020 ರಂದು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಶ್ರೀ ಅಶ್ರಫ್ ಸಮದ್ ಬಿನ್ ಸಮದ್ ಪಿ. ಕೆ. ವಾಸ: # 132, ಎಲ್.ಐ.ಡಿ–2, ಕೆ.ಹೆಚ್.ಬಿ. ಕಾಲೋನಿ, ವಾಟರ್ ಟ್ಯಾಂಕ್ ಹತ್ತಿರ, ಕಲ್ಯಾಣಗಿರಿ, ನಜರ್‌ಬಾದ್ ಮೊಹಲ್ಲಾ, ಮೈಸೂರು ಇವರಿಗೆ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಸಾಮಾನ್ಯ ಅಧಿಕಾರ ಪತ್ರವನ್ನು ಬರೆದುಕೊಟ್ಟಿದ್ದರು. ಸದರಿ ಸಾಮಾನ್ಯ ಅಧಿಕಾರ ಪತ್ರದಲ್ಲಿ ಹೇಳಿರುವ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಸದರಿ ಸಾಮಾನ್ಯ ಅಧಿಕಾರ ಪತ್ರವು ಮೈಸೂರಿನ ಉತ್ತರ ಉಪನೋಂದಣಾಧಿಕಾರಿಯವರ ಕಛೇರಿಯ ಪುಸ್ತಕ ಸಂಖ್ಯೆ: 4. ದಸ್ತಾವೇಜು ನಂ. ಎಂ.ವೈ.ಎನ್–4–00091–2020–21. ಸಿ.ಡಿ. ನಂ. 840 ರಲ್ಲಿ ದಿನಾಂಕ: 05–10–2020 ರಂದು ನೋಂದಣಿಯಾಗಿರುತ್ತದೆ.

ಹಾಲಿ ಈಗ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಸಮರ್ಥರಾಗಿರುವುದರಿಂದ ಸದರಿ ಶ್ರೀ ಅಶ್ರಫ್ ಸಮದ್ ರವರಿಗೆ ದಿನಾಂಕ : 05–10–2020 ರಂದು ನೀಡಿದ ಸಾಮಾನ್ಯ ಅಧಿಕಾರ ಪತ್ರವನ್ನು ಸದರಿ ಶ್ರೀ ಅಶ್ರಫ್ ಸಮದ್ ರವರಿಗೆ ತಿಳುವಳಿಕೆ ಪತ್ರವನ್ನು ನೀಡುವ ಮುಖಾಂತರ ರದ್ದುಗೊಳಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರು ಯಾರು ಸಹ ಶ್ರೀ ಅಶ್ರಫ್ ಸಮದ್‌ರವರೊಂದಿಗೆ ಸಾಮಾನ್ಯ ಅಧಿಕಾರ ಪತ್ರದ ಆಧಾರದ ಮೇಲೆ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ವ್ಯವಹಾರವನ್ನು ಮಾಡಬಾರದೆಂದು ತಿಳಿಸಲಾಗುತ್ತದೆ. ಒಂದು ವೇಳೆ ಸಾಮಾನ್ಯ ಅಧಿಕಾರ ಪತ್ರವು ರದ್ದುಗೊಂಡ ನಂತರ ಯಾರಾದರೂ ಸದರಿ ಶ್ರೀ ಅಶ್ರಫ್ ಸಮದ್‌ರೊಂದಿಗೆ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ವ್ಯವಹಾರಗಳನ್ನು ಮಾಡಿದ್ದಲ್ಲಿ ಸದರಿ ವ್ಯವಹಾರವು ನಮ್ಮ ಕಕ್ಷಿದಾರರಿಗೆ ಷೆಡ್ಯೂಲ್ ಸ್ವತ್ತಿನಲ್ಲಿ ಅವರಿಗೆ ಇರುವ ಹಕ್ಕು ಹಾಗೂ ಅಧಿಕಾರವನ್ನು ಯಾವುದೇ ರೀತಿಯಲ್ಲೂ ಭಾದಿಸಲ್ಪಡುವುದಿಲ್ಲ ಹಾಗೂ ನಮ್ಮ ಕಕ್ಷಿದಾರರು ಸದರಿ ವ್ಯವಹಾರಗಳಿಗೆ ಜವಾಬ್ದಾರರಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಸಾತಗಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 60/3ರಲ್ಲಿರುವ 1 ಎಕರೆ 0.17 ಗುಂಟೆ ವಿಸ್ತೀರ್ಣದ ಜಮೀನು. ಇದು ಮೈಸೂರು ಉಪ ನೋಂದಣಾಧಿಕಾರಿಗಳ ಆದೇಶ ಸಂಖ್ಯೆ: ಎ.ಎಲ್.ಎನ್ –05/1991–92, ದಿನಾಂಕ: 08–03–1992 ರಂತೆ ಅನ್ಯಕ್ರಾಂತವಾಗಿರುತ್ತದೆ ಹಾಗೂ ಹಂಚ್ಯಾ ಗ್ರಾಮ ಪಂಚಾಯ್ತಿಯಲ್ಲಿ 170/159, ಯೂನಿಕ್ ಸಂಖ್ಯೆ: 15220043–2035020147 ದಾಖಲಾಗಿರುತ್ತದೆ. ಈ ಸ್ವತ್ತಿಗೆ ಚಕ್ಕು ಬಂದಿ: ಪೂರ್ವಕ್ಕೆ: ಯಜಮಾನ್ ಮಾದಯ್ಯ ರವರ ಸ್ವತ್ತು ; ಪಶ್ಚಿಮಕ್ಕೆ: 9 ಮೀಟರ್ ರಸ್ತೆ ; ಉತ್ತರಕ್ಕೆ: ಮನ್‌ಸೂರ್ ಅಹಮ್ಮದ್ ಖಾನ್‌ರವರ ಸ್ವತ್ತು ; ದಕ್ಷಿಣಕ್ಕೆ: ಖಾಸಗಿ ಸ್ವತ್ತು ಈ ನಡುವೆ ಇರುವ ಪೂರ್ವ ಪಶ್ಚಿಮ: 137.16 ಮೀಟರ್ ಹಾಗೂ ಉತ್ತರ ದಕ್ಷಿಣ: 42.03192 ಮೀಟರ್‌ಗಳುಳ್ಳ ಖಾಲಿ ನಿವೇಶನ ಈ ಸಾರ್ವಜನಿಕರ ಪ್ರಕಟಣೆಗೆ ಒಳಪಟ್ಟಿರುತ್ತದೆ.

Sd/- B. Venkataswamy, M.A., LL.B.
Advocate, KAR-308/1992,
#1767, Lakshmiram Complex,
Behind V.V. Market, Agrahara,
Mysuru. Mob: 9880305388

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಶ್ರೀ ಶ್ರೀ ಶಿರಡಿ ಸಾಯಿಬಾಬಾ ಮಂದಿರದ 9ನೇ ವರ್ಷದ ವಾರ್ಷಿಕೋತ್ಸವದ ಆಹ್ವಾನ ಪತ್ರಿಕೆ



ದಿನಾಂಕ: 16–02–2025 ಭಾನುವಾರ ಸಂಜೆ : 5.30 ರಿಂದ ಮಹಾಸಂಕಲ್ಪ ಗಣಪತಿಪೂಜೆ


ದಿನಾಂಕ: 17–02–2025 ಸೋಮವಾರ ಮಹಾಪೂರ್ಣಾಹುತಿ ಹಾಗೂ ಮಧ್ಯಾಹ್ನ 12.00ಕ್ಕೆ ಮಹಾಮಂಗಳಾರತಿ ನಂತರ ತೀರ್ಥಪ್ರಸಾದ

ದಿನಾಂಕ: 17–02–2025 ಮಧ್ಯಾಹ್ನ 12–00ಕ್ಕೆ **ಅನ್ನಸಂತರ್ಪಣೆ**

ಶ್ರೀಮತಿ ರುಕ್ಮಿಣಿ ಮಾದೇಗೌಡ
ಮಾಜಿ ಮಹಾಪೌರರು, ಮೈಸೂರು ಮಹಾನಗರ ಪಾಲಿಕೆ

ಶ್ರೀಮತಿ ರಜನಿ ಅಣ್ಣಯ್ಯ
ಮಾಜಿ ಸದಸ್ಯರು, ಮೈಸೂರು ಮಹಾನಗರ ಪಾಲಿಕೆ

ಹೋಟೆಲ್ ಎಂ.ಪ್ರೋ, ಚಾಮುಂಡೇಶ್ವರಿ ಡೆವಲಪರ್ಸ್, ಜಟಿಆರ್ ಬಾರ್ & ರೆಸ್ಟೋರೆಂಟ್
ಯರಗನಹಳ್ಳಿ, ಆಲನಹಳ್ಳಿ, ಮಾನಸಿನಗರ, ರಾಜ್‌ಕುಮಾರ್ ರಸ್ತೆ
ಗ್ರಾಮಸ್ಥರು ಹಾಗೂ ಭಕ್ತಾದಿಗಳು, ಮೈಸೂರು



ಶ್ರೀಮತಿ ಬಿ.ವಿ ಸುಂದರಮ್ಮ & ಶ್ರೀ ವಿ. ವೆಂಕಟೇಶ್
ಮಾಲೀಕರು, ಎಸ್.ವಿ. & ಸನ್ಸ್, ನವರಾತ್ರಿ ಬಾರ್ & ರೆಸ್ಟೋರೆಂಟ್ ಯಾದವಗಿರಿ, ಮೈಸೂರು
9845049415, 9844440796, 9900011448

4ನೇ ವರ್ಷದ ಸವಿನೆನಪು



ಸಿದ್ದು

ನೀವು ನಮ್ಮನ್ನಗಲಿ ಇಂದಿಗೆ 4 ವರ್ಷವಾಯಿತು. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ದುಃಖತಪ್ತರು:
ಅಡ್ಡ ಸಿದ್ದಯ್ಯನ ಬಸವಣ್ಣ ಮತ್ತು ಪುಟ್ಟಮ್ಮ ಕುಟುಂಬವರ್ಗದವರು, ಕೆ.ಜಿ.ಕೊಪ್ಪಲು, ಮೈಸೂರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಸಣ್ಣದೇವೇಗೌಡ

ಇವರು ದಿನಾಂಕ 06–02–2025ನೇ ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 16–02–2025ರ ಭಾನುವಾರ ಬೆಳಗ್ಗೆ 11–30 ರಿಂದ 1.30 ಗಂಟೆಗೆ ನಮ್ಮ ಸ್ವಗೃಹ, ಆಸ್ವಾಳು ಗ್ರಾಮ, ಬಿಳಿಕೆರೆ ಹೋ ಹುಣಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮೃತರ ಪತ್ನಿ ಶ್ರೀಮತಿ ಸುನಂದಮ್ಮ, ಮಕ್ಕಳು ಮತ್ತು ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ದಿ॥ ಶ್ರೀ ದೇವೇಗೌಡರ ಕುಟುಂಬವರ್ಗದವರು, ಬಂಧುಮಿತ್ರರು ಹಾಗೂ ಆಸ್ವಾಳು ಗ್ರಾಮಸ್ಥರು

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀಮತಿ ಸರೋಜಮ್ಮ ನವರು
85 ವರ್ಷ
(ಲೇಟ್ B B ರಾಜ್‌ರವರ ಧರ್ಮಪತ್ನಿ
ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ವಿಜೇತರು)

ನನ್ನ ತಾಯಿಯವರು ಇಂದು ಬೆಳಿಗ್ಗೆ 10.30 ಗಂಟೆಗೆ ನಮ್ಮ ಸ್ವಗೃಹದಲ್ಲಿ ಶಿವೈಕ್ಯರಾದರು. ಇವರ ಅಂತ್ಯಕ್ರಿಯೆಯು ದಿ: 16–02–2025 ಭಾನುವಾರ ಬೆಳಿಗ್ಗೆ 12 ಗಂಟೆಗೆ ಮೈಸೂರು ನಗರದ ಲಲಿತಾದ್ರಿಪುರದ ವೀರಶೈವ ರುದ್ರಭೂಮಿ ನಡೆಯಲಿದೆ

ದುಃಖಿಪತ್ತರು: ಬಿ. ಓಂಕಾರ್ ಪ್ರಸಾದ್
ಮಾಜಿ ಉಪ ಮೇಯರ್, ಮೈಸೂರು
94480-58262, 88848-24423

ಸೆಕ್ಯೂರ್ ಆಸ್ಪತ್ರೆಗಳು

'ಕರ್ನಾಟಕದ ಉಳಿದ ಭಾಗಗಳಲ್ಲಿ ಸೂಪರ್ ಸ್ಪೆಷಾಲಿಟಿ ಸೇವೆಗಳಲ್ಲಿ ಆರೋಗ್ಯ ಸೇವೆ ಶ್ರೇಷ್ಠತೆಗಾಗಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ'



ಸ್ಫೂರ್ತಿದಾಯಕ ಸಮಾರಂಭದಲ್ಲಿ, ಸೆಕ್ಯೂರ್ ಹಾಸ್ಪಿಟಲ್ಸ್‌ಗೆ ಕರ್ನಾಟಕದ ಉಳಿದ ಭಾಗಗಳಿಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಶ್ರೇಷ್ಠತೆಯ ಪ್ರತಿಷ್ಠಿತ ಪ್ರಶಸ್ತಿಯನ್ನು ನೀಡಲಾಯಿತು. ಈ ಪುರಸ್ಕಾರವು ವಿವಿಧ ಸೂಪರ್–ಸ್ಪೆಷಾಲಿಟಿ ವಿಭಾಗಗಳಲ್ಲಿ ವಿಶ್ವ ದರ್ಜೆಯ ಆರೋಗ್ಯ ಮತ್ತು ಪ್ರವರ್ತಕ ಚಿಕಿತ್ಸೆಗಳನ್ನು ಒದಗಿಸಲು ಸೆಕ್ಯೂರ್ ಆಸ್ಪತ್ರೆಗಳ ಸಮರ್ಪಣೆಯನ್ನು ಎತ್ತಿ ತೋರಿಸುತ್ತದೆ.

ಈ ಪ್ರಶಸ್ತಿಯನ್ನು ಕರ್ನಾಟಕದ ಆರೋಗ್ಯ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್ ಅವರು ಪ್ರದಾನ ಮಾಡಿದರು.

ಆರೋಗ್ಯ ಮತ್ತು ಶಿಕ್ಷಣ ಸಚಿವರಾದ ಡಾ.ಶರಣಪ್ರಕಾಶ ರುದ್ರಪ್ಪ ಪಾಟೀಲ್, ಮಣಿಪಾಲ ಆಸ್ಪತ್ರೆಗಳ ಅಧ್ಯಕ್ಷ ಡಾ.ಸುದರ್ಶನ ಬಲ್ಲಾಳ್, ಚಿತ್ರನಟ ಶ್ರೀ ರಮೇಶ್ ಅರವಿಂದ್, ವಿಜಯ ಕರ್ನಾಟಕ ಪತ್ರಿಕೆಯ ಸಂಪಾದಕ ಸುದರ್ಶನ್ ಚನ್ನಂಗಿಹಳ್ಳಿ ಇವರೊಂದಿಗೆ ಉಪಸ್ಥಿತರಿದ್ದರು.

ಸೆಕ್ಯೂರ್ ಹಾಸ್ಪಿಟಲ್ಸ್ ತನ್ನ ಅತ್ಯಾಧುನಿಕ ತಂತ್ರಜ್ಞಾನ, ಹೆಚ್ಚು ನುರಿತ ವೈದ್ಯಕೀಯ ವೃತ್ತಿಪರರು ಮತ್ತು ಸಹಾನುಭೂತಿಯ ರೋಗಿಗಳ ಆರೈಕೆಯೊಂದಿಗೆ ಸೂಪರ್–ಸ್ಪೆಷಾಲಿಟಿ ಆರೈಕೆಯಲ್ಲಿ ಸ್ಥಿರವಾಗಿ ಹೊಸ ಮಾನದಂಡಗಳನ್ನು ಹೊಂದಿಸಿದೆ. ಶ್ರೇಷ್ಠತೆ ಮತ್ತು ನಿರಂತರ ಆವಿಷ್ಕಾರಕ್ಕೆ ಅವರ ಬದ್ಧತೆ ಅವರನ್ನು ಆರೋಗ್ಯ ಕ್ಷೇತ್ರದಲ್ಲಿ ನಾಯಕರನ್ನಾಗಿ ಮಾಡಿದೆ.

ಸಮಾರಂಭದಲ್ಲಿ, ಸೆಕ್ಯೂರ್ ಆಸ್ಪತ್ರೆಗಳ ಪ್ರತಿನಿಧಿಗಳು ಈ ಸಾಧನೆಯನ್ನು ಮಾಡಲು ಕಾರಣರಾದ ವೈದ್ಯರು, ದಾದಿಯರು ಮತ್ತು ಸಿಬ್ಬಂದಿಗಳ ಸಮರ್ಪಿತ ತಂಡಕ್ಕೆ ಕೃತಜ್ಞತೆ ಸಲ್ಲಿಸಿದರು. ಉನ್ನತ ದರ್ಜೆಯ ಆರೋಗ್ಯ ಸೇವೆಗಳನ್ನು ಒದಗಿಸುವುದನ್ನು ಮುಂದುವರಿಸಲು ಮತ್ತು ರೋಗಿಗಳ ಫಲಿತಾಂಶಗಳನ್ನು ಸುಧಾರಿಸಲು ಅವರು ತಮ್ಮ ಧ್ಯೇಯವನ್ನು ಪುನರುಚ್ಚರಿಸಿದರು.

ಈ ಮನ್ನಣೆಯು ಸೆಕ್ಯೂರ್ ಆಸ್ಪತ್ರೆಗಳ ಶ್ರೇಷ್ಠತೆಯ ಅಚಲ ಅನ್ವೇಷಣೆಗೆ ಮತ್ತು ಸಮುದಾಯದ ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ಅವರ ಮಹತ್ವದ ಕೊಡುಗೆಗಳಿಗೆ ಸಾಕ್ಷಿಯಾಗಿದೆ.

ನಮ್ಮ ಆಸ್ಪತ್ರೆಗಳು: ಹುಬ್ಬಳ್ಳಿ । ಮೈಸೂರು । ಚಿಕ್ಕಮಂಗಳೂರು । ಗದಗ । ಕೊಪ್ಪಳ
ಸಂದರ್ಶನ ಮತ್ತು ಮಾಹಿತಿಗಾಗಿ: 91 9611364968 www.securehospital.in